
ಸಂಪುಟ 22 ಸಂಚಿಕೆ 27
ಜುಲೈ 2, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ



ಸಾಲದ ಬಲೆಯಲ್ಲಿ ರೈತ

ಮಂಡ್ಯದಲ್ಲಿ ಬಯಲಾದ ಜೀತ ಪದ್ಧತಿ

ಜಮ್ಮು-ಕಾಶ್ಮೀರ ಸ್ವಾಯತ್ತತೆ

ಕರ್ನಾಟಕ ಒಡೆಯಲು ಬಿಜೆಪಿ ಹುನ್ನಾರ

ಇನ್ನೂ ಜೀವಂತವಿರುವ ಅಮಾನುಷ ಜೀತಪದ್ಧತಿ

ಸಂಪಾದಕೀಯ

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಹಂಗರಹಳ್ಳಿ ಬೆಟ್ಟದಲ್ಲಿ ಜೀತದಾಳುಗಳಾಗಿ, ಕಾಲಿಗೆ ಕಬ್ಬಿಣದ ಸರಪಣಿ ಬಿಗಿಸಿಕೊಂಡು ವೇದನೆಯಲ್ಲಿ ದುಡಿಯುತ್ತಿದ್ದ ಕಾರ್ಮಿಕರ ದುರಂತ ಬದುಕಿನ ಕಥೆ ಮನುಷ್ಯತ್ವ ಇರುವ ಎಲ್ಲರನ್ನು ನಡುಗಿಸುವಂತಹದ್ದು. ಇದೊಂದು ಅಮಾನವೀಯ, ಪೈಶಾಚಿಕ ಬರ್ಬರ ಘಟನೆ. ಇಡೀ ರಾಜ್ಯದ ಜನತೆ ತಲೆತಗ್ಗಿಸಬೇಕಾದ ಸಂಗತಿ.

ಮಂಡ್ಯ ಜಿಲ್ಲೆ ಮುಖ್ಯಮಂತ್ರಿಗಳ ತವರು. ಹಂಗರಹಳ್ಳಿ ಮತ್ತು ಶ್ರೀರಂಗಪಟ್ಟಣದ ನಡುವಿನ ದೂರ ಕೇವಲ ಹತ್ತು ಕಿ.ಮಿ. ವಿಖ್ಯಾತ ಮೈಸೂರಿನ ಪಕ್ಕದಲ್ಲೇ. ಹಂಗರಹಳ್ಳಿ ಬೆಟ್ಟದಲ್ಲಿ ಕಲ್ಲಿನ ಕ್ವಾರಿಯಲ್ಲಿ ಕಳೆದ ಐದು ವರ್ಷಗಳಿಂದ ಐವರು ಕಾರ್ಮಿಕರು, ಅವರ ಕುಟುಂಬಗಳು ನರಕಯಾತನೆ ಅನುಭವಿಸಿ, ದುಡಿಯುತ್ತಲೇ ಬಂದಿದ್ದಾರೆ. ಕ್ವಾರಿಯ 'ಮಾಲೀಕ' ಪುಟ್ಟಸ್ವಾಮಿ ಗೌಡ ಈ ಕೂಲಿಯಾಳುಗಳಿಗೆ ಸಾಲ ನೀಡಿದ್ದು ಎರಡು ಸಾವಿರ ರೂಪಾಯಿಗಳು. ಅದೂ ಕೆಲಸ ನೀಡದೇ, ಸತಾಯಿಸಿ ಕೂಲಿಕಾರರು ಉಪವಾಸ ಇದ್ದಾಗ ಅವರ ಅಸಹಾಯಕತೆಯನ್ನು ದುರ್ಬಳಸಿ ಅಷ್ಟಿಷ್ಟು ಹಣ ನೀಡಿ, ಅವರನ್ನು ಸಾಲದ ಗುಲಾಮರನ್ನಾಗಿಸಿ ಕೊನೆಗೆ ಕಾಲುಗಳಿಗೆ ಕಬ್ಬಿಣದ ಸರಪಳಿ ಹಾಕಿ ಬಂಧನದಲ್ಲಿಟ್ಟು ದುಡಿಸಿಕೊಳ್ಳತೊಡಗಿದ್ದಾನೆ. ಮಕ್ಕಳು, ಹೆಂಡತಿ, ಕುಟುಂಬದವರೊಂದಿಗೂ ಮಾತನಾಡಲು, ಬಾಳಲು ಅವಕಾಶಗಳನ್ನೇ ನೀಡದೆ ಕೈಗಳಿಗೂ ಕೋಳ ಹಾಕಿ ಹಿಂಸಿಸಿದ್ದಾರೆ. ದುಡಿತಕ್ಕೆ ಕೂಲಿ ನೀಡದೇ, ಕೂಲಿ ಕೇಳಿದರೆ ಬೆದರಿಸಿ ಕೊಟ್ಟ ಸಾಲವನ್ನೇ ಹತ್ತಾರು ಸಾವಿರಕ್ಕೆ ಬೆಳೆಸಿ ಸುಲಿಗೆ ನಡೆಸುತ್ತಲೇ ಬಂದಿದ್ದಾರೆ. ಜೀತ ವಿಮುಕ್ತಿ ಕಾನೂನು, ಕಾರ್ಮಿಕ ಕಾಯ್ದೆಗಳು ಪುಟ್ಟಸ್ವಾಮಿಗೌಡರಂಥವರಿಗೆ ಕಾಲು ಕಸಕ್ಕಿಂತಲೂ ಕಡೆಯಾಗಿವೆ. ಮೈಸೂರಿನ ಮಾಜಿ ನಗರ ಸಭಾ ಸದಸ್ಯರಾಗಿದ್ದು ಈ ಕಿರಾತಕನಿಗೆ ಈ ಕಾನೂನುಗಳ ಬಗ್ಗೆ ಕಿಂಚಿತ್ತೂ ಅಳುಕಿಲ್ಲ.



ಜೀತಗಾರರ ಕಾಲಿಗೆ ತೊಡಿಸಿರುವ ಭಾರೀ ಗಾತ್ರದ ಸರಪಳಿ

ಕೂಲಿಯವರು ಹಣ ಪಡೆದು ಓಡುವವರೆಂದು ಸಮರ್ಥಿಸಿ ಕೊಳ್ಳಲು ಮುಂತಾಗಿದ್ದಾನೆ! ಇಂತಹವರ ಕುಕೃತ್ಯಗಳಿಗೆ ರಾಜಕೀಯ ಆಶ್ರಯ, ಅಧಿಕಾರಶಾಹಿಗಳ ಭ್ರಷ್ಟ ಶಾಮೀಲು, ಸಮ್ಮತಿಯಂತೂ ಇದ್ದೇ ಇದೆ. ಘಟನೆ ಬಯಲಿಗೆ ಬಂದಕೂಡಲೇ ಮಾಲೀಕನು ಯಥಾ ರೀತಿ ತಪ್ಪಿಸಿಕೊಂಡಿದ್ದಾನೆ ಅಥವಾ ತಪ್ಪಿಸಲಾಗಿದೆ.

ಈ ಜೀತದಾಳು ಕೂಲಿಗಳನ್ನು ಆ ನರಕದಿಂದ ಪಾರು ಮಾಡಿ, ಜನರ ಎದುರು ಯಾತನೆಗಳನ್ನು ಬಿಡಿಸಿಟ್ಟ ರಾಜ್ಯ ರೈತ ಸಂಘದ ಕಾರ್ಯಕರ್ತರು ಅಭಿನಂದನಾರ್ಹರು. ಇದು ಬಯಲಿಗೆ ಬಂದ ಒಂದು ಘಟನೆ ಮಾತ್ರ ಎಂಬುದನ್ನು ಮರೆಯುವಂತಿಲ್ಲ. ಕರ್ನಾಟಕದೊಳಗೆ ಮತ್ತು ದೇಶದ ಅನೇಕ ಕಡೆ ದುರ್ಬಲರು, ದಲಿತರು ಸದಾ ಇಂತಹ ಕ್ರೌರ್ಯ, ಶೋಷಣೆಯಲ್ಲಿ ನಲುಗುತ್ತಿರುವ ದೃಶ್ಯ ಅಗಣಿತ. ಇಲ್ಲಿ ಪುಟ್ಟಸ್ವಾಮಿಗೌಡನಾಗಿದ್ದರೆ ಉಳಿದೆಡೆ ದೊಡ್ಡ ಭೂಮಾಲಕರು, ಪಾಳೇಗಾರಿ ಪ್ರಭುಗಳು ಈಗಲೂ ಕಬ್ಬಿಣದ ಗಣಿಗಳಲ್ಲಿ, ಫಾರಂಗಳಲ್ಲಿ


ಪುಟ 5 ಕ್ಕೆ

ಕಳೆದ ಸಂಚಿಕೆಯಲ್ಲಿ ತಮ್ಮ ಮಾಸ್ಕೋ ಪ್ರವಾಸ ಹಾಗೂ ಅಮೃತಸರದಲ್ಲಿ ನಡೆದ ಪಕ್ಷದ ಮಹಾಧಿವೇಶನದ ಬಗ್ಗೆ ಬರೆದ ಕಾಂ. ಬಸು ಅವರು ಈ ಸಂಚಿಕೆಯಲ್ಲಿ ವಿಯೆಟ್ನಾಂನ ವೀರಯೋಧ ಮಹಾನ್ ನಾಯಕ ಹೊಚಿಮಿನ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭವನ್ನು ನೆನಪಿಸಿಕೊಂಡಿದ್ದಾರೆ ಹಾಗೂ ಆ ದಿನಗಳಲ್ಲಿ ಕಲ್ಕತ್ತಾದಲ್ಲಿನ ಕೊಳಗೇರಿ ನಿವಾಸಿಗಳ ಪುನರ್‌ವಸತಿಗಾಗಿ ನಡೆಸಿದ ಹೋರಾಟವನ್ನು ಈ ಸಂಚಿಕೆಯಲ್ಲಿ ವಿವರಿಸಿದ್ದಾರೆ

ಸ್ಫೂರ್ತಿ ತುಂಬಿದ ಹೊಚಿಮಿನ್ ಭೇಟಿ

ವಿಯೆಟ್ನಾಮ್‌ನ ಮಹಾನ್ ನಾಯಕ ಹೊಚಿಮಿನ್ ಭಾರತಕ್ಕೆ ಬಂದರು. ಈ ಸಾಮ್ರಾಜ್ಯಶಾಹಿ ವಿರೋಧಿ ನಿರ್ಭೀತ ಹೋರಾಟಗಾರ ಮತ್ತು ಕ್ರಾಂತಿಕಾರಿ ತನ್ನ ದೇಶದ ಜನತೆಯ ವಿಮೋಚನೆಗಾಗಿ ಜೀವನವನ್ನೇ ಮುಡಿಪಿಟ್ಟಿದ್ದರು. ಅವರ ಆಗಮನ ಕಲ್ಕತ್ತದಲ್ಲಿನ ಚಳುವಳಿಗೆ ಹೊಸ ಸ್ಫೂರ್ತಿಯ ಚಿಲುಮೆ ಯಾಯಿತು. ಎಲ್ಲೆಡೆ ಭಿತ್ತಿಪತ್ರ ಹಚ್ಚಲಾಯಿತು, ವಿಯೆಟ್ನಾಂ ಪರ ಘೋಷಣೆಗಳು ಮೊಳಗಿದವು. ಹೊಚಿಮಿನ್ ಅವರನ್ನು ಸೂಕ್ತವಾಗಿ ಸನ್ಮಾನಿಸಲು ನಮ್ಮ ಪಕ್ಷ ನಿರ್ಧರಿಸಿತು.

'ಈ ಸಾಮ್ರಾಜ್ಯವಾದ ವಿರೋಧಿ ದಿಟ್ಟ ಸೇನಾನಿ ಮತ್ತು ಏಷ್ಯಾದ ಸ್ವಾತಂತ್ರ್ಯ ಹಾಗೂ ವಿಶ್ವಶಾಂತಿಯ ಪ್ರತಿಪಾದಕ ಮಹಾನ್ ಹೋಚಿಮಿನ್-ಈಗ ನಮ್ಮ ಗೌರವಾನ್ವಿತ ಅತಿಥಿ. ಅವರನ್ನು ಯೋಗ್ಯ ರೀತಿಯಲ್ಲಿ ಗೌರವಿಸುವುದು ರಾಜ್ಯ ಸರಕಾರ ಮತ್ತು ಜನತೆಯ ಕರ್ತವ್ಯವಾಗಿದೆ" ಎಂದು ಪಕ್ಷದ ಪ್ರಾಂತೀಯ ಸಮಿತಿಯ ಹೇಳಿಕೆ ತಿಳಿಸಿತು. ಬಿಪಿಟಿಯುಸಿ ಮತ್ತು ಇತರ ಸಂಘಟನೆಗಳು ಕೂಡ ಹೋಗೆ ಭವ್ಯ ಸ್ವಾಗತ ನೀಡಲು ಮನವಿ ಮಾಡಿದವು.



ಹೊಚಿಮಿನ್

1958 ಫೆಬ್ರವರಿ 12 ರಂದು ಹೋ ಕಲ್ಕತ್ತ ತಲುಪಿದರು. ವಿಧಾನಸಭೆಯ ಪ್ರತಿಪಕ್ಷ ನಾಯಕ ಬಂಕಿಮ್ ಮುಖರ್ಜಿ ಮೊದಲಾದವರು ವಿಮಾನನಿಲ್ದಾಣಕ್ಕೆ ತೆರಳಿ ಧೀರ ಹೋರಾಟಗಾರರನ್ನು ಬರಮಾಡಿಕೊಂಡರು. 1947 ರಲ್ಲಿ ವಿಯೆಟ್ನಾಂ ದಿನದ ಸಂದರ್ಭದಲ್ಲಿ ಬಂಧಿತರಾಗಿದ್ದ ಕಾಮ್ರೇಡ್ ರಣಮಿತ್ರ ಸೇನ್ ಅವರನ್ನು ಭೇಟಿ ಮಾಡಲು ಹೋ 'ಸ್ವಾಧೀನತಾ' ಕಚೇರಿಗೆ ಬಂದರು. ಅವರಿಗೆ ಭವ್ಯ ಸ್ವಾಗತ ನೀಡಲಾಯಿತು.

ಜೋಪಡಿ ನಾಶಕ್ಕೆ ಮುಂದಾದ ಸರ್ಕಾರ

ಆ ಸಮಯದಲ್ಲಿ, ರಾಜ್ಯದಲ್ಲಿನ ಎಲ್ಲಾ ಜೋಪಡಿಗಳನ್ನು ನಾಶ ಮಾಡುವ ಬಗ್ಗೆ ಪಶ್ಚಿಮ ಬಂಗಾಳ ಸರಕಾರ ಒಂದು ಮಸೂದೆ ತಂದಿತು. ಸಹಜವಾಗಿಯೇ ಇದರಿಂದ ಜೋಪಡಿ ವಾಸಿಗಳಿಗೆ ಅನಾನೂಕೂಲವಾಯಿತು. ಇನ್ನಷ್ಟು ಜನರು ವಸತಿ ಹೀನರಾಗುತ್ತಾರೆಂಬ ಭಯ ಉಂಟಾಯಿತು. ನಗರದ ಸುಂದರೀಕರಣವೆಂದರೆ ಜೋಪಡಿಗಳ ನಾಶ ಮಾತ್ರವೇ ಅಲ್ಲ; ಲಕ್ಷಾಂತರ ಜನರು ವಸತಿಹೀನರೂ ಆಗುತ್ತಾರೆ. ಜೋಪಡಿಗಳ ಮಾಲಿಕರಿಗೆ ಪರಿಹಾರವೇನೋ ಕೊಡಲಾಗುತ್ತಿತ್ತು.

1958 ಮಾರ್ಚ್ 4 ರಂದು ರಣೇನ್ ಸೇನ್ ಈ ಮಸೂದೆಯನ್ನು ವಿರೋಧಿಸಿದರು. ಮಸೂದೆಯನ್ನು ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಬೇಕೆಂದು ಒತ್ತಾಯಿಸಿದರು. ಒಂದು ಮಹತ್ವದ ತಿದ್ದುಪಡಿಯನ್ನು ಸೇರಿಸಬೇಕೆಂದೂ ಆಗ್ರಹ ಪಡಿಸಿದರು.


ಜೋಪಡಿ ವಾಸಿಗಳ ಜೀವನವನ್ನು ಸುಧಾರಿಸುವುದು ಮುಖ್ಯ. ಅವರನ್ನು ತೆರವುಗೊಳಿಸುವುದರಿಂದಷ್ಟೇ ಸಮಸ್ಯೆ ಪರಿಹಾರವಾಗದು. ಆದರೆ ಜೋಪಡಿ ವಾಸಿಗಳನ್ನು ಹೊರಹಾಕುವುದೇ ಸರಕಾರದ ಉದ್ದೇಶವಾಗಿತ್ತು. ಕಲ್ಕತ್ತವನ್ನು ಸುಂದರೀಕರಣಗೊಳಿಸುವುದಕ್ಕೆ ಕಮ್ಯುನಿಸ್ಟ್ ಪಕ್ಷದ ವಿರೋಧ ವೇನೂ ಇಲ್ಲ, ಆದರೆ ಕೊಳೆಗೇರಿಗಳ ನಿವಾಸಿಗಳ ಪುನರ್ ವಸತಿಗೆ ಯಾವುದೇ ಕ್ರಮ ಇಲ್ಲವಲ್ಲಾ ಎಂದು ರಣೇನ್ ಸೇನ್ ಹೇಳಿದರು. ಪ್ರಸ್ತಾವಿತ ಮಸೂದೆಯಲ್ಲಿ ಪುನರ್‌ವಸತಿ ಕುರಿತು ಚಕಾರ ಶಬ್ದವೂ ಇರಲಿಲ್ಲ.

ರಣೇನ್ ಸೇನ್ ವಿಧಾನಸಭೆಯಲ್ಲಿ ಭಾಷಣ ಮಾಡಿದ ದಿನ ಹೊರಗಡೆ ಸುಮಾರು ಹತ್ತು ಸಾವಿರ ಕೊಳಗೇರಿ ವಾಸಿಗಳು ಪ್ರದರ್ಶನ ನಡೆಸಿದರು. ಅವರಿದ್ದಲ್ಲಿಗೆ ಹೋಗಿ ಭೇಟಿ ಮಾಡುವಂತೆ ಸ್ವಯಂಮಾಡಳಿತ ಖಾತೆ ಸಚಿವ ಈಶ್ವರ ದಾಸ್ ಜಲಾನ್‌ರಿಗೆ ನಾನು ಸೂಚಿಸಿದೆ. ಜನರು ತಮ್ಮ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ. ಇಂಥ ವೇಳೆಯಲ್ಲಿ ಮುಖ್ಯಮಂತ್ರಿಯೇ ಅವರನ್ನು ಭೇಟಿ ಮಾಡಿದರೆ ಒಳ್ಳೆಯದು ಎಂದೂ ನಾನು ಹೇಳಿದೆ.

ಬಂಕಿಮ್ ಮುಖರ್ಜಿ, ಸುಧೀರ್ ರಾಯ್ ಚೌಧರಿ, ಹೇಮಂತ್ ಬೋಸ್ ಮತ್ತಿತರರು ನನ್ನನ್ನು ಬೆಂಬಲಿಸಿದರು. ಆದರೆ ಹಠಾತ್ತನೆ ಎದ್ದು ನಿಂತ ಮುಖ್ಯಮಂತ್ರಿ 'ಸ್ಥಾಪಿತ ಹಿತಾಸಕ್ತರಿಂದ ಪ್ರಚೋದಿತರಾಗಿ ಇಲ್ಲಿಗೆ ಬಂದಿರುವ ಪ್ರದರ್ಶನಕಾರರನ್ನು ಭೇಟಿ ಮಾಡುವ ಅಗತ್ಯವೇನೂ ಇಲ್ಲ' ಎಂದು ಹೇಳಿದರು. ಈ ಮಾತು ನಮ್ಮನ್ನು ಕೆರಳಿಸಿತು. ಅಂತಿಮವಾಗಿ, ರೈಟರ್ಸ್ ಬಿಲ್ಡಿಂಗ್‌ನಲ್ಲಿ ಕೊಳಗೇರಿ ನಿವಾಸಿಗಳ ನಿಯೋಗವೊಂದನ್ನು ಭೇಟಿ ಮಾಡಲು ಡಾ|| ರಾಯ್ ಒಪ್ಪಿಕೊಂಡರು.

ನಮ್ಮ ಪಕ್ಷದ ಡಾ|| ನಾರಾಯಣ ರಾಯ್, ಬಂಕಿಮ್ ಮುಖರ್ಜಿ ಮತ್ತು ಗಣೇಶ್ ಘೋಷ್ ಕೂಡ ಈ ಮಸೂದೆಯನ್ನು ವಿರೋಧಿಸಿ ಅಸೆಂಬ್ಲಿಯಲ್ಲಿ ಪರಿಣಾಮಕಾರಿ ಭಾಷಣ ಮಾಡಿದರು.

ಕೊಳಗೇರಿಗಳ ಸುಧಾರಣೆಗೆ ಸರಕಾರದ ಜತೆ ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳು ಕೂಡ ಕೆಲಸ ಮಾಡಬೇಕು ಎಂದು ಡಾ. ನಾರಾಯಣ ರಾಯ್‌ಸಲಹೆ ಮಾಡಿದರು. ಕೊಳಗೇರಿಗಳಿಗೆ ಗರಿಷ್ಟ ಪ್ರಮಾಣದಲ್ಲಿ ನೀರು, ವಿದ್ಯುತ್ ಸರಬರಾಜು ಮಾಡಬೇಕು ಹಾಗೂ ಪಾಯಿಖಾನೆ ಮತ್ತು ಬಚ್ಚಲು ಮನೆಗಳನ್ನು ನಿರ್ಮಿಸಬೇಕು



ಎಂದು ಪ್ರತಿಪಕ್ಷ ಸಲಹೆ ಮಾಡಿತು.

ಆಹಾರ ಬಿಕ್ಕಟ್ಟು ಅಪಾಯಕಾರಿ ಹಂತವನ್ನು ತಲುಪುತ್ತಿತ್ತು. ಕೊಯ್ಲಿನ ನಂತರ ಆಹಾರಧಾನ್ಯಗಳ ಸರಬರಾಜಿನಲ್ಲಿ ತೀರಾ ಕೊರತೆ ಉಂಟಾಯಿತು. ಇಡೀ ರಾಜ್ಯ ಬರಗಾಲದಿಂದ ನಲುಗುತ್ತಿತ್ತು. ಹಸಿವಿನಿಂದ ಕಂಗಾಲಾದ ಜನರು ತಮ್ಮಲ್ಲಿದ್ದ ಎಲ್ಲವನ್ನು ಮಾರಾಟ ಮಾಡುತ್ತಿದ್ದರು. ಸರಕಾರ ಆಹಾರಧಾನ್ಯಗಳ ಪಡಿತರ ಮಾಡಬೇಕು ಹಾಗೂ ಕೇಂದ್ರ ಸರ್ಕಾರ ಹೆಚ್ಚು ಅಕ್ಕಿ ಮತ್ತು ಗೋಧಿಯನ್ನು ಸರಬರಾಜು ಮಾಡಬೇಕು, ಸುಧಾರಿತ ನ್ಯಾಯಬೆಲೆ ಅಂಗಡಿಗಳನ್ನು ಸ್ಥಾಪಿಸಬೇಕು ಎಂದು ನಾವು ಒತ್ತಾಯಿಸಿದೆವು. ಆದರೆ ಸರಕಾರ ನಮ್ಮ ಕೇಳಿಕೆಗಳಿಗೆ ಕಿವಿಗೊಡಲಿಲ್ಲ.

ಮತ್ತೆ ಚಳುವಳಿ ಮಾರ್ಗ

ಇಂಥ ಸನ್ನಿವೇಶದಲ್ಲಿ ಸಾಮೂಹಿಕ ಚಳುವಳಿ ಬಿಟ್ಟರೆ ಬೇರೆ ದಾರಿಯೇ ಇರಲಿಲ್ಲ. ಮಾರ್ಚ್ ತಿಂಗಳಲ್ಲಿ ಕಲ್ಕತ್ತದಲ್ಲಿ ರಾಜ್ಯಮಟ್ಟದ ಆಹಾರ ಸಮಾವೇಶವನ್ನು ನಡೆಸಿದೆವು. ಪ್ರಾಂತೀಯ ಕೃಷಿಕ್ ಸಭಾ ವ್ಯವಸ್ಥೆಗೊಳಿಸಿದ್ದ ಈ ಸಮಾವೇಶದಲ್ಲಿ 185 ಪ್ರತಿನಿಧಿಗಳು ಮತ್ತು ಪಕ್ಷಗಳು ಹಾಗೂ 70 ವಿಶೇಷ ಆಹ್ವಾನಿತರು ಪಾಲ್ಗೊಂಡರು. ಭವಾನಿ ಸೇನ್ ಅಧ್ಯಕ್ಷತೆ ವಹಿಸಿದ್ದರು.

ಪ್ರಾಂತೀಯ ಕೃಷಿಕ್ ಸಭಾದ ಕಾರ್ಯದರ್ಶಿ ಹರೇಕೃಷ್ಣ ಕೋನಾರ್ ಮಹತ್ವದ ಹಾಗೂ ಬೋಧಪ್ರದ ಭಾಷಣ ಮಾಡಿದರು. ಆಹಾರ ಸರಬರಾಜು ಮತ್ತು ಪರಿಹಾರ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಕೈಗೊಳ್ಳಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರಕಾರವನ್ನು ಒತ್ತಾಯಿಸುವ ಬೇಡಿಕೆ ಪಟ್ಟಿಯನ್ನು ಸಮಾವೇಶ ಅಂಗೀಕರಿಸಿತು.

ಆಹಾರ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ರ್‍ಯಾಲಿಗಳು ಮತ್ತು ಸಭೆಗಳು ಪುನಃ ಆರಂಭವಾದವು. ಸತ್ಯಾಗ್ರಹ, ಉಪವಾಸ ಸತ್ಯಾಗ್ರಹಗಳೂ ನಡೆದವೂ. ಈ ಸಂಬಂಧದ ಮೂರು ಕಾರ್ಯಕ್ರಮಗಳು ಇನ್ನೂ ನನಗೆ ನೆನಪಿದೆ.

1958 ಮೇ 3 ರಂದು ಕೃಷ್ಣ ನಗರ್‌ನಲ್ಲಿ 7000 ಜನರು ಹಸಿವು ರ್‍ಯಾಲಿಯಲ್ಲಿ ಪಾಲ್ಗೊಂಡರು. ಅದೇ ವರ್ಷ ಜೂನ್ 4 ರಂದು ಪಶ್ಚಿಮ ಬಂಗಾಳ ಮಹಿಳಾ ಸಮಿತಿ ನೇತೃತ್ವದಲ್ಲಿ 16 ಮಹಿಳಾ ಸಂಘಟನೆಗಳ ಕಾರ್ಯಕರ್ತರು ಅಸೆಂಬ್ಲಿ ಕಟ್ಟಡದತ್ತ ಬೃಹತ್ ಮೆರವಣಿಗೆ ಆರಂಭಿಸಿದರು. ಜೂನ್ 6 ರಂದು ಈ ಮೆರವಣಿಗೆ / ಬೃಹತ್ ರ್‍ಯಾಲಿಯಾಗಿ ಪರಿವರ್ತನೆಗೊಂಡು ಅಸೆಂಬ್ಲಿ ಕಟ್ಟಡದ ಬಳಿ ಪ್ರದರ್ಶನ ನಡೆಸಲಾಯಿತು.

ಪಶ್ಚಿಮ ಬಂಗಾಳ ವಿಧಾನಪರಿಷತ್ತಿಗೆ 1958 ರ ಮಧ್ಯಭಾಗದಲ್ಲಿ ಚುನಾವಣೆ ನಡೆಯಿತು. ಕಮ್ಯುನಿಸ್ಟ್ ಪಕ್ಷದ ಅಬ್ದುಲ್ ಹಲೀಂ, ಸ್ನೇಹಾಂಗ್ಶು, ಆಚಾರ್ಯ, ಸೈಯದ್ ರಹಿದುಲ್ಲಾ ಮತ್ತು ಜಾನಕಿ ವಲ್ಲಭ ಭಟ್ಟಾಚಾರ್ಯ ಅವರ ಆಯ್ಕೆಯೊಂದಿಗೆ ಪರಿಷತ್ತನಲ್ಲಿ ಪ್ರತಿಪಕ್ಷದ ಬಲ 10 ರಿಂದ 22 ಕ್ಕೆ ಏರಿತು.

(ಮುಂದುವರಿಯುವುದು)

ಕರ್ನಾಟಕವನ್ನು ವಿಭಜಿಸಲು ಹಾತೊರೆಯುತ್ತಿರುವ ಬಿಜೆಪಿ

ಉತ್ತರ ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಪೀಠ ಸ್ಥಾಪನೆ ಸಾಧುವಲ್ಲವೆಂಬ ಐದು ನ್ಯಾಯಮೂರ್ತಿಗಳ ವರದಿ ಹಿನ್ನೆಲೆಯಲ್ಲಿ ಹುಬ್ಬಳ್ಳಿ-ಧಾರವಾಡ, ವಿಜಾಪುರ, ಗುಲ್ಬರ್ಗ, ಬೆಳಗಾಂ ಜಿಲ್ಲೆಗಳಲ್ಲಿ ಚಳುವಳಿ ನಡೆದಿದೆ. ಮುಖ್ಯವಾಗಿ ಒಟ್ಟು ಚಳುವಳಿ ಗಮನ ಸೆಳೆದಿರುವುದು ಹುಬ್ಬಳ್ಳಿ- ಧಾರವಾಡದಲ್ಲೇ.

ಬದಲಾದ ಬೇಡಿಕೆ

ಪ್ರತ್ಯೇಕರಾಜ್ಯದ ಘೋಷಣೆ

ಆರಂಭದಲ್ಲಿ ಪ್ರತಿಭಟನಾ ಮೆರವಣಿಗೆ, ಧರಣಿ, ರಸ್ತಾರೋಕೋ, ಕೋರ್ಟ್‌ಗೆ ಬೆಂಕಿ, ಬಂದ್, ನ್ಯಾಯಧೀಶರಿಗೆ ತಡೆ, ಕೆಲವು ಶಾಸಕರ ರಾಜಿನಾಮೆ ನಾಟಕ, ಇದು ಮುಂದುವರೆದು ಪ್ರತ್ಯೇಕ ರಾಜ್ಯದ ಬಾವುಟ ಹಾರಿಸುವವರೆಗೂ ಹೋಗಿದೆ. ಧಾರವಾಡದ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರತ್ಯೇಕ ಧ್ವಜಾರೋಹಣ ಮಾಡಿದ ಹಿರಿಯ ವಕೀಲರಾದ ಸಯ್ಯದ್, ವಕೀಲರ ಸಂಘದ ಅಧ್ಯಕ್ಷ ಬಿ.ಡಿ.ಹಿರೇಮಠ್ ರವರು "ಉತ್ತರ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಿದೆಯೆಂದೂ ಮೈಸೂರು ರಾಜ್ಯದ ಸಚಿವರು ಉತ್ತರ ಕರ್ನಾಟಕ ರಾಜ್ಯದಲ್ಲಿ ಪ್ರವೇಶಿಸುವಂತಿಲ್ಲ, ಪ್ರವೇಶಿಸಿದರೆ ಘೇರಾವೋ ಹಾಕಲಾಗುವುದು" ಎಂದು ಘೋಷಿಸಿದ್ದಾರೆ. ಪ್ರತ್ಯೇಕ ರಾಜ್ಯದ ಬಾವುಟವನ್ನು ತೆಗೆಸಲು ಕರ್ನಾಟಕ ಸರ್ಕಾರ ಮುಂದಾದಲ್ಲಿ ಪರಿಣಾಮ ನೆಟ್ಟಗಾಗುವುದಿಲ್ಲವೆಂದೂ ಎಚ್ಚರಿಸಿದ್ದಾರೆ. ಹೊಸ ಜನ ಪ್ರತಿನಿಧಿಗಳು, ಅಧಿಕಾರಿಗಳ ಆಯ್ಕೆ ಮಾಡಲಾಗುವುದೆಂದು ಸಾರಿದ್ದಾರೆ. ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕದಂತಹ ಪತ್ರಿಕೆಗಳನ್ನು ಒಳಗೊಂಡು ಕೆಲವು ಮಾಧ್ಯಮಗಳು ಪರಸ್ಪರ ಪೈಪೋಟಿ ನಡೆಸಿ ಪಕ್ಷಪಾತದ ಮತ್ತೆ ಬೇಜವಾಬ್ದಾರಿಯ ರಂಗು ರಂಗಿನ ಸುದ್ದಿಗಳನ್ನು ಬಿತ್ತರಿಸತೊಡಗಿವೆ.



ಹೈಕೋರ್ಟ್ ಪೀಠದ ಬೇಡಿಕೆಯಿಂದ ಆರಂಭಗೊಂಡ ಈ ಚಳುವಳಿ ಇಂದು ಪ್ರತ್ಯೇಕ ರಾಜ್ಯದ ಘೋಷಣೆಯವರೆಗೆ ಬಂದು ನಿಂತಿದೆ. ಪೀಠದ ಸ್ಥಾಪನೆ ಬಗೆಗಿನ ನ್ಯಾಯಮೂರ್ತಿ ಅಶೋಕ ಖಾನ್‌ರವರ ಸಮಿತಿಯ ತೀರ್ಪು ಮೊದಲನೆಯದೇನಲ್ಲ. ಕಳೆದ 30 ವರ್ಷಗಳಲ್ಲಿ ಇದು ಎಂಟನೆಯದು. ಹಿಂದೆ 1979 ರಲ್ಲಿ ನೇಮಕವಾಗಿದ್ದ ನ್ಯಾಯಮೂರ್ತಿ ಡಿ.ಎಂ.ಚಂದ್ರಶೇಖರ್‌ರವರು ಧಾರವಾಡದಲ್ಲಿ ಪೀಠ ಸ್ಥಾಪನೆಯಾಗಬೇಕೆಂದು ಶಿಫಾರಸು ಮಾಡಿದ್ದು ಬಿಟ್ಟರೆ ಉಳಿದ ವರದಿಗಳು 'ಸಾಧುವಲ್ಲ' ಎಂದೇ ಇವೆ. ಅಂದ ಮಾತ್ರಕ್ಕೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಬೇಕಿಲ್ಲ ಎಂದೇನೂ ಅಲ್ಲ. ಈ ಸಮಿತಿಗಳು ಹೇಳುವಂತೆ ಪೀಠದ ಸ್ಥಾಪನೆಯು ಸ್ಥಳ ನಿರ್ಧಾರ(ವಿಜಾಪುರ, ಬೆಳಗಾಂ, ಬಳ್ಳಾರಿ, ಗುಲ್ಬರ್ಗಗಳಲ್ಲಿ ಪೀಠ ಬೇಕೆಂಬ ಚಳುವಳಿ ಇದೆ)ದಲ್ಲಿ ಗೊಂದಲಗಳು ಮತ್ತು ಜನಸಂಖ್ಯೆಗೆ ಹೋಲಿಸಿ, ಕೇಸ್‌ಗಳು ಕಡಿಮೆ ಎಂಬ ವಾದಗಳು ಅಷ್ಟೇನೂ ಸಮರ್ಥವಲ್ಲ. ಜನತೆಗೆ ಸುಲಭವಾಗಿ, ಬೇಗ ನ್ಯಾಯ ದೊರಕಿಸುವ ಮತ್ತು ನ್ಯಾಯಾಂಗದ ವಿಕೇಂದ್ರೀಕರಣದ ದೃಷ್ಟಿಯಲ್ಲಿ ಇನ್ನೊಂದು ಪೀಠದ ಸ್ಥಾಪನೆ ಅತ್ಯಗತ್ಯವಾದುದು. ಇದಕ್ಕೆ ಬಹುತೇಕ ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು ಸಹಮತ ವ್ಯಕ್ತಪಡಿಸಿವೆ. ಈಗ ಕರ್ನಾಟಕ ಸರ್ಕಾರ ತಡವಾಗಿಯಾದರೂ ಸಂಚಾರಿ ನ್ಯಾಯಪೀಠದ ಕಲ್ಪನೆ ಮುಂದಿರಿಸಿದೆ. ಮತ್ತು ನೈರುತ್ಯ ರೈಲ್ವೇ ವಲಯದ ಬೇಡಿಕೆಯನ್ನು ಒಳಗೊಂಡು ಕೇಂದ್ರ ಸರ್ಕಾರದ ಬಳಿಗೆ ನಿಯೋಗವೂ ತೆರಳಿದೆ. ಅಂತಿಮ ತೀರ್ಮಾನ ಇರುವುದು ಬಿಜೆಪಿಯ ಕೇಂದ್ರಸರ್ಕಾರದಲ್ಲೇ.

ಮುಖ ಉಳಿಸಿಕೊಳ್ಳಬಯಸಿದ ಬಿಜೆಪಿ

ಅಂದರೆ 'ನ್ಯಾಯಮೂರ್ತಿಗಳ ಸಮಿತಿಯ ವರದಿ ಅಥವಾ ರೈಲ್ವೆ ವಲಯದ ಕಛೇರಿ ಬಗೆಗೆ ತೀರ್ಪು ಬಂದಿದ್ದರೂ ಅವುಗಳನ್ನು ಅಂತಿಮವೆಂದು ಸ್ವೀಕರಿಸಬೇಕಿಲ್ಲ. ಇದರ ವಿರುದ್ಧ ಹೋರಾಡಲು ಹಲವಾರು ಪ್ರಜಾಸತ್ತಾತ್ಮಕ ಮಾರ್ಗಗಳು ಇವೆ.ಆದರೆ ಹುಬ್ಬಳ್ಳಿ-ಧಾರವಾಡದ ಈ 'ಓರಾಟ'ಗಾರರಿಗೆ ಇಂತಹ ಪ್ರಜಾಸತ್ತಾತ್ಮಕ ಮಾರ್ಗಗಳನ್ನು ಅನುಸರಿಸಿ ಬೇಡಿಕೆ ಪಡೆಯುವುದು ಬೇಕಿಲ್ಲ. ಎದ್ದುಬರುವ ಪ್ರತಿಯೊಂದು ಪ್ರಶ್ನೆಗಳಿಗೂ ಪ್ರತ್ಯೇಕ ರಾಜ್ಯವೇ ಮದ್ದು ಎಂದು ಸದಾ ಕೆಲವರು ವಾದಿಸುತ್ತಾರೆ. ಈ ಬಾರಿಯಂತೂ 'ಪೀಠದ ಸ್ಥಾಪನೆಗಾಗಿ' ಆಗ್ರಹಿಸಿ ನಡೆದ ಚಳುವಳಿಯು ಒಳಗೆ ಕ್ರಮೇಣ ತೂರಿಕೊಂಡ ಬಿಜೆಪಿ-ಸಂಘ ಪರಿವಾರ ತನ್ನ ಎಂದಿನ ತೆವಲಿನಂತೆ ಅನ್ಯರ ಬಣವೆಗೆ ಬೆಂಕಿಹಚ್ಚಿ ಮೈಕಾಯಿಸಿಕೊಳ್ಳಲು ಮುಂದಾಗಿದೆ. ಇತ್ತೀಚೆಗೆ ಜಿಲ್ಲಾ-ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಧೂಳೀಪಟವಾಗಿ ಮುಖ ಎತ್ತಲೂ ಆಗದೇ ನೆಲದೊಳಗೆ ಮುಖವಿಟ್ಟು ತೆವಳುತ್ತಿದ್ದ ಬಿಜೆಪಿಗಳು ಇದೇ ಸಂದರ್ಭದ ದುರ್ಲಾಭಕ್ಕೆ ಮುಂದಾಗಿದ್ದಾರೆ. ಸ್ವತಃ ಬಿಜೆಪಿಯ ವಿರೋಧಪಕ್ಷದ ನಾಯಕನ ಪಟ್ಟಧಾರಿ ಜಗದೀಶ್ ಶೆಟ್ಟರ್ ಕಹಳೆ ಊದಿ ಬೆಂಕಿಗೆ ಕಿಡಿಯೂದಿದ್ದಲ್ಲದೇ ಬಿಜೆಪಿ ಸ್ಥಳೀಯಶಾಸಕರು, ಸಂಸತ್ ಸದಸ್ಯರು, ಎಬಿವಿಪಿ, ಯುವಮೋರ್ಚಾ ನಾಯಕರು ಈ ಕಿಚ್ಚು ಹಚ್ಚಲು ಅಹೋರತ ಯತ್ನ ನಡೆಸಿದ್ದಾರೆ. ಓಣಿ ಓಣಿ, ಹಳ್ಳಿ-ಹೆದ್ದಾರಿಗಳಲ್ಲಿ ಬಾವುಟ ಹಿಡಿದು ಓಡಾಡಿದ್ದಾರೆ. ಶೆಟ್ಟರಂತೂ ಒಮ್ಮತ ರೂಪಿಸಲು ಓಡಾಡುತ್ತಿದ್ದೇನೆಂದು ಹೇಳಿ, ಸುತ್ತಲಿನ ಜಿಲ್ಲೆಗಳಲ್ಲಿಯೂ ಉದ್ರೇಕಿಸಲು ಪ್ರಯತ್ನಿಸಿದ್ದಾರೆ. ಪ್ರತ್ಯೇಕರಾಜ್ಯದ ಬಾವುಟ ಹಾರಿಸುವಾಗ ಅನೇಕ ಬಿಜೆಪಿ- ಆರ್.ಎಸ್.ಎಸ್. ನವರುಇದ್ದರೆಂದು ವರದಿಯಿದೆ.

ಹೈಟೆಕ್ ಪೀಠದ ಸ್ಥಾಪನೆ ಮತ್ತು ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ವಿಷಯಗಳ ಬಗ್ಗೆ ಸಿಪಿಐ(ಎಂ) ಹಾಗೂ ಜನತಾದಳ (ಎಸ್) ಪಕ್ಷಗಳು ಜಂಟಿಯಾಗಿ ಇದೇ ಜೂನ್ 23 ರಂದು ಪತ್ರಿಕಾಗೋಷ್ಠಿಯನ್ನು ನಡೆಸಿದವು. ಜನತಾದಳ(ಎಸ್)ನ ರಾಜ್ಯ ಅಧ್ಯಕ್ಷರಾದ, ಸಿದ್ದರಾಮಯ್ಯ, ಮಾಜಿ ಸಂಸತ್ ಸದಸ್ಯ, ಪ್ರ.ಕಾರ್ಯದರ್ಶಿ ಸಿ.ನಾರಾಯಣಸ್ವಾಮಿ ಹಾಗೂ ಸಿಪಿಐ(ಎಂ) ನಿಂದ ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್, ಎಸ್.ವೈ.ಗುರುಶಾಂತ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್‌ನ ನ್ಯಾಯಪೀಠದ ಸ್ಥಾಪನೆ ಆಗಬೇಕು. ಇದಕ್ಕೆ ಸಂಬಂಧಿಸಿ ಸರ್ಕಾರ ಸೂಕ್ತಕ್ರಮ ವಹಿಸಬೇಕು. ಪ್ರಾದೇಶಿಕ ಅಸಮಾನತೆ ತೊಲಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ಸಮಿತಿ ನೇಮಿಸಿ ಕಾಯಬೇಕಿಲ್ಲ.

ಎಡಬಿಡಂಗಿ ಯಡಿಯೂರಪ್ಪ

ಆದರೆ ಬಿಜೆಪಿಯ ಅಧ್ಯಕ್ಷ ಯಡಿಯೂರಪ್ಪನವರು ಮಾತ್ರ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಪ್ರತ್ಯೇಕತಾ ರಾಜ್ಯಕ್ಕೆ ತಮ್ಮ ಬೆಂಬಲ ಇಲ್ಲವೆಂದೂ, ತಮ್ಮ ಪಕ್ಷದ ಯಾವ ಶಾಸಕರೂ, ಕಾರ್ಯಕರ್ತರು ಇದರಲ್ಲಿ ಭಾಗಿಗಳಲ್ಲವೆಂದೂ, ಯಥೋಚಿತವಾಗಿ ತಮ್ಮ ಎರಡೆಳೆ ನಾಲಗೆಯಿಂದ ಸುಳ್ಳನ್ನು ಕಕ್ಕಿದ್ದಾರೆ.

ಅಲ್ಲಿ ಕೂಸನ್ನು ಚಿವುಟಿ, ಚಿವುಟಿ ಅಳಿಸುವುದು, ಇಲ್ಲಿ ತೊಟ್ಟಿಲು ತೂಗಿ ಸಾಂತ್ವನ ಹೇಳುವುದು ಬಿಜೆಪಿಯ ಜಾಯಮಾನ. ಒಂದು ವೇಳೆ ಬಿಜೆಪಿಗೆ ಸಮಸ್ಯೆಯ ಬಗ್ಗೆ ನಿಜವಾಗಿಯೂ ಕಿಂಚಿತ್ತಾದರೂ ಕಾಳಜಿಯಿದ್ದರೆ ಅತ್ಯಂತ ಜವಾಬ್ದಾರಿಯುತವಾಗಿ ವರ್ತಿಸಬಹುದಿತ್ತು. ಕೇಂದ್ರದಲ್ಲಿ ತಮ್ಮದೇ ಆದ ವಾಜಪೇಯಿ ಸರ್ಕಾರವಿದ್ದು, ಈ ಬೇಡಿಕೆಗಳಿಗೆ ಪರಿಹಾರ ಕಾಣಬಹುದಾಗಿತ್ತು. ಮುಖ್ಯಮಂತ್ರಿಗಳ ನೇತೃತ್ವದಲ್ಲಿ ದೆಹಲಿಗೆ ತೆರಳಿದ ಸರ್ವಪಕ್ಷಗಳ ನಿಯೋಗದಲ್ಲಿ ಬಿಜೆಪಿಯ ನಾಯಕರಾರೂ ಹೋಗದೇ ಬಹಿಷ್ಕರಿಸಿರುವುದರ ಉದ್ದೇಶವೇನು? ಕೊಚ್ಚೆಯಲ್ಲಿ ಮೀನು ಹಿಡಿಯುವ ಕೀಳು ರಾಜಕೀಯವಲ್ಲದೇ ಮತ್ತೇನು?

ಭಾಷಾವಾರು ಪ್ರಾಂತ್ಯಗಳನ್ನು ಒಡೆಯುವ ಸಂಚು

ಪ್ರತ್ಯೇಕ ರಾಜ್ಯದ ಬೇಡಿಕೆಗೆ ಬಿಜೆಪಿ ಬೆಂಬಲವಿಲ್ಲವೆಂಬ ಯಡಿಯೂರಪ್ಪನವರ ಮಾತನ್ನು ಎಂತಹ ಕಡು ಮೂರ್ಖನೂ ಒಪ್ಪಲು ಸಾಧ್ಯವಿಲ್ಲ. ಸಣ್ಣ ರಾಜ್ಯಗಳ ರಚನೆಗೆ ತಾನು ಬದ್ಧನೆಂದೂ, ಅದಕ್ಕಾಗಿ ಹಲವಾರು ಷಡ್ಯಂತ್ರಗಳನ್ನು ಹೊಸೆದು ಈಗಿನ ರಾಜ್ಯಗಳನ್ನು ಒಡೆಯಲು ದೇಶದಾದ್ಯಂತ ಬಿಜೆಪಿ ಪ್ರಯತ್ನಿಸುತ್ತಿದೆ. ಒಂದು ಭಾಷೆಯನ್ನಾಡುವ ಜನತೆ, ಭಾಷಾವಾರು ಪ್ರಾಂತ್ಯಗಳಾಗಿ ಒಂದು ಆಡಳಿತದಡಿಯಲ್ಲಿ ಇರುವುದು ಬಿಜೆಪಿಗೆ ಬೇಕಿಲ್ಲ. ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ನಡೆದ ಹೋರಾಟದಲ್ಲಿ ಈ 'ಸಂಘಪರಿವಾರ' ಭಾಗವಹಿಸಲೇ ಇಲ್ಲ. ಮತ್ತು ಇದಕ್ಕೆ ವಿರುದ್ಧವಾಗಿ ನಿಂತಿದೆ. ದೇಶೀಯ ಭಾಷೆ, ರಾಷ್ಟ್ರೀಯತೆಗಳನ್ನು ಕೊಲ್ಲುತ್ತಾ, ಹಿಂದಿ-ಹಿಂದು, ಹಿಂದೂಸ್ತಾನ್ ಘೋಷಣೆಯನ್ನು ಪೋಷಿಸಲು ಸದಾ ನಿರತರಾಗಿದ್ದಾರೆ. ಇಂದು ದೇಶಾದ್ಯಂತ ಜಾರಿಗೊಳ್ಳುತ್ತಿರುವ ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳ ದುಷ್ಪರಿಣಾಮಗಳ ವಿರುದ್ಧ ಒಂದೇ ಸಂಸ್ಕೃತಿ ಹೇರಿಕೆಯ ಸರ್ವಾಧಿಕಾರವನ್ನು ಆಯಾ ದೇಶೀಯ ಜನಾಂಗ ಒಗ್ಗಟ್ಟಿನಿಂದ ಹೋರಾಡದಂತೆ ಒಡೆಯುವುದು ಮತ್ತು ಫ್ಯಾಸಿಸ್ಟ್ ಮಾದರಿಯ ಆಡಳಿತ ಹೇರುವುದು ಸಂಘ ಪರಿವಾರದ ಅಜೆಂಡಾ ಆಗಿದೆ. ಕೇಂದ್ರದ ಎದುರು ಸರಿಸಮವಾಗಿರುವ, ಸಮರ್ಥವಾಗಿ ಎದುರಿಸುವ ಬಲಿಷ್ಠ ರಾಜ್ಯಗಳು ಬೇಕಿಲ್ಲ. ಕೇಂದ್ರದ ಮುಂದೆ ಮಂಡಿಯೂರಿ ದೈನೇಶಿಯಿಂದ ಬೇಡಿಕೊಳ್ಳುವ ದುರ್ಬಲ ರಾಜ್ಯಗಳು ಅವರಿಗೆ ಬೇಕು. ರಾಜ್ಯದ ಉತ್ತರ ಕರ್ನಾಟಕವನ್ನು ಒಳಗೊಂಡು ಬಹುತೇಕ ಜನತೆ ಪ್ರತ್ಯೇಕತೆಗೆ ವಿರುದ್ಧವಾಗಿರುವುದು ಬಿಜೆಪಿ ಅಧ್ಯಕ್ಷರ ದ್ವಿಪಾತ್ರಕ್ಕೆ ಒಂದು ಕಾರಣವೂ ಹೌದು.

ಸ್ವಾತಂತ್ರ್ಯ ಗಳಿಸಿದ ನಂತರದಿಂದ ಆಳುತ್ತಾ ಬಂದ ಆಳುವವರ ಭೂಮಾಲೀಕ, ಬಂಡವಾಳಶಾಹಿ ನೀತಿಗಳ ಪರಿಣಾಮ ದೇಶದಲ್ಲಿರುವ ಇಂದಿನ ಪ್ರಾದೇಶಿಕ ಅಸಮಾನತೆಗೆ ಮೂಲ ಕಾರಣ. ಕರ್ನಾಟಕದ ಮಟ್ಟಿನಲ್ಲಿಯೂ ಇಂತಹ ಪ್ರಾದೇಶಿಕ ಅಸಮಾನತೆ ವಾಸ್ತವವಾಗಿದೆ. ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕಗಳು ತುಂಬಾ ಹಿಂದುಳಿದಿವೆ. ಈ ಪ್ರಾದೇಶಿಕ ಅಸಮಾನತೆ ತೊಲಗಿಸಲು, ಸಮಗ್ರ ಅಭಿವೃದ್ಧಿ ಸಾಧಿಸಲು ಸ್ಪಷ್ಟವಾದ ಪರ್ಯಾಯ ಕಾರ್ಯಕ್ರಮಗಳು ಬೇಕು. ಆದರೆ ಇಂದು ಬಿಜೆಪಿ, ಕಾಂಗ್ರೆಸ್ ಅನುಸರಿಸುತ್ತಿರುವ ಆರ್ಥಿಕ, ಸಾಮಾಜಿಕ ಧೋರಣೆಗಳು ಇಂದಿನ ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸುವುದಿಲ್ಲ ಬದಲಾಗಿ ಹೆಚ್ಚಿಸುತ್ತಿವೆ. ಇದರಿಂದ ಉಂಟಾಗುವ ಅತೃಪ್ತಿಯ ದುರ್ಲಾಭ ಪಡೆಯಲು ಬಿಜೆಪಿ ಹವಣಿಸುತ್ತಿದೆ. ಇದು ಉಗ್ರ ಖಂಡನೀಯ. ಇನ್ನೊಂದೆಡೆ ಪ್ರತ್ಯೇಕ ರಾಜ್ಯ ರಚನೆಯಾದರೆ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುತ್ತದೆ ಎಂಬುದು ಮೂರ್ಖತನ. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದು ಹಾಡಿ, ತ್ಯಾಗ, ಬಲಿದಾನದಿಂದ ಕರ್ನಾಟಕದ ಏಕೀಕರಣಕ್ಕೆ ಹೋರಾಡಿದ ಪರಂಪರೆಯಿರುವ ಈ ಪ್ರದೇಶದಲ್ಲಿ ಪ್ರತ್ಯೇಕತೆಯ ಬೀಜಗಳು ಚಿಗುರದಂತೆ ಜನತೆ ನೋಡಿಕೊಳ್ಳಬೇಕು. ಕರ್ನಾಟಕದ ಉಳಿದ ಭಾಗದ ಜನರು 'ಸುಖಿಗಳು' ತಾವು ಮಾತ್ರವೇ ಪರಮ ದುಃಖಿಗಳು ಎಂಬ ಭಾವನೆ ತೀರಾ ತಪ್ಪು. ಇಡೀ ಕರ್ನಾಟಕದಲ್ಲಿ ದುಡಿಯುವ ಜನಕೋಟಿಗಳು ಸಮಸ್ಯೆ ಗಳಿಂದ ನರಳುತ್ತಿವೆ. ಇದಕ್ಕೆ ಕಾರಣವಾದ ಅಂಶಗಳನ್ನು ಕಿತ್ತೆಸೆಯಲು ಒಂದಾಗಿ ಕೈ-ಕಲಸಿ ಎಲ್ಲಾ ತಾರತಮ್ಯ, ಅನ್ಯಾಯಗಳ ವಿರುದ್ಧ ಹೋರಾಡಬೇಕಿದೆ. ಆದ್ದರಿಂದ ಬಿಜೆಪಿ, ಮತ್ತಿತರರು ಬೀಸುವ ವಂಚನೆಯ ಬಲೆಗೆ ಜನತೆ ಬೀಳಬಾರದು.

ಕಾಂಗ್ರೆಸ್ ಸರ್ಕಾರ ಬಯಸುವುದೇನು?

ಹೈಕೋರ್ಟ್‌ನ ನ್ಯಾಯಾಧೀಶರ ಸಮಿತಿಯ ವರದಿ ಕೈಗೆ ಬಂದ ತಕ್ಷಣ ಮುಖ್ಯಮಂತ್ರಿ ಕೃಷ್ಣರವರು ಪೀಠ ಸ್ಥಾಪನೆಗಾಗಿ ಮುಂದಿನ ಕ್ರಮ ವಹಿಸಬಹುದಿತ್ತು. ಪುನರ್‌ಮನವಿಯನ್ನು ಅಖಿಲ ಭಾರತದ ಮಟ್ಟದಲ್ಲಿ ನ್ಯಾಯಾಂಗಕ್ಕೂ, ರಾಷ್ಟ್ರಪತಿಗಳಿಗೂ, ಕೇಂದ್ರ ಸರ್ಕಾರಕ್ಕೂ ಸಲ್ಲಿಸಬಹುದಿತ್ತು. ಆದರೆ ಅಷ್ಟು ಗಮನವಹಿಸಲಿಲ್ಲವೆಂದು ಕಾಣುತ್ತಿದೆ. ಅಲ್ಲದೇ ಸರ್ವ ಪಕ್ಷಗಳ ಸಭೆ ಕರೆದು ಸಮಾಲೋಚಿಸಿ ಮುಂದಿನ ಕ್ರಮ ವಹಿಸಬಹುದಿತ್ತು. ಹುಬ್ಬಳ್ಳಿ-ಧಾರವಾಡದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಇಟ್ಟು ಚಳುವಳಿ ನಡೆಸುತ್ತಿರುವಾಗ, ಕಾಂಗ್ರೆಸ್ ಹಾಗೂ ಸರ್ಕಾರ ಕೂಡಲೇ ಖಂಡಿಸಬೇಕಿತ್ತು. ಅಲ್ಲದೇ ಧ್ವಜಾರೋಹಣ ಮಾಡಿ ಸಂವಿಧಾನ ಬಾಹಿರವಾಗಿ ಉದ್ರೇಕಕಾರಿಯಾಗಿ ಮಾತನಾಡಿದವರ ಮೇಲೆ ಕಠಿಣ ಕ್ರಮ ಜರುಗಿಸಬೇಕಿತ್ತು. ಇನ್ನಾದರೂ ಸರ್ಕಾರ ದೃಢವಾಗಿ ವರ್ತಿಸಬೇಕು. ಇದಕ್ಕಿಂತಲೂ ಮುಖ್ಯವಾದ ಇನ್ನೊಂದು ಅಂಶವೆಂದರೆ ಆ ಭಾಗದ ನೈಜವಾದ ಸಮಸ್ಯೆಗಳ ಪರಿಹಾರಕ್ಕೆ ಸಂಪೂರ್ಣ ಆದ್ಯತೆ ನೀಡಬೇಕು. ಇಲ್ಲವಾದಲ್ಲಿ ಈ 'ಹೈಟೆಕ್ ಪ್ರಭುತ್ವ' ಮತ್ತೆ ಅಸಮಾನತೆಯನ್ನು ಹುಟ್ಟುಹಾಕದೇ ಇರಲಾರದು ಎಂದು ಭಾವಿಸಬೇಕಿಲ್ಲ.

ಆ ಭಾಗದ ಜನತೆಯೂ ಜಾಗೃತಿಯಿಂದ, ನಾಡಿನ ಸಮಗ್ರ ಅಭಿವೃದ್ಧಿ ಸಾಧಿಸುವಲ್ಲಿ, ಎಡ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಕೈಜೋಡಿಸಬೇಕು. ಕರ್ನಾಟಕವನ್ನು ಛಿದ್ರಗೊಳಿಸಬಯಸುವ ಬಿಜೆಪಿಯ ಕುತಂತ್ರಗಳು ಮುಂದೆಯೂ ಮುಂದುವರಿಯಲಿದ್ದು, ಅವುಗಳನ್ನು ಪೂರ್ಣವಾಗಿ ಸೋಲಿಸಬೇಕು.



ವಿಸ್ತರಿಸಬೇಕಾದ ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆ

ಫರೂಕ್ ಅಬ್ದುಲ್ಲಾ ಸರ್ಕಾರ ರಚಿಸಿದ್ದ ರಾಜ್ಯ ಸ್ವಾಯತ್ತತೆ ಸಮಿತಿಯ ವರದಿಯನ್ನು ಚರ್ಚಿಸಲು ಜಮ್ಮು ಮತ್ತು ಕಾಶ್ಮೀರದ ಶಾಸಕಾಂಗದ ವಿಶೇಷ ಅಧಿವೇಶನ ನಡೆಯುತ್ತಿದೆ. ಸಮಿತಿಯ ವರದಿಯು 1953 ರ ಪೂರ್ವದ ಜಮ್ಮು ಮತ್ತು ಕಾಶ್ಮೀರ ಸ್ಥಾನಮಾನವನ್ನು ಪುನರ್‌ಸ್ಥಾಪಿಸಲು ಶಿಫಾರಸು ಮಾಡಿದೆ. ಇದರ ವಿರುದ್ಧವಾಗಿ ಆ ರಾಜ್ಯಕ್ಕೆ ಯಾವುದೇ ಹೆಚ್ಚು ಸ್ವಾಯತ್ತತೆ ನೀಡುವುದನ್ನು ಬಿಜೆಪಿಯು ಬಲವಾಗಿ ವಿರೋಧಿಸಿದೆ. ಸಂವಿಧಾನದ ಪರಿಚ್ಛೇದ 370 ಅನ್ನು ತೆಗೆದುಹಾಕಲು ಒತ್ತಾಯಿಸಿದ್ದ ಬಿಜೆಪಿಯ ದೃಷ್ಟಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿರುವ ಸ್ವಾಯತ್ತತೆಯ ವಿಸ್ತರಣೆ ಹೇರಿದರೆ ವಿಚ್ಛಿದ್ರಕಾರಿ ಶಕ್ತಿಗಳಿಗೆ ಉತ್ತೇಜನ ನೀಡಿದಂತೆ ಎಂಬುದಾಗಿದೆ.

ರಾಜ್ಯದ ಒಟ್ಟಾರೆ ಸ್ವಾಯತ್ತತೆಯ ವಿಸ್ತರಣೆಯನ್ನು ಬಿಜೆಪಿ ವಿರೋಧಿಸುತ್ತಿರುವಾಗಲೇ ಹಿಂದೂಗಳ ಪ್ರಾಬಲ್ಯವುಳ್ಳ ಜಮ್ಮು ಮತ್ತು ಮುಸ್ಲಿಮರ ಪ್ರಾಬಲ್ಯವುಳ್ಳ ಕಾಶ್ಮೀರ ಕಣಿವೆ ನಡುವಿನ ಭಿನ್ನಾಭಿಪ್ರಾಯಗಳನ್ನು ಬೇಡಿಕೆಗಳನ್ನು ಅವುಗಳಿಗೆ ಪ್ರತ್ಯೇಕವಾಗಿ ವಿಶೇಷ ಸ್ಥಾನಮಾನ ನೀಡುವ ಅಂಶಗಳನ್ನು ಪ್ರಸ್ತಾಪಿಸುತ್ತಿದೆ. ಅಂತೆಯೇ ಲಡಾಕ್‌ನಲ್ಲಿ ಕಾಶ್ಮೀರಿ ನಾಯಕತ್ವದ ವಿರುದ್ಧ ಬೌದ್ಧ ಭಾವನೆಗಳನ್ನು ಉದ್ರೇಕಿಸುತ್ತಿದೆ.

ಮಾಧ್ಯಮಗಳ ಮುಖ್ಯವಾಹಿನಿಯು ಸದಾ ಅಘೋಷಿತ ರೀತಿಯಲ್ಲಿ ಸ್ವಾಯತ್ತತೆಯ ವಿಸ್ತರಣೆ ಎಂದರೆ ಪ್ರತ್ಯೇಕತಾವಾದಕ್ಕೆ ನೀಡುವ ರಿಯಾಯಿತಿಯೆಂದು ಬಿಂಬಿಸುತ್ತಿವೆ. ಸಂವಿಧಾನದ ಪರಿಚ್ಛೇದ 370 ರೊಳಗೆ ಜಮ್ಮು ಮತ್ತು ಕಾಶ್ಮೀರಕ್ಕೆ ಹೆಚ್ಚು ಸ್ವಾಯತ್ತತೆಯನ್ನು ನೀಡಬೇಕೆಂದು ಸಿಪಿಐ(ಎಂ) ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ. ಆ ರಾಜ್ಯಕ್ಕೆ ಪರಿಚ್ಛೇದ 370 ರ ಅಡಿಯಲ್ಲಿ ನೀಡಲಾಗಿದ್ದ ಅನೇಕ ಅಧಿಕಾರಗಳನ್ನು ವರ್ಷಗಳ ಪರಿಧಿಯಲ್ಲಿ ಅನೇಕ ಕೇಂದ್ರ ಸರ್ಕಾರಗಳು ಕಡಿತಗೊಳಿಸಿವೆ. ರಾಜ್ಯ ಸ್ವಾಯತ್ತತೆಯ ಸಮಿತಿಯು ರಕ್ಷಣೆ, ವಿದೇಶಾಂಗ ವ್ಯವಹಾರಗಳು ಮತ್ತು ಸಂಪರ್ಕ ಅಧಿಕಾರಗಳ ನ್ನೊರತು ಪಡಿಸಿ ಉಳಿದೆಲ್ಲಾ ಅಧಿಕಾರಗಳನ್ನು ರಾಜ್ಯದ ವ್ಯಾಪ್ತಿಯಲ್ಲಿರಿಸಿ ಕೊಳ್ಳಲು ಬಯಸಿದೆ. ಈ ನಿಲುವು ಸ್ವಾಯತ್ತತೆಯ ನೈಜ ಅಂಶಗಳಿಂದ ಮುಖ್ಯ ವಿಷಯವನ್ನು ಬೇರೆಡೆಗೆ ಸೆಳೆಯುತ್ತದೆ. ಉದಾಹರಣೆಗೆ ಹಣಕಾಸು ಅಧಿಕಾರಗಳ ಕುರಿತ ವಿಕೇಂದ್ರೀಕರಣದ ಪ್ರಸ್ತಾಪ ಅದರಲ್ಲಿಲ್ಲ. ಕಳೆದ ಮೂರು ದಶಕಗಳಲ್ಲಾಗಿರುವ ಪರಿಸ್ಥಿತಿಯ ಹಾಗೂ ಅಭಿವೃದ್ಧಿಯ ಬದಲಾವಣೆಗಳಿಂದಾಗಿ 1953ರ ಪೂರ್ವ ಸ್ಥಾನಮಾನದ ಪರಿಸ್ಥಿತಿಗೆ ಹಿಂತಿರುಗಿಸಬೇಕೆಂಬ ನ್ಯಾಷನಲ್ ಕಾನ್ಫರೆನ್ಸ್‌ನ ಬೇಡಿಕೆಯನ್ನು ಒಪ್ಪಲು ಸಾಧ್ಯವಾಗದಿದ್ದರೂ ಸಹ ಸಂವಿಧಾನದ ಪರಿಚ್ಛೇದ 370 ರೊಳಗೆ ಅಧಿಕಾರಗಳನ್ನು ಕೊಡಮಾಡುವ ಹಾಗೂ ಸ್ವಾಯತ್ತತೆಯ ಎಲ್ಲೆಯನ್ನು ವಿಸ್ತರಿಸುವ ಅವಕಾಶಗಳು ವಿಫುಲವಾಗಿವೆ.

ನರಸಿಂಹರಾಯರ ಸರ್ಕಾರದ ಸಮಯದಲ್ಲಿ 1975 ರ ಶೇಖ್ ಅಬ್ದುಲ್ಲಾ ಮತ್ತು ಇಂದಿರಾ ಗಾಂಧಿ ಒಪ್ಪಂದದ ಆಧಾರದಲ್ಲಿ ರಾಜ್ಯದ ಸ್ವಾಯತ್ತತೆಯನ್ನು ವಿಸ್ತರಿಸುವ ಮಾತುಕತೆ ನಡೆಯಬೇಕೆಂದು ಸಿಪಿಐ(ಎಂ) ಒತ್ತಾಯಿಸಿತ್ತು. ಸಂಯುಕ್ತರಂಗ ಸರ್ಕಾರದ ಸಮಯದಲ್ಲಿ ರಾಜ್ಯದ ಸ್ವಾಯತ್ತತೆಯನ್ನು ವಿಸ್ತರಿಸುವ ಕುರಿತಂತೆ ಸಮರ್ಪಕ ನಿಲುವನ್ನು ತಳೆಯಲಾಗಿತ್ತು ಹಾಗೂ 1996 ರಲ್ಲಿ ನಡೆದ ಚುನಾವಣೆಗಳು, ಚುನಾಯಿತ ಸರ್ಕಾರದ ಪುನರ್‌ಸ್ಥಾಪನೆಗೆ ಕಾರಣೀಭೂತವಾಯಿತು.

ಫರೂಖ್ ಅಬ್ದುಲ್ಲಾರವರು ಸ್ವಾಯತ್ತತೆಯ ವಿಷಯವನ್ನು ಎತ್ತಿರುವ ಹಾಗೂ 1953 ರ ಪೂರ್ವ ಸ್ಥಾನಮಾನಕ್ಕೆ ಅದನ್ನು ಪುನರ್ ಸ್ಥಾಪಿಸಬೇಕೆಂಬ ವಾದವೇ ಅದಕ್ಕೆ ಪ್ರತಿರೋಧವನ್ನುಂಟು ಮಾಡುತ್ತಿದೆ. 1998 ರಲ್ಲಿ ಜಾತ್ಯಾತೀತ ರಂಗವನ್ನು ತ್ಯಜಿಸಿ ಬಿಜೆಪಿಯೊಂದಿಗೆ



ಆತಂಕದಲ್ಲಿರುವ ನಿರುದ್ಯೋಗಿ ಯುವ ಸಮೂಹ

ಕೈಜೋಡಿಸಿದ ನಂತರ, ಕಾಶ್ಮೀರದೊಳಗೆ ರಾಜ್ಯದ ಹಿತಾಸಕ್ತಿ ಹಾಗೂ ಸ್ವಾಯತ್ತತೆಯ ರಕ್ಷಕರು ಎಂಬ ವಿಶ್ವಾಸವನ್ನು ಅವರು ಕಳೆದುಕೊಳ್ಳುತ್ತಿದ್ದಾರೆ. ಕಾಶ್ಮೀರದ ಸ್ವಾಯತ್ತತೆ ಮತ್ತದರ ಜಾತ್ಯಾತೀತ ಪರಂಪರೆಗೆ ವ್ಯತಿರಿಕ್ತವಾಗಿರುವ ಜನತೆಯೊಂದಿಗೆ ಅವರು ಕೈಜೋಡಿಸಿದ್ದಾರೆ. ವಾಜಪೇಯಿ ಸರ್ಕಾರ ಹರಿಯತ್‌ನೊಂದಿಗೆ ಮಾತುಕತೆ ನಡೆಸುತ್ತೇವೆ ಎಂಬ ಪ್ರಸ್ತಾಪ ಮಾಡಿರುವ ಹಿನ್ನೆಲೆಯಲ್ಲಿ ಅವರು ಸಮಯಸಾದಕತನದ ಭಾಗವಾಗಿ ಈಗ ಈ ವಿಷಯ ಪ್ರಸ್ತಾಪಿಸುತ್ತಿದ್ದಾರೆ. ಈ ಅಂಶವು ಫರೂಖ್ ಅಬ್ದುಲ್ಲಾ ಸರ್ಕಾರದ ಪ್ರಾಮಾಣಿಕತೆ ಕುರಿತು ಸಂಶಯಗಳನ್ನು ಸೃಷ್ಟಿಸುತ್ತದೆ.

ಶಾಸಕಾಂಗ ಹಾಗೂ ರಾಷ್ಟ್ರಮಟ್ಟದಲ್ಲಿ ಸ್ವಾಯತ್ತತೆಯ ಬೇಡಿಕೆಯನ್ನು ವಿರೋಧಿಸುವವರ ವಾದವನ್ನು ಸಿಪಿಐ(ಎಂ) ಅನುಕರಿಸಿಲ್ಲ. ದಶಕಗಳ ಕೇಂದ್ರದ ದುರಾಡಳಿತ ಹಾಗೂ ಪ್ರಜಾಪ್ರಭುತ್ವ ವಿರೋಧಿ ದೃಷ್ಟಿಕೋನದ ಫಲವಾಗಿ ಪ್ರತ್ಯೇಕಿಸಲ್ಪಟ್ಟಿರುವ ಅಂಶವನ್ನು ಸರಿಪಡಿಸಲು ಹಾಗೂ ಕಾಶ್ಮೀರದ ಜನತೆಯ ಆಶಯಗಳನ್ನು ಈಡೇರಿಸಲು ಭಾರತದ ಸಂವಿಧಾನದ ಸಂರಚನೆಯ ಒಳಗೆ ಜಮ್ಮು ಮತ್ತು ಕಾಶ್ಮೀರಕ್ಕೆ ಹೆಚ್ಚು ಸ್ವಾಯತತ್ತೆಯನ್ನು ನೀಡಬೇಕು. ರಾಜ್ಯದ ಒಟ್ಟಾರೆ ಸಂರಚನೆಯ ಒಳಗೆ ಜಮ್ಮು ಮತ್ತು ಲಡಾಕ್ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ಒದಗಿಸಬೇಕು. ಪ್ರಾದೇಶಿಕ ಸ್ವಾಯತ್ತತೆಯ ಕುರಿತು ಫರೂಖ್ ಅಬ್ದುಲ್ಲಾ ಸರ್ಕಾರದ ಎರಡನೇ ಆಯೋಗವು ರಾಜ್ಯದ ಜಿಲ್ಲೆಗಳನ್ನು ಕೋಮು ಆಧಾರದಲ್ಲಿ ವಿಭಜಿಸುವಂತಹ ಅಪಾಯಕಾರಿ ಶಿಫಾರಸ್ಸುಗಳನ್ನು ಮಾಡಿದೆ. ರಾಜ್ಯದ ಸ್ವಾಯತ್ತತೆಯ ವಿಸ್ತರಣೆ ಹಾಗೂ ಜಮ್ಮು ಮತ್ತು ಲಡಾಕ್‌ಗಳಿಗೆ ಪ್ರಾದೇಶಿಕ ಸ್ವಾಯತ್ತತೆ ಬೇಡಿಕೆಗಳನ್ನು ಬೆಂಬಲಿಸುವಾಗಲೇ, ಅಮೆರಿಕಾದ ಚಿಂತಕರು ಬೆಂಬಲಿಸುವಂತಹ ಕೋಮು ಆಧಾರಿತ ರಾಜ್ಯದ ವಿಭಜನೆಯನ್ನು ಒಪ್ಪಲು ಸಾಧ್ಯವಿಲ್ಲ. ○

ಆಡಳಿತ ವಿಕೇಂದ್ರೀಕರಣದ ಗತಿ ಈಗೇನಾಗಿದೆ?

ನಮ್ಮಲ್ಲಿ ಪ್ರಾರಂಭವಾದ ಸುಮಾರು 12 ವರ್ಷಗಳ ಹಿಂದಿನ ಮಾತು, ಹೊಸ ಅಲೆ ಆಡಳಿತ ವಿಕೇಂದ್ರೀಕರಣದ ಗ್ರಾಮ ಸ್ವರಾಜ್ಯದ ಕಲ್ಪನೆ. ಜನತಾ ದಳದ ರಾಮಕೃಷ್ಣ ಹೆಗಡೆ ನೇತೃತ್ವದ ಡಾ: ನಜೀರ್ ಸಾಬ್‌ರ ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪರಿಷತ್‌ಗಳ ಗತಿ ಆಗೇನಾಯಿತು. ಎಂದು ಅವಲೋಕಿಸುವ ಸಂದರ್ಭ ಒದಗಿದೆ ಎಂದು ಅನಿಸುತ್ತಿದೆ.

ಇವತ್ತಿನ ಪಂಚಾಯತ್ ವ್ಯವಸ್ಥೆ ಹೇಗಿದೆ ಎಂದರೆ ಮೀಸಲಾತಿಯಿಂದ ಕೂಡಿದ ಗ್ರಾಮ ಸ್ವರಾಜ್ಯದ ಕಲ್ಪನೆ. ಇದರಲ್ಲಿ ಹೆಸರಿಗೆ ಮಾತ್ರ ಮೀಸಲಾತಿ. ಅಂದರೆ ಅವರಿಗೆ ಆಡಳಿತದ ಪರಿಪಾಠವಿಲ್ಲದೆ ಸರ್ಕಾರಿ ಅಧಿಕಾರಿಗಳು (ಕಾರ್ಯದರ್ಶಿ) ಹೇಳಿದ ಹಾಗೆ ಇವರ ಪಥ ನಡೆಯುತ್ತದೆ. ಇವರಿಗಿಂತ ಮೇಲಿನ ವ್ಯವಸ್ಥೆಗಳ ಕೈವಾಡದಿಂದ ಭ್ರಷ್ಟಾಚಾರ, ಲಂಚಾವತಾರ ಯಾವುದಕ್ಕೂ ಕೊರತೆಯಿಲ್ಲದೆ ಜವಾಬ್ದಾರಿ ವ್ಯವಸ್ಥೆಗಳೆಲ್ಲವೂ ಕಳಪೆ ಕಾರ್ಯ ಚಟುವಟಿಕೆಗಳ ಗತಿಯಲ್ಲಿ ನಡೆಯುತ್ತದೆ.

ಉದಾ:- ಸಾಗರ ತಾಲ್ಲೂಕಿನ ಹೆಗ್ಗೋಡಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ಒಂದು ಪ್ರಕರಣ ಕಂಡು ಬಂದಿದೆ. ಕುಡಿಯುವ ನೀರಿನ ವ್ಯವಸ್ಥೆ. ಈವರೆಗೆ ಯಾರಿಗೂ ಸರಿಯಾಗಿ (ಒಂದು ಪಾಯಿಂಟ್‌ನಲು ನೀರಿನ ವ್ಯವಸ್ಥೆ ಸಿಗಲಿಲ್ಲ. ಆದರೆ ಮಾತ್ರ ಇಲಾಖೆಯಿಂದ (ಜಿಲ್ಲಾ ಪಂಚಾಯತ್) ಕೆ.ಪಿ.ಟಿ.ಸಿ.ಎಲ್. ಇಲಾಖೆಗೆ ಈ ವರೆಗೆ ಸುಮಾರು 30-40 ರಷ್ಟು ಯೂನಿಟ್ ಮೀಟರ್ ಓಡಿದ್ದು, ಅದು 2000 ಯೂನಿಟ್ ಮೀಟರ್ (ಸುಮಾರು) ಓಡಿದ್ದು ಬಿಲ್ ಬಾಬ್ತು ಸುಮಾರು ವರ್ಷಕ್ಕೆ ಒಂದು ಲಕ್ಷ ರೂ ನಂತೆ 7-8 ವರ್ಷಗಳ ತನಕ ಬಿಲ್ ಪಾವತಿಸಿದೆ. ಸುಮಾರು 10 ಲಕ್ಷ ರೂ ನಷ್ಟು ಅಂದಾಜು ಹಣ ಪಾವತಿಸಲಾಗಿದೆ. ಹೆಗ್ಗೋಡು ಪಂಚಾಯಿತಿ ಬಿಲ್ ಜಿಲ್ಲಾ ಪಂಚಾಯಿತಿಯಿಂದ ನೇರವಾಗಿ ಈ ಪಂಚಾಯಿತಿ ವ್ಯಾಪ್ತಿಯ ವ್ಯವಸ್ಥಾಪಕರನ್ನು ಸಂಪರ್ಕಿಸದೆ ಕೆ.ಪಿ.ಟಿ.ಸಿ. ಎಲ್‌ಗೆ ಪಾವತಿಸಲಾಗುತ್ತದೆ. ಪಾವತಿಸಿದ ನಂತರ ಅದರಲ್ಲಿ ಒಂದು ಇಂಟಿಮೇಶನ್ ಈ ಪಂಚಾಯಿತಿಗೆ ದಾಖಲೆಗಾಗಿ ಕಳುಹಿಸಿ ಕೊಡುತ್ತಾರೆ. ನೋಡುವುದು, ಹೇಳುವುದು, ಕೇಳುವುದು, ಈ ಯಾವ ಪ್ರಕ್ರಿಯೆಯೂ ನಡೆಯುವುದಿಲ್ಲ. ಹೇಗಿದೆ ವ್ಯವಸ್ಥೆ. ಅಧಿಕಾರಿಗಳ ಬೇಜವಾಬ್ದಾರಿ ಅಂದರೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ನೀವು ಊಹಿಸಿ. ಇತ್ತೀಚೆಗೆ ಚುನಾಯಿತರಾದ ಪಂಚಾಯಿತಿಯ ಉಪಾಧ್ಯಕ್ಷರಾದ ಎನ್.ಸಿ. ಗಂಗಾಧರ್‌ರವರು ಈ ಪ್ರಕರಣವನ್ನು ಎತ್ತಿ ಹಿಡಿದು ಹೋರಾಟ ನಡೆಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಲ್ಲಿ ಒಬ್ಬ ಚುನಾಯಿತ ಅಧ್ಯಕ್ಷರೊಬ್ಬರು ಕೇಳಿದರೆ ನಿಮಗೇನು ನಷ್ಟ. ಸರ್ಕಾರದ ದುಡ್ಡಲ್ಲವೇ? ಎನ್ನುತ್ತಾರಂತೆ.

ಈ ಭ್ರಷ್ಟ ಅಧಿಕಾರಿಗಳಿಗೆ ತಿಂಗಳಿಗೆ ಪಕ್ಕಾ ಒಡೆಯದೇ ಇರುವ ಹೊಸ ನೋಟಿನ ಕಟ್ಟು ಸಂಬಳದ ರೂಪದಲ್ಲಿ ಬರುತ್ತದೆಯಲ್ಲವೇ? ಇದರಿಂದ ಕಷ್ಟದ ಸ್ಥಿತಿ ಹೇಗೆ ಅರ್ಥವಾಗಬೇಕು ಅವರಿಗೆ. ಇದು ಯಾರ ದುಡ್ಡು ಎಂಬ ಪರಿಜ್ಞಾನವೂ ಕೂಡ ಅಧಿಕಾರಿಗಳಿಗಿಲ್ಲ ನಮ್ಮ ಪ್ರಜಾತಂತ್ರದ ಆಡಳಿತ ವಿಕೇಂದ್ರೀಕರಣದ ಸ್ಥಿತಿ ಹೀಗಿದೆ.

ಅಲ್ಲದೆ ವ್ಯವಸ್ಥಾಪಕ ವರ್ಗಕ್ಕೆ ಅದರಲ್ಲೂ ಅಧಿಕಾರಿಗಳಿಗೆ ಕದ್ದ ರೊಟ್ಟಿ ಬೇರೆ, ದೇವರ ಪ್ರಸಾದ ಬೇರೆ; ಇದು ನಮ್ಮಲ್ಲಿಯ ಸ್ಥಿತಿ. ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ನೇಮಕಗೊಂಡ ಮೀಸಲಾತಿ ವರ್ಗದ ನೇತಾರರಿಗೆ ಇವುಗಳೆಲ್ಲ ಅರ್ಥವಾಗುವುದಾದರೂ ಹೇಗೆ? ಜೀತದಾಳುವಿನಿಂದ ಗದ್ದಿಗೆ ಏರಿದ ಅವರ ಸ್ಥಿತಿಗತಿಗಳ ಅರಿವು ಮೂಡಿಸುವವರ್‍ಯಾರು? ಗ್ರಾಮ ಪಂಚಾಯಿತಿ ವ್ಯವಸ್ಥೆ ಈ ರೀತಿ ಆದರೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಒಬ್ಬ ಆಡಳಿತ ಮಂತ್ರಿ ಮಹೋದಯರ ಅಥವಾ ಆಯಾ ಕ್ಷೇತ್ರದ ಪ್ರಮುಖ ಆಡಳಿತ ರಾಜಕಾರಣಿಗಳ ಕೈಯಲ್ಲಿ ಮತ್ತು ಅವರ ಪಟಾಲಂಗಳೇ ತುಂಬಿರುವುದರಿಂದ ಅವರವರ ಮೂಗಿನ ನೇರಕ್ಕೆ ಆಡಳಿತ ಕಾರ್ಯ ಚಟುವಟಿಕೆಗಳು ಸಿಕ್ಕಿ ನಲುಗಿ ಹೋಗಿವೆ. ಇವುಗಳನ್ನೆಲ್ಲ ಗಟ್ಟಿಯಾಗಿ ಕೇಳಿದರೆ ಕೇಳಿದವರ ಎದುರಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಎದ್ವಾ ತದ್ವಾ ಬೈದು ನಂತರ ಹಿಂದುಗಡೆಯಿಂದ ಯಥಾ ಸ್ಥಿತಿ ಕಾಪಾಡುವುದು ಪ್ರಜಾತಂತ್ರದ ಪ್ರಮುಖ ಆಡಳಿತ ವೈಖರಿಯಾಗಿದೆ..

ಇಂತಹವುಗಳಿಂದ ಮುಕ್ತಿಯಾಗುವುದಾದರೂ ಯಾವಾಗ, ಮುಂದಿನ ಪೀಳಿಗೆಗೆ ಯಾವ ಸಂಪನ್ಮೂಲ ಪ್ರಯೋಜನಕಾರಿಯಾಗಿ ಇಟ್ಟಿರುತ್ತಾರೆ ಎಂಬುದು. ಭೀಕರವಾದ ಸನ್ನಿವೇಶ ಎದುರಾಗಿದೆ. ವಿದ್ಯಾವಂತರೇ, ದಡ್ಡರಂತೂ ಅಲ್ಲಿ, ನಿರ್ಧಿಷ್ಟವಾಗಿ ಒಂದು ಪ್ಲಾನ್ ಚೌಕಟ್ಟಿನಲ್ಲೇ ನಡೆಯುವಂತಹ ವ್ಯವಹಾರಗಳು "ಹುಚ್ಚು ಮುಂಡೆ ಸರ್ಕಾರದಲ್ಲಿ ಉಂಡವನೇ ಜಾಣ" ಎಂಬ ಗಾದೆ ಮಾತಿನಂತೆ. ಇನ್ನು ಕೆಲವೊಂದಷ್ಟು ಮಂದಿ ಇಂತಹ ವ್ಯವಹಾರಗಳು ಅರ್ಥವಾಗದೆ ಮೂರ್ಖರಂತೆ ವರ್ತಿಸುವ ಮಹನೀಯರುಗಳಿರುತ್ತಾರೆ. ಅಲ್ಲದೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಪ್ರಾಮಾಣಿಕ ವ್ಯಕ್ತಿಗಳು ಇದ್ದಾರೆ. ಇವರಿಗೆ ಪ್ರಪಂಚ ತಲೆ ಕೆಳಗಾದರೂ ಏನೂ ಆಗಲಿಲ್ಲವೇನೋ ಎನ್ನುವಂತಿರುತ್ತಾರೆ. ಒಟ್ಟಿನಲ್ಲಿ ಪ್ರಜಾತಂತ್ರದ ನಮ್ಮ ಬದುಕಿನ ವ್ಯವಸ್ಥೆಗಳೆಲ್ಲ ಅಭಿವೃದ್ಧಿ ಕಾಣುತ್ತ ಕಾಣುತ್ತಲೆ ಅವನತಿಯ ಹಾದಿಯ ಅಂಚಿನಲ್ಲಿ ಸ್ವರ್ಗಸುಖದ ಅನುಭವದ ಕನಸನ್ನು ಕಾಣುವಂತಾಗಿದೆ ಎಂಬೋಣ!

-ಪ್ರಭಾಕರ ಸಾಂಶಿ

GLOBAL INVESTORS MEET
JUNE 2000 - BANGALORE, INDIA

ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನ

ಏನು ಸಾಧಿಸಿತು?

ಜೂನ್ ಮೊದಲವಾರದಲ್ಲಿ ಎರಡು ದಿನಗಳ 'ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನ' ವನ್ನು ಅದ್ದೂರಿಯಾಗಿ ಕರ್ನಾಟಕ ಸರ್ಕಾರ ಸಂಘಟಿಸಿತು. ಈ ಸಮ್ಮೇಳನವನ್ನು ಸಂಘಟಿಸಲು ಇಡೀ ಸರ್ಕಾರಿ ಯಂತ್ರ ಬೇರೆಲ್ಲಾ ಕೆಲಸ ಬಿಟ್ಟು ಕಂಕಣಬದ್ಧವಾಗಿ ನಿಂತಿತ್ತು. ಈ ಸಮ್ಮೇಳನ ಸಂಘಟಿಸಲು ಸರ್ಕಾರ ಐದು ಕೋಟಿ ಸುರಿದಿತ್ತು. ಈ ಸಮ್ಮೇಳನ ಏನು ಸಾಧಿಸಿತು? ಇದು ರಾಜ್ಯದ ಬೆಳವಣಿಗೆಗೆ ಏನಾದರೂ ಸಹಾಯ ಮಾಡೀತೆ? ಎಂದು ಪರಿಶೀಲಿಸುವ ಲೇಖನ.

ವಿದೇಶಿ ಬಂಡವಾಳಕ್ಕೆ ಕಾದು ನಿಂತ ರಾಜ್ಯದ ಬೆಳವಣಿಗೆ

ಶರತ್ ಚಂದ್ರ

ಸರ್ಕಾರದ ಪ್ರಕಾರ 'ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನ' ಭಾರಿ ಬಂಪರ್ ಯಶಸ್ವಿ. ಈ ಸಮ್ಮೇಳನಕ್ಕೆ ದೇಶ-ವಿದೇಶಗಳಿಂದ ಸುಮಾರು 275 ಪ್ರಮುಖ ಉದ್ಯಮಪತಿಗಳು ಬಂದಿದ್ದರು. 68 ಪ್ರಮುಖ ರಾಜತಾಂತ್ರಿಕ ಅಧಿಕಾರಿಗಳು ಬಂದಿದ್ದರು. ಹತ್ತಾರು ಅಂತರ್ರಾಷ್ಟ್ರೀಯ ಖ್ಯಾತಿಯ ಅರ್ಥಶಾಸ್ತ್ರಜ್ಞರು ಆ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣಗಳಿಗೆ ಬಂದಿದ್ದರು.

ಒಟ್ಟು ಹತ್ತುಸಾವಿರ ಕೋಟಿಯಷ್ಟು ಬಂಡವಾಳಹೂಡಿಕೆಯ 16 ಯೋಜನೆಗಳ ಪ್ರಸ್ತಾವ ಬಂದಿದ್ದು, ಅವನ್ನು ಒಂದೇ ವಾರದೊಳಗೆ ಮಂಜೂರು ಮಾಡಲಾಗಿದೆ. ಇವುಗಳಲ್ಲಿ ದೂರಸಂಪರ್ಕ ಮತ್ತು ಸಾಫ್ಟ್‌ವೇರ್ ಕ್ಷೇತ್ರದ ಮೂರು ಯೋಜನೆಗಳು (1543 ಕೋಟಿ ರೂ.), ವಿದ್ಯುತ್ ಕ್ಷೇತ್ರದ ಮೂರು ಯೋಜನೆಗಳು (5624 ಕೋಟಿ ರೂ.), ಎಲೆಕ್ಟ್ರಾನಿಕ್ಸ್ - ಆಟೋಮೊಬೈಲ್ ಕ್ಷೇತ್ರದ ಮೂರು ಯೋಜನೆಗಳು (816 ಕೋಟಿ ರೂ.) ಕೃಷಿ ಆಹಾರ ಸಂಸ್ಕರಣೆಯ ಎರಡು ಯೋಜನೆಗಳು(352 ಕೋಟಿ ರೂ.) ಮತ್ತು 1421 ಕೋಟಿ ರೂ. ಪೆಟ್ರೋಕೆಮಿಕಲ್ಸ್ ಯೋಜನೆ - ಪ್ರಮುಖ ಮಂಜೂರು ಪಡೆದ ಯೋಜನೆಗಳು. ಇವುಗಳಲ್ಲಿ ನಾಲ್ಕು ಬಹುರಾಷ್ಟ್ರೀಯ ಕಂಪನಿಗಳು ನೇರವಾಗಿ, ಇನ್ನೆರಡು ದೇಶೀಯ ಕಂಪನಿಗಳ ಜತೆ ಜಂಟಿಯಾಗಿ ಬಂಡವಾಳ ಹೂಡುತ್ತಿವೆ. ಐದು ಯೋಜನೆಗಳು ಬೆಂಗಳೂರಿನಲ್ಲಿದ್ದರೆ, ಉಳಿದವು ಇತರ ಕೇಂದ್ರಗಳಲ್ಲಿರುತ್ತವೆ.

ಇವೆಲ್ಲ ನೋಡಿದರೆ ಸಮ್ಮೇಳನ ಭಾರಿ ಯಶಸ್ವೀ ಎನ್ನಿಸುವುದಿಲ್ಲವೇ? ಮೊದಲ ನೋಟಕ್ಕೆ ಹೌದೆನಿಸಬಹುದಾದರೂ, ಹಲವು ಅಂಶಗಳನ್ನು ಗಮನಿಸಿದರೆ ಇದು ರಾಜ್ಯದ ಬೆಳವಣಿಗೆಯಲ್ಲಿ ದೊಡ್ಡ ಪಾತ್ರ ವಹಿಸದಿರಬಹುದು. ಅಥವಾ ದೂರಗಾಮಿಯಾಗಿ ಮಾರಕವೂ ಆಗಬಹುದು ಅಂತ ಗೊತ್ತಾಗುತ್ತದೆ.


ಮೊದಲನೆಯದಾಗಿ ಈಗ ಮಂಜೂರಾಗಿರುವ ಎಲ್ಲಾ ಯೋಜನೆಗಳು ನಿಜವಾಗಿ ಕಾರ್ಯಗತವಾಗುತ್ತದೆ ಎಂತೇನೂ ಗ್ಯಾರಂಟಿ ಇಲ್ಲ. ಇದು ಈವರೆಗಿನ ಅನುಭವ. ಬೇರೆ ಬೇರೆ ಕಾರಣಗಳಿಗೆ ಈ ಅದ್ದೂರಿಯಾಗಿ ಪ್ರಕಟವಾದ ಯೋಜನೆಗಳು ಜಾರಿಯಾಗದೆ ಹೋಗುತ್ತದೆ. ರಾಜ್ಯ ಸರ್ಕಾರದಿಂದ ಇನ್ನಷ್ಟು ಸವಲತ್ತುಗಳನ್ನು ಕಿತ್ತುಕೊಳ್ಳುವ ದುರಾಸೆಯಿಂದ ಹೀಗಾಗುವುದುಂಟು. ಈ ಕಂಪನಿಗಳಿಗೆ ದುಂಬಾಲು ಬೀಳುತ್ತಾ, ಅವುಗಳ ಮುಗಿಯದ ಶರತ್ತುಗಳನ್ನು ಪೂರೈಸಲಾಗದೆ ಯೋಜನೆ ಕೈಬಿಟ್ಟದ್ದೂ ಇದೆ. ಕೊಜೆಂಟ್ರಿಕ್ಸ್ ಯೋಜನೆ ಇದಕ್ಕೆ ಒಳ್ಳೆ ಉದಾಹರಣೆ.

ಇದಲ್ಲದೆ ದೇಶ-ವಿದೇಶಿ ಬಂಡವಾಳ ರಾಜ್ಯಕ್ಕೆ ಹರಿದು, ಹೂಡಿಕೆಯಾಗುವುದು ಸ್ವಾಗತಾರ್ಹವಾದರೂ, ರಾಜ್ಯದ ಬೆಳವಣಿಗೆಗೆ ಅದು ಪೂರಕವಾಗಿರಬೇಕು. ರಾಜ್ಯದ ಬೆಳವಣಿಗೆಯ ಅಗತ್ಯಗಳಿಗೆ ಹೊಂದಿಕೊಂಡಿರಬೇಕು ಎನ್ನುವುದು ಸಹಜ. ಈಗ ಮಂಜೂರಾಗಿರುವ ಯೋಜನೆಗಳು ಎಷ್ಟರಮಟ್ಟಿಗೆ ರಾಜ್ಯದ ಬೆಳವಣಿಗೆಗೆ ಪೂರಕವಾಗಿದೆಯೆಂದು ವಿಚಾರಿಸಬೇಕು. ಉದಾಹರಣೆಗೆ ಝಿ ಟೆಲಿಫಿಲಂನ 700 ಕೋಟಿ ರೂ. ಹೂಡಿಕೆಯನ್ನೇ ತೆಗೆದುಕೊಳ್ಳಿ. ಇದರಲ್ಲಿ 500 ಕೋಟಿ ರೂ. ಫೈಬರ್-ಕೇಬಲ್‌ಗಳನ್ನು ಹಾಕಲಿಕ್ಕೆ ಹೋಗುತ್ತದೆ. ಇದನ್ನು ಝಿ ಕಂಪನಿ ತನ್ನ ಕೇಬಲ್ ನೆಟ್‌ವರ್ಕ್‌ನ್ನು ವಿಸ್ತರಿಸಿ ಗಟ್ಟಿಗೊಳಿಸಬಹುದು. ಇದರಿಂದ ರಾಜ್ಯದ ಬೆಳವಣಿಗೆಗೆ ಅಂತಹ ಏನೂ ಲಾಭವಾಗುವುದಿಲ್ಲ. ಝಿ ಟೆಲಿಫಿಲಂ ಇನ್ನೊಂದು ನೂರು ಕೋಟಿ ಭಾರಿ ದುಬಾರಿ ವೆಚ್ಚದ ಮನೋರಂಜನಾ ಕೇಂದ್ರಗಳನ್ನು ಬೆಂಗಳೂರು ಮತ್ತು ಇತರ ನಗರಗಳಲ್ಲಿ ಸ್ಥಾಪಿಸಲು ಬಳಸಲಿದೆ. ಉಳಿದದ್ದು ಭಾರಿ ಅತ್ಯಾಧುನಿಕ ಸ್ಟುಡಿಯೋ ಮತ್ತು ಅದರ ಸ್ಯಾಟಲೈಟ್ ಜತೆ ಸಂಪರ್ಕ ಮಾಡುವ ಅತ್ಯಾಧುನಿಕ ವ್ಯವಸ್ಥೆಗೆ ಹಣ ಹೂಡಲಿದೆ. ಇವೆಲ್ಲ ರಾಜ್ಯದ ಬೆಳವಣಿಗೆಗೆ ಹೇಗೆ ಸಹಕಾರಿಯಾದಾವು? ಇವ್ಯಾವು ಜನರ ಮೂಲಭೂತ ಸಮಸ್ಯೆಗಳಾದ ನೀರು, ಆಹಾರ, ವಿದ್ಯುತ್, ಆರೋಗ್ಯ, ರಸ್ತೆ - ಮುಂತಾದ ಮೂಲಭೂತ ಸೌಕರ್ಯದ ಬಳಿಗೂ ಸುಳಿಯುವುದಿಲ್ಲ.

ಇನ್ನು ಖಾಸಗಿ ವಿದ್ಯುತ್ - ಯೋಜನೆಗಳ ಹಣೆಬರಹವನ್ನು ನಾವು ಈಗಾಗಲೇ ಕೊಜೆಂಟ್ರಿಕ್ಸ್‌ಗಾದ ಗತಿಯಿಂದ ನೋಡಿದ್ದೇವೆ.

ಇದರರ್ಥ ದೇಶಿ-ವಿದೇಶಿ ಬಂಡವಾಳ ಹೂಡಿಕೆ ಅಗತ್ಯವಿಲ್ಲ. ಇಂತಹ ಎಲ್ಲಾ ಬಂಡವಾಳ ಹೂಡಿಕೆ ಅನಗತ್ಯ. ಪ್ರಯೋಜನಕಾರಿ ಅಲ್ಲ. ಅಂತ ಅರ್ಥವಲ್ಲ. ಆದರೆ ವಿದೇಶಿ ಬಂಡವಾಳವನ್ನು ಬೇಕಾಬಿಟ್ಟಿ ಆಮಂತ್ರಿಸುವ ಬದಲು, ನಮ್ಮಲ್ಲಿ ಇರದ ನಾವು ಅಭಿವೃದ್ಧಿಪಡಿಸಲು ಆಗದ ಉಚ್ಚ ತಂತ್ರಜ್ಞಾನಕ್ಕೆ ಸೀಮಿತಗೊಳಿಸಬೇಕು. ಉಳಿದಂತೆ ನಮ್ಮ ರಾಜ್ಯದ ಜನರ ಅಗತ್ಯಗಳಿಗೆ ಬೇಕಾದ ಕೈಗಾರಿಕೆಗಳಿಗೆ ಬಂಡವಾಳ ನಿರ್ದೇಶಿಸಬೇಕು. ಇದು ಆಗುವಂತೆ ಕಾಣುತ್ತಿಲ್ಲ.

ಇಂದಿನ ಖಾಸಗಿ ಬಂಡವಾಳದ ಮೇಲೆ ಆಧರಿಸಿರುವ ಬೆಳವಣಿಗೆ ಪಥದಲ್ಲಿ, ಖಾಸಗಿಯವರಿಗೆ ಯಾವುದು ಹೆಚ್ಚು ಲಾಭ



ತರುತ್ತದೋ ಅದೇ ಆದ್ಯತೆ. ಅದನ್ನೂ ನನ್ನ ರಾಜ್ಯದಲ್ಲಿ ಹೂಡು, ನನ್ನ ರಾಜ್ಯದಲ್ಲಿ ಹೂಡು ಅಂತಾ ಭಾರಿ ಸವಲತ್ತು ಕೊಟ್ಟರೆ ಮಾತ್ರ ಆತ ಹೂಡುತ್ತಾನೆ. ಇದಕ್ಕಾಗಿ ಮೂಲಭೂತ ಸೌಕರ್ಯ ಸರ್ಕಾರ ಕಲ್ಪಿಸಬೇಕು ಅಂತ ಆತ ಬಯಸುತ್ತಾನೆ. ನೀರು, ವಿದ್ಯುತ್, ರಸ್ತೆ ಇತ್ಯಾದಿ ಮೂಲಸೌಕರ್ಯ ಒದಗಿಸಲೂ ಈಗ ಸರ್ಕಾರದ ಬಳಿ ಸಂಪನ್ಮೂಲ ಇಲ್ಲ - ಈಗಿನ ಖಾಸಗೀಕರಣ ಬೆಳವಣಿಗೆ ಫಿಲಾಸಫಿಯಿಂದ. ಇದಕ್ಕೂ ವಿದೇಶಿ ಬಂಡವಾಳದ, ಅಥವಾ ವಿಶ್ವಬ್ಯಾಂಕಿನ ದುಬಾರಿ ಸಾಲದ ಮೊರೆ ಹೋಗಬೇಕಾಗುತ್ತದೆ. ಅದರ ಬೆಲೆಯನ್ನು ಜನ ತೆರಬೇಕು. ಈಗಾಗಲೇ ಮುಖ್ಯಮಂತ್ರಿಗಳ ಈ ಸಮ್ಮೇಳನದ ವೇದಿಕೆಯಿಂದ ವಿದ್ಯುತ್, ನೀರು ಖಾಸಗೀಕರಿಸುವ ಬೆಲೆ ಏರಿಸುವ ಬಗ್ಗೆ ಅಪ್ಪಣೆ ಕೊಡಿಸಿದ್ದಾರೆ. ಅದೇ ಉಸಿರಿನಲ್ಲಿ ಬಂಡವಾಳ-ಹೂಡಿಕೆದಾರರಿಗೆ 2004ರ ಹೊತ್ತಿಗೆ ವಿಶ್ವ-ಮಟ್ಟದ ಮೂಲಭೂತ ಸೌಕರ್ಯ ಒದಗಿಸುವ ಭರವಸೆ ನೀಡಿದ್ದಾರೆ.

ಇಂತಹ ಬಂಡವಾಳ-ಹೂಡಿಕೆಯಿಂದ ರಾಜ್ಯಕ್ಕೆ ಸಾಮಾನ್ಯ ಜನತೆಗೆ ಏನು ಸಹಾಯಕಾರಿಯಾದಂತಾಯಿತು?

ಇನ್ನೊಂದು ಕಡೆ ದೇಶ-ವಿದೇಶಿ ಬಂಡವಾಳ ಹೂಡಿಕೆ ಆಕರ್ಷಿಸುವ ಕೆಲಸಕ್ಕೆ ಸರ್ಕಾರ ಆದ್ಯತೆ ಕೊಟ್ಟು, ಬೇರೆ ಎಲ್ಲಾ ಬೆಳವಣಿಗೆ-ಕ್ರಮಗಳನ್ನು ನಿರ್ಲಕ್ಷಿಸುತ್ತಿದೆ. ಉದಾಹರಣೆಗೆ ರಾಜ್ಯದ ಇಂದಿನ ಕೈಗಾರಿಕಾ-ಆರ್ಥಿಕ ಮುನ್ನಡೆಗೆ ಅಡಿಪಾಯದ, ಬೆನ್ನೆಲುಬಾದ ರಾಜ್ಯ ಸರ್ಕಾರವೇ ಉತ್ತೇಜನ ನೀಡಿ ಸ್ಥಾಪಿಸಿದ ಹಲವು ಕೈಗಾರಿಕೆಗಳನ್ನು ಆಧುನೀಕರಿಸಲು, ನಡೆಸಲು ಯಾವುದೇ ಆಸಕ್ತಿ ತೋರಿಸುತ್ತಿಲ್ಲ. ಅವನ್ನೆಲ್ಲಾ ಮುಚ್ಚುವ ತರಾತುರಿಯಲ್ಲಿದೆ. ಕೋಲಾರ ಚಿನ್ನದ ಗಣಿ, ಮೈಸೂರು ಲ್ಯಾಂಪ್ಸ್, ಭದ್ರಾವತಿ ಕಬ್ಬಿಣ ಕಾರ್ಖಾನೆ ಇತ್ಯಾದಿ ಇವಕ್ಕೆ ಉದಾಹರಣೆ. ಇದಲ್ಲದೆ ರಾಜ್ಯದ ಕೈಗಾರಿಕಾ ಕ್ಷೇತ್ರದ ಬೆನ್ನೆಲುಬಾದ ರಾಜ್ಯದ ಅರ್ಧದಷ್ಟು ರಫ್ತಿಗೆ ಕಾರಣವಾದ, ಉದ್ಯೋಗವಕಾಶಗಳಲ್ಲಿ ಸಿಂಹಪಾಲು ಸೃಷ್ಟಿಸುತ್ತಿದ್ದ ಸಣ್ಣ ಕೈಗಾರಿಕೆಗಳನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಬಹುರಾಷ್ಟ್ರೀಯ ವಿದೇಶಿ ಕಂಪನಿಗಳಿಗೆ ಪೂರ್ಣ ಉತ್ತೇಜನ ನೀಡುವ ನೀತಿ, ಹಲವು ಕ್ಷೇತ್ರಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ತೀವ್ರ ಹೊಡೆತ ನೀಡಲಿದೆ. ಇಂತಹ ಹಿನ್ನೆಲೆಯ 'ವಿಶ್ವ ಸಮ್ಮೇಳನ' ಭಾರಿ ಯಶಸ್ವಿ. ಇದು ರಾಜ್ಯದ ಬೆಳವಣಿಗೆಗೆ ಅತ್ಯಗತ್ಯ ಎನ್ನುವುದು ಎಷ್ಟು ಸುಳ್ಳು ಎಂದು ತಿಳಿಯುತ್ತದೆ. 'ವಿಶ್ವಸಮ್ಮೇಳನ' ಪ್ರತಿನಿಧಿಸುವ ಬೆಳವಣಿಗೆ ಪಥ ರಾಜ್ಯದ ಬೆಳವಣಿಗೆಗೆ ಪೂರಕವಲ್ಲ, ದೂರಗಾಮಿಯಾಗಿ ಮಾರಕ ಎನ್ನುವುದು ನೆರೆ ರಾಜ್ಯದಲ್ಲಿ ವಿದ್ಯುತ್ ಬೆಲೆ ಏರಿಕೆಯಿಂದ ಈಗಾಗಲೇ ತಿಳಿಯುತ್ತದೆ. ವಿಶ್ವಬ್ಯಾಂಕ್‌ಗೆ ಇಡೀ ರಾಜ್ಯವನ್ನು ಅಡವಿಟ್ಟಿರುವ ಚಂದ್ರಬಾಬು ನಾಯ್ಡು ನೀತಿಯನ್ನು ಕೃಷ್ಣ ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ. ಕರ್ನಾಟಕವನ್ನು ಆಂಧ್ರದ ಪಥದಲ್ಲಿ ಒಯ್ಯುತ್ತಿದ್ದಾರೆ.

ಜೀವಂತವಿರುವ ಜೀತಪದ್ಧತಿ

ಪುಟ 2 ರಿಂದ

ಹೊಲ-ಗದ್ದೆಗಳಲ್ಲಿ ತೀರಾ ಕಡಿಮೆ ಕೂಲಿಗೆ ದುಡಿಸಿಕೊಳ್ಳುವ ಪರಿಪಾಠವಿದೆ. ಬಿಟ್ಟಿ ಚಾಕರಿ ಮಾಡಿ ಒಡೆಯನ ಖಜಾನೆ ತುಂಬಿಸಿ ಕೊನೆಯುಸಿರೆಳೆದ ಧಾರುಣ ಘಟನೆಗಳಿಗೆ ಲೆಕ್ಕವಿಲ್ಲ. ಇದಕ್ಕೆ ಸಿಕ್ಕಿ ನರಳುತ್ತಿರುವವರು ಬಹುತೇಕವಾಗಿ ದಲಿತರು ಹಾಗೂ ಕೆಳಜಾತಿಯವರು. ಇವರೆಲ್ಲಾ ಗಂಜಿಗೂ ಗತಿಯಿಲ್ಲದೆ ಸೊರಗುವ ಭೂಹೀನರು. ಆದ್ದರಿಂದ ಪ್ರತಿಭಟಿಸಿದರೆ ಹೆಣವಾಗಿ ಉರುಳುವವರೂ ಇವರೇ. ಅನೇಕ ಪ್ರತಿಭಟನೆ, ಹೋರಾಟಗಳಿಂದ ರೂಪಿತವಾದ ಹಲವಾರು ಈ ಕಾನೂನುಗಳು ಜಾರಿಯಾಗದಂತೆ ತಡೆಯುವವರು ಪುಟ್ಟಸ್ವಾಮಿಯಂತಹ ಮಾಲೀಕರೇ.

ಇನ್ನೊಂದು ಗಾಬರಿಹುಟ್ಟಿಸುವ ಸಂಗತಿಯೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮತಯಾಚನೆಗೆ ಅದೇ ಪ್ರದೇಶಕ್ಕೆ ಬಂದಿದ್ದ ಅಭ್ಯರ್ಥಿ ಹಾಲಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯನವರು ಕೂಲಿಯಾಳುಗಳ ಸ್ಥಿತಿಯನ್ನು ಕಣ್ಣಾರೆ ಕಂಡು, ಬಿಡಿಸುವ ಭರವಸೆ ನೀಡಿದ್ದರು ಎಂಬುದು. ಆದರೆ ತಕ್ಷಣವೇ ಕಾರ್ಯವೆಸಗದೇ, ಆಯ್ಕೆಯಾದ ಮೇಲೂ ನಿರ್ಲಕ್ಷಿಸಿದ್ದು ಈ ಜನಪ್ರತಿನಿಧಿಯ ವರ್ತನೆ ಖಂಡನೀಯ. ಹಾಗೆಯೇ ಜೀತಪದ್ಧತಿಯನ್ನು ನಿರ್ಮೂಲ ಮಾಡಲಾಗದೆಯೆಂದು ಡಂಗುರ ಹೊಡೆಯುವವರ ಮಾತುಗಳಿಗೆ ಏನಾದರೂ ಅರ್ಥವಿದೆಯೇ? ಇಂತಹ ವ್ಯವಸ್ಥೆಯನ್ನು ರಕ್ಷಿಸಿ, ಮುಂದುವರಿಸುತ್ತಿರುವ ಪಾತಕದಲ್ಲಿ ಪಾಲು ಈ ಎಲ್ಲಾ ಭೂಮಾಲೀಕ-ಬಂಡವಾಳಶಾಹಿ ಪಕ್ಷದ್ದು.

ಕೆಲವು ಪತ್ರಿಕೆಗಳು, ಇಡೀ ಘಟನೆಯನ್ನು ಸವಿವರವಾಗಿ ಬಯಲಿಗೆ ತಂದ ನಂತರ ರಾಜ್ಯದ ಗೃಹಸಚಿವರೂ, ಉಸ್ತುವಾರಿ ಸಚಿವರು ಅಲ್ಲಿಗೆ ಭೇಟಿ ನೀಡಿದ್ದಾರೆ. ಸಾಂತ್ವಾನದ ನಾಲ್ಕು ಮಾತುಗಳನ್ನೇನೋ ಆಡಿದ್ದಾರೆ. ಸರಪಳಿ ಬಿಚ್ಚಿಸಿದ್ದಾರೆ. ಇಲ್ಲಿಗೆ ಎಲ್ಲವೂ ಮುಗಿದಂತೆ ಎಂದು ಅವರು ಭಾವಿಸಿದರೆ ಅದು ಕ್ಷಮಿಸಲಾಗದ ಅಪರಾಧವಾದೀತು. ಬಿಡುಗಡೆಗೊಂಡವರಿಗೆ ದುಡಿಮೆಯ ಪರ್ಯಾಯದ ವ್ಯವಸ್ಥೆ ಆಗಬೇಕು. ಭದ್ರತೆಯೂ ಬೇಕು. ಈ ಪೈಶಾಚಿಕತೆ ಮೆರೆದ ಮಾಲೀಕನಿಗೆ, ಅವನ ಸಹಚರರ ಮೇಲೆ ಕಠಿಣ ಕ್ರಮಕೈಗೊಂಡು ಬಗ್ಗುಬಡಿಯಬೇಕು. ಇದರಲ್ಲಿ ಪೋಲೀಸರನ್ನು ಒಳಗೊಂಡು ಉಳಿದ ಅಧಿಕಾರಿಗಳು ಶಾಮೀಲಾಗಿದ್ದು ಅವರ ವಿರುದ್ಧವೂ ನಿಷ್ಠುರ ಕ್ರಮ ಕೈಗೊಳ್ಳಬೇಕು. ಮಾಲೀಕ ಪುಟ್ಟಸ್ವಾಮಿಯು ಗಣಿಗಾರಿಕೆಗಾಗಿ ಪರವಾನಗಿ ಪಡೆದ ಭೂಮಿ ಎರಡು ಎಕರೆ ಮಾತ್ರ. ಆದರೆ ಬಳಸಿದ್ದು 36 ಎಕರೆ. ಈ ಅಕ್ರಮ ಸಂಪತ್ತು ಗಳಿಕೆಯನ್ನು ಸರ್ಕಾರ ವಶಪಡಿಸಿಕೊಳ್ಳಬೇಕು. ಒಟ್ಟಾರೆ ಉಗ್ರ ಕ್ರಮ ಕೈಗೊಳ್ಳದೇ ಹೋದರೆ ಇಂತಹ ಘಟನೆಗಳು ಕೊನೆಗೊಳ್ಳದೆ ಇನ್ನೂ ಬಲಗೊಳ್ಳಬಹುದು. ನಾಡಿನ ಎಲ್ಲಾ ಮಾನವೀಯತೆ, ಸ್ವಾತಂತ್ರ್ಯ, ಸಮಾನತೆಯನ್ನು ಪ್ರೀತಿಸುವವರು ಈ ಸ್ಥಿತಿಯ ವಿರುದ್ಧ ಪ್ರತಿಭಟಿಸಬೇಕು. ನಿರ್ಮೂಲನಗೊಳಿಸಲು ಶ್ರಮಿಸಬೇಕು.

ಸಾಲದ ಬಲೆಯ

— ಯು.ಬಸವರಾಜ —

ಭೂಮಿ, ವ್ಯವಸಾಯ ಉಪಕರಣಗಳು ಮತ್ತು ಶ್ರಮಶಕ್ತಿ ಇವಿಷ್ಟೇ ಹೊಂದಿದ್ದರೆ ರೈತನಿಗೆ ಇಂದು ಬೆಳೆ ಬೆಳೆಯಲು ಸಾಧ್ಯವಾಗುವುದಿಲ್ಲ! ಬೆಳೆಗೆ ಬೇಕಾದ ಬೀಜ, ಗೊಬ್ಬರ, ಕ್ರಿಮಿನಾಶಕಗಳನ್ನು ಕೊಂಡುಕೊಳ್ಳಲು ಅವನು 'ಸಾಲ'ವನ್ನು ಮಾಡಲೇಬೇಕಾಗಿದೆ. ಹಾಗೇ ಬೆಳೆಯನ್ನು ಆರು ತಿಂಗಳಿಗೊಮ್ಮೆ ಇಲ್ಲವೇ ವರ್ಷಕ್ಕೊಮ್ಮೆ ಕಾಣುವ ರೈತನು ಅಲ್ಲಿಯವರೆಗೆ ತನ್ನ ಕುಟುಂಬದ ಜೀವನ ನಿರ್ವಹಣೆಗಾಗಿ ಹಣ ಹೊಂದಿರದೇ ಇರುವುದರಿಂದ ಬರುವ ಬೆಳೆಯ ಮೇಲೆ ಭಾರ ಹಾಕಿ ಜೀವನ ನಿರ್ವಹಣೆಗಾಗಿಯೂ ಕಿರಾಣಿ ಅಂಗಡಿಗಳಲ್ಲಿ ಸಾಲ ರೂಪದಲ್ಲಿ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಬೇಕಾಗಿದೆ.

ಹೀಗಾಗಿ 'ಸಾಲ'ವಿಲ್ಲದೆ ಅವನು ಬೆಳೆ ಬೆಳೆಯಲು ಹಾಗೂ ಕುಟುಂಬ ನಿರ್ವಹಣೆ ಮಾಡಲು ಸಾಧ್ಯವಿಲ್ಲವಾಗಿದೆ. ಒಟ್ಟಾರೆ ಬಂಡವಾಳಶಾಹಿ-ಭೂಮಾಲಕರ ಸಮಾಜದಲ್ಲಿ ರೈತಾಪಿ ಜನತೆಗೆ 'ಸಾಲ' ಅನಿವಾರ್ಯ ಮತ್ತು ಒಂದು ಮುಖ್ಯ ಅಗತ್ಯ ಸಂಪನ್ಮೂಲವಾಗಿದೆ.

ಕಳೆದ ವರ್ಷದ ಉತ್ಪಾದನೆಯಲ್ಲಿ ಹೆಚ್ಚುವರಿ ಮೌಲ್ಯ ಕೈಯಲ್ಲುಳಿಯದೇ ಇರುವ ಪರಿಸ್ಥಿತಿಯಿಂದಾಗಿ ಹೊಸ ಉತ್ಪಾದನೆಗೆ ಅದು ಬೇಕೇಬೇಕಾಗಿದೆ. ಉದಾಹರಣೆಗೆ, ಕನಕಪ್ಪ ಒಬ್ಬ ಬಡ ರೈತ. ತನ್ನ ಸ್ವಂತ ಎರಡು ಎಕರೆ ಜಮೀನಿನಲ್ಲಿ ಭತ್ತದ ಬೆಳೆ ಬೆಳೆಯುತ್ತಿದ್ದಾನೆ. ಅವರ ಎಕರೆಯ ಉತ್ಪಾದನಾ ವೆಚ್ಚವು ಅವನಿಗೆ ಇರುವ ಆದಾಯಕ್ಕಿಂತ ಹೆಚ್ಚಾಗಿದೆ. ಕೋಷ್ಠಕ-1 ನ್ನು ಗಮನಿಸಿರಿ: ಅವನು ಎಕರೆಗೆ ಒಟ್ಟಾರೆ ಖರ್ಚು 17 ಸಾವಿರ ರೂಪಾಯಿನಷ್ಟಾದರೆ ಉತ್ಪನ್ನ 35 ಚೀಲ ಭತ್ತ ಬಂದಿದೆ! ಸರಾಸರಿ 450 ರೂಪಾಯಿಗೆ ಚೀಲದಂತೆ ಲೆಕ್ಕ ಹಾಕಿದರೂ ಒಟ್ಟು ಆದಾಯ 15.750 ರೂಪಾಯಿ ಮಾತ್ರವೇ ಆಗಿ ಸುಮಾರು 1000 ರೂ. ನಷ್ಟು ನಷ್ಟವಾಗುತ್ತಿದೆ(ಈ ದಿನದ ಮಾರುಕಟ್ಟೆಯಲ್ಲಿ ಚೀಲ ಭತ್ತದ ಬೆಲೆ ಕೇವಲ 350 ರೂ.) ದೊಡ್ಡ ಬಂಡವಾಳದಾರರು ನಿಗದಿಸುವ ಮಾರುಕಟ್ಟೆ ದರಗಳಿಂದ ರೈತರು ನಷ್ಟಕ್ಕೊಳಗಾಗುತ್ತಿದ್ದಾರೆ! ಮಾರುಕಟ್ಟೆಯ ಶಕ್ತಿಗಳಿಂದ ರಕ್ಷಿಸಲು ಪರಿಣಾಮಕಾರಿ ಕ್ರಮಗಳನ್ನು ಕೇಂದ್ರ-ರಾಜ್ಯ ಸರ್ಕಾರಗಳು ತೆಗೆದುಕೊಳ್ಳದೇ ಇರುವುದರಿಂದ ಒಂದೆಡೆ ಮಧ್ಯವರ್ತಿಗಳಿಂದ ಬಂಡವಾಳದಾರರಿಂದ ಬಡ್ಡಿ ವ್ಯಾಪಾರಿಗಳ ಸುಲಿಗೆಗೊಳಗಾಗಿ ರೈತನ ದುಡಿಮೆಯ ಪ್ರತಿಫಲವಾಗಿ ಕೂಲಿಯೂ ಉಳಿಯದಂತಾಗಿದೆ.

ಇಲ್ಲಿ ಮತ್ತೊಬ್ಬ ರೈತ ರಂಗಪ್ಪನನ್ನು ಗಮನಿಸಿ, ಈತ ಗೇಣಿದಾರ. ಪ್ರತಿ ಎಕರೆಗೆ 10 ಚೀಲ ನೆಲ್ಲು ಕೊಡುವ ಕರಾರಿನಂತೆ ಭೂಮಾಲಿಕ ವಿರುಪಣ್ಣಗೌಡರ ಜಮೀನನ್ನು ಉಳುಮೆ ಮಾಡುತ್ತಿದ್ದಾನೆ! ಸ್ವಂತ ಭೂಮಿ ಇರುವ ಕನಕಪ್ಪನೇ ತಲಾ ಎಕರೆಗೆ ಒಂದು ಸಾವಿರ ರೂಪಾಯಿ ನಷ್ಟ ಹೊಂದಿದರೆ, ರಂಗಪ್ಪ ಸುಮಾರು 4,500 ರೂಪಾಯಿಯಷ್ಟು ನಷ್ಟ ಅನುಭವಿಸುತ್ತಾನೆ! ಇಲ್ಲಿ ರಂಗಪ್ಪ ಒಂದೆಡೆ ಬಂಡವಾಳದಾರರಿಂದ - ಮಧ್ಯವರ್ತಿಗಳಿಂದ, ಅದೇ ರೀತಿ ಭೂಮಾಲಕರಿಂದ ಶೋಷಣೆಗೊಳಗಾಗಿ ತನ್ನ ದುಡಿಮೆಯ ಅಧಿಕಮೌಲ್ಯವನ್ನು ಅವರಿಗೆ ಹಂಚಿಕೊಟ್ಟು ಬಡತನದ ಬೇಗೆಯಲ್ಲಿ ಬಳಲುತ್ತಿದ್ದಾನೆ! ಪರಿಣಾಮವಾಗಿ ಇಂತಹ ಬಡರೈತರು - ಕೃಷಿಕೂಲಿಕಾರರು ಸ್ವಾತಂತ್ರ್ಯ, ಸ್ವಾವಲಂಬನೆಯಿಂದ ವಂಚಿತರಾಗಿ ದಾರಿದ್ರ್ಯದಲ್ಲಿ ಜೀವಿಸುತ್ತಿದ್ದಾರೆ! ಕನಿಷ್ಟ ಎರಡು ಹೊತ್ತಿನ ಸರಿಯಾದ ಆಹಾರ, ವಸತಿ, ಉಡುಪು, ವಿದ್ಯಾಭ್ಯಾಸದಿಂದ ಇಂತಹ ಕುಟುಂಬಗಳು ವಂಚಿತವಾಗಿವೆ!

ಒಂದು ವೇಳೆ ಆ ಭೂಮಿಯು ರಂಗಪ್ಪನದೇ ಆಗಿದ್ದಲೆ, ಸಾಲವು ಕಡಿಮೆ ಬಡ್ಡಿದರಕ್ಕೆ ಸಾರ್ವಜನಿಕ ರಂಗದಿಂದ ದೊರೆತಿದ್ದರೆ ಬೆಳೆಗೆ ನ್ಯಾಯ ಬೆಲೆ ಒದಗಿಸಲು ಮಾರುಕಟ್ಟೆಯ ಶಕ್ತಿಗಳಿಂದ ರಕ್ಷಣೆ ಒದಗಿಸಿದ್ದರೇ.... ಇಂತಹ ರೈತರ ಬಳಿ ಅವರ ದುಡಿಮೆಯ ಮಿಗುತಾಯ ಉಳಿದು ಅವರ ಕುಟುಂಬದ ದಾರಿದ್ರ್ಯ ಹೋಗಿ ಸಾಕ್ಷರತೆಯ ಜ್ಯೋತಿ ಬೆಳಗಿ ಮುನ್ನಡೆ ಸಾಧಿಸುತ್ತಿರಲಿಲ್ಲವೇ?

ಆದ್ದರಿಂದಲೇ ಅಖಿಲ ಭಾರತ ಕಿಸಾನ್ ಸಭಾ ಕರ್ನಾಟಕ ಪ್ರಾಂತ ರೈತ ಸಂಘ ಒಂದೆಡೆ ಭೂಸುಧಾರಣೆ-ಉಳುವವನಿಗೆ ಭೂಮಿ ಮತ್ತೊಂದೆಡೆ ಕಡಿಮೆ ಬಡ್ಡಿದರದ ಸಾರ್ವಜನಿಕ ರಂಗದ ಸಾಲ ಹಾಗೂ ಮಾರುಕಟ್ಟೆಯಿಂದ ರಕ್ಷಣೆ ನೀಡಿ ಬಡರೈತರನ್ನು ಭೂಮಾಲಕರು-ಬಡ್ಡಿ ವ್ಯಾಪಾರಸ್ಥರು - ಬಂಡವಾಳದಾರರಿಂದ ಬಿಡಿಸಲು ಸತತವಾಗಿ ಸರ್ಕಾರವನ್ನು ಒತ್ತಾಯಿಸುತ್ತಿವೆ. ಆದರೆ ಅದಿನ್ನೂ ಸಾಧ್ಯವಾಗಿಲ್ಲ.

ಕೇಂದ್ರ-ರಾಜ್ಯ ಸರ್ಕಾರಗಳು ಉಳುವವನಿಗೆ ಭೂಮಿಯನ್ನು ನೀಡಿ ದೇಶದ ಆಹಾರ ಸ್ವಾವಲಂಬನೆ ಹಾಗೂ ಕೈಗಾರಿಕೆಗೆ ಬೇಕಾದ ಕಚ್ಚಾಮೂಲ ಮತ್ತು ಆಮೂಲಕ ಆಂತರಿಕ ಮಾರುಕಟ್ಟೆ ನಿರ್ಮಿಸುವ ಬದಲು, ಬಡವರಿಗಾಗಿ ಭೂಸುಧಾರಣೆ ಎಂದು ಹೇಳಿ ಭೂಮಾಲಕರನ್ನೇ ಬಂಡವಾಳಶಾಹಿ ಭೂಮಾಲಕರನ್ನಾಗಿಸಿಕೊಂಡು, ಗ್ರಾಮೀಣ ಪ್ರದೇಶದಲ್ಲಿ ಕೆಲವು ಶ್ರೀಮಂತ ರೈತರನ್ನು ಸೃಷ್ಟಿಸಿಕೊಂಡು, ಅವರಿಗೆ 1950 ರಿಂದ ಸಹಕಾರಿ ರಂಗ ಆನಂತರ ಸಾರ್ವಜನಿಕ ರಂಗದ ಬ್ಯಾಂಕ್‌ಗಳ ಮೂಲಕ ಕೃಷಿಗೆ ನೀಡುವ ಸಾಲದ ಸಿಂಹಪಾಲು ನೀಡಿ, ಆಹಾರದ ಅಭಾವ ಹಾಗೂ ಕೈಗಾರಿಕೆಗೆ ಕಚ್ಚಾಮಾಲು ಒದಗಿಸಲು ಯತ್ನಿಸಿತು! ಆ ಮೂಲಕ ಗ್ರಾಮೀಣ ಪ್ರದೇಶದಲ್ಲಿ ರಾಜಕೀಯ ಹಿಡಿತ ಸಾಧಿಸಲು ಹಸಿರು ಕ್ರಾಂತಿಯ ಹರಿಕಾರನೂ ಆಯಿತು. ಇದರಿಂದ ಸ್ವಲ್ಪ ಮಟ್ಟಿನ ಸಾಧನೆಯನ್ನು ಮಾಡಲು ಸಾಧ್ಯವಾಯಿತಾದರೂ ದೇಶವನ್ನು ದಾರಿದ್ರ್ಯ ಹಾಗೂ ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ!

ಹೀಗಾಗಿ ಬಡ ರೈತ ಹಾಗೂ ಈಚಿನ ವರ್ಷಗಳಲ್ಲಿ ಮಧ್ಯಮ ರೈತರಿಗೂ ಆದಾಯವೇ ಸಿಗದೆ ಮುಂದಿನ ಬೇಸಾಯಕ್ಕೆ, ಹಾಗೂ ಜೀವನ ನಿರ್ವಹಣೆಗೆ ಸಾಲದ ಮೇಲೆಯೇ ಅವಲಂಬಿಸುವಂತಾಗಿದೆ.

ಸಹಕಾರಿ ರಂಗ ಹಾಗೂ ಸಾರ್ವಜನಿಕ ರಂಗವು ಒಟ್ಟುಕೃಷಿ ಸಾಲದ ಶೇ 56 ರಷ್ಟು ಒದಗಿಸುತ್ತಿದೆಯಾದರೂ, ಬಡ ರೈತನಿಗೆ ಒದಗಿಸುವ ಸಾಲ ಅಷ್ಟಕಷ್ಟೇ ಆಗಿದೆ. ಶೇ 20 ಬಡರೈತರಿಗೂ ಒದಗಿಸುತ್ತಿಲ್ಲ! ಉಳಿದ ಶೇ 44 ರಷ್ಟು ಖಾಸಗೀಯವರಿಂದ ಸಾಲ ಪಡೆಯುತ್ತಿರುವವರಲ್ಲಿ ಸಿಂಹಪಾಲು ಬಡರೈತರದೇ ಎಂಬುದರಲ್ಲಿ ಅನುಮಾನಬೇಕಿಲ್ಲ!

ಆದಾಗ್ಯೂ ಸಹಕಾರಿ ಸಂಘ, ಸಾರ್ವಜನಿಕ ರಂಗದ ಸಾಲ ಸಿಗುವಲ್ಲಿ ಬಡ್ಡಿ ವ್ಯಾಪಾರಿಗಳ ಅಥವಾ ಖಾಸಗೀ ಸಾಲ ನೀಡುವ ಸಾಹುಕಾರರ ಯಥೇಚ್ಛ ಸುಲಿಗೆಗೆ ಕಡಿವಾಣ ಹಾಕಿತ್ತು. ಅದರಿಂದಾಗಿ ಆಮಟ್ಟಿಗೆ ಅವರ ಅಟ್ಟಹಾಸ ತಹಬಂಧಿಗೆ ಬಂದಿತ್ತೆಂಬುದರಲ್ಲಿ ತಪ್ಪೇನಿಲ್ಲ.

ಆದರೆ ಕಳೆದ ಒಂದೂವರೆ ದಶಕದಿಂದ ಕೇಂದ್ರ-ರಾಜ್ಯ ಸರಕಾರಗಳು ಜಾರಿಗೆ ತಂದಿರುವ ಹೊಸ ಆರ್ಥಿಕ ಹಾಗೂ ಕೃಷಿ ನೀತಿಗಳ ಪರಿಣಾಮವಾಗಿ ರೈತರ ಉತ್ಪಾದನಾ ವೆಚ್ಚವು ಸಬ್ಸಿಡಿ ಕಡಿತ, ಹಣದುಬ್ಬರ ಹಾಗೂ ಬೆಲೆ ಏರಿಕೆಗಳಿಂದಾಗಿ ಅದರ ಹಿಂದಿನ ವರ್ಷಗಳಿಗೆ ಹೋಲಿಸಿದರೆ ದ್ವಿಗುಣಗೊಂಡಿದೆ. ಅದಕ್ಕನುಗುಣವಾಗಿ ಸಾಲದ ಮೇಲಿನ ಬಡ್ಡಿಯೂ ಬೆಳೆದಿದೆ. ಆದರೆ ಉತ್ಪಾದನೆ ಮಾತ್ರ ಕಳೆದ ಹತ್ತು ವರ್ಷಗಳಿಗೆ ಹೋಲಿಸಿದರೆ ಹೆಚ್ಚುವರಿಯಾಗಿಲ್ಲ, ಬದಲಿಗೆ ಕುಂಠಿತಗೊಂಡಿದೆ. ಕಾರಣಗಳು ಅನೇಕವಿರಬಹುದು, ಪರಿಣಾಮವೊಂದೆ.

ಉದಾಹರಣೆಗೆ: 10,15 ವರ್ಷಗಳ ಹಿಂದೆ 15-20 ಕ್ವಿಂಟಾಲ್ ಹತ್ತಿ ಪಡೆಯಲಾಗುತ್ತಿತ್ತು. ಈಗದು ಕೇವಲ 8-10 ಕ್ವಿಂಟಾಲ್‌ಗಿಳಿದಿದೆ. ಒಣಮೆಣಸಿನ ಕಾಯಿಯು 10-15 ಕ್ವಿಂಟಾಲ್ ಬರುತ್ತಿದ್ದುದು 5 ರಿಂದ 8 ಕ್ವಿಂಟಾಲ್‌ಗೆ ಇಳಿದಿದೆ.

ಅದೇ ಸಂದರ್ಭದಲ್ಲಿ ಹೊಸ ಆರ್ಥಿಕ ನೀತಿಯ ಭಾಗವಾಗಿ ಜಾರಿಗೆ ಬಂದ ಆಮದು-ರಫ್ತು ನೀತಿಗಳು ರೈತರ ಬೆಳೆಯ ಬೆಲೆಯನ್ನು ತೀವ್ರವಾಗಿ ಕುಸಿಯುವಂತೆ ಮಾಡಿ ಸಾಲದ ಪ್ರಪಾತಕ್ಕೆ ದೂಡಿವೆ. ಸಾರ್ವಜನಿಕ ರಂಗ ಹಾಗೂ ಸಹಕಾರಿ ರಂಗ ಸಾಲದ ನೆರವಿನಿಂದ ಮುಕ್ತರನ್ನಾಗಿಸಲು ಡಿಫಾಲ್ಟರ್ ಗಳನ್ನಾಗಿ ಹೊರದಬ್ಬಿವೆ. ಮಾತ್ರವಲ್ಲ ಖಾಸಗಿ ಬಡ್ಡಿ ಸಾಹುಕಾರರ ಮನೆಯ ಮುಂದೆ ಸಾಲಕ್ಕಾಗಿ ಸರದಿ ಸಾಲು ಹೆಚ್ಚುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಅಷ್ಟೇ ಅಲ್ಲ ಗ್ರಾಮೀಣ ಪ್ರದೇಶದಲ್ಲಿ ಹೊಸದೊಂದು ಸಾಲ ಬಂಡವಾಳ ನೀಡುವ ದೊರೆಗಳ ವರ್ಗದ ಕಪಿಮುಷ್ಟಿಗೆ, ಶೋಷಣೆಯ ತೆಕ್ಕೆಗೆ ದೂಡಿವೆ.

ಆಗಾಗ್ಗೆ ಸಂಭವಿಸುವ ಪ್ರಕೃತಿ ವಿಕೋಪಗಳು ಹಾಗೂ ಸರಕಾರದ ಏನೊಂದು ನಿಯಂತ್ರಣವಿಲ್ಲದೇ, ಯಥೇಚ್ಛವಾಗಿ ಮಾರಾಟವಾಗುತ್ತಿರುವ ಕಳಪೆ ಬೀಜ ಕಳಪೆಗೊಬ್ಬರ, ಕಳಪೆ ಕ್ರಿಮಿನಾಶಕಗಳು, ಹೊಸ ಆರ್ಥಿಕ ನೀತಿಯ ಜೊತೆ ನಿಂತು ರೈತರ ಮೇಲೆ ಗದಾ ಪ್ರಹಾರ ನೀಡುವಲ್ಲಿ ತಮ್ಮದೇ ಕಾಣಿಕೆ ನೀಡಿವೆ. ಮಧ್ಯಮ ರೈತರ ಒಂದು ಭಾಗ ಬಡ ರೈತರ ಸಾಲಿಗೆ ಎಸೆಯಲ್ಪಟ್ಟಿದೆ. ಕಳೆದ 8-10 ವರ್ಷಗಳಿಂದ ಖಾಸಗೀ ಸಾಲದ ಮೇಲೆಬಿದ್ದ ವಿಪರೀತ ಒತ್ತಡದಿಂದಾಗಿ ಬಡ್ಡಿದರವೂ ತಿಂಗಳಿಗೆ ನೂರು ರೂಪಾಯಿಗಳಿಗೆ 3-00 ರೂ ನಿಂದ 3-50 ರೂ ಗೆ ಏರಿ ಸಾಮಾನ್ಯ ದರವಾಗಿದೆ. ರೈತರಿಗೆ ಒತ್ತಡವಿದ್ದು ಪದೇ ಪದೇ ಬೇಡಿಕೆ ಮಂಡಿಸಿದಲ್ಲಿ ಬಡ್ಡಿದರವು 4 ರಿಂದ 5 ರೂಪಾಯಿಗೆ ಏರಿದೆ. ಇನ್ನು ಬಡರೈತ ಕೂಲಿಕಾರರಿಗಂತೂ 4-5 ರೂಗಳ ಬಡ್ಡಿದರವು ಸಾಮಾನ್ಯ ದರವಾಗಿದೆ.

ಕಳೆದ 5-6 ವರ್ಷಗಳಿಂದ ಸಹಕಾರಿ ಸಂಘಗಳು, ಬ್ಯಾಂಕುಗಳು ಡೀಫಾಲ್ಟರ್ ಗಳಾದ ರೈತರ ಆಸ್ತಿಗಳನ್ನು ಹರಾಜು ಹಾಕಲು ಹೋಗಿ ಸೋತು ವಾಪಸು ಬರುತ್ತಿವೆ. ಕೊಳ್ಳುವವರೆ ದಿಕ್ಕಿಲ್ಲದ ಪರಿಸ್ಥಿತಿ ಉದ್ಭವವಾಗಿದೆ. ಕೊಳ್ಳುವವರು ಒಬ್ಬಿಬ್ಬರು ಸಿಕ್ಕರೇ ರೈತರೊಳಗೆ ಭೂಮಿಮಾರಟ ಮಾಡಲು ಪೈಪೋಟಿ ಬೆಳೆದು ಭೂಮಿಯ ಬೆಲೆ ಕುಸಿಯುವಂತೆ ಮಾಡುತ್ತಿದೆ.

ಭೂಮಿಯನ್ನು ತಾಯಿಯೆಂದು ಕರೆದು ತಾನು ಸಾಯುವವರೆಗೆ ಮತ್ತೊಬ್ಬರಿಗೆ ಬಿಟ್ಟು ಕೊಡಲಾರೆನು! ಭೂತಾಯಿಯ ಮಡಿಲಲ್ಲಿಯೇ ಸಾಯುವೆನು! ಭೂಮಿಯನ್ನು ಮಾರಿದರೆ ಹೆತ್ತ ತಾಯಿಯನ್ನೇ ಮಾರಿದಂತೆ ಎಂದು, ಸತ್ತಮೇಲೂ ಅದೇ ಭೂಮಿಯಲ್ಲಿ ತನ್ನ ಹೆಣವನ್ನು ಮಣ್ಣು ಮಾಡುವಂತೆ ಹೇಳುತ್ತಿದ್ದ ರೈತಾಪಿಜನತೆ, ಈಗ ಸಾಲದಿಂದ ಮುಕ್ತಿಯಿಲ್ಲವೆಂದು, ಕೃಷಿಯ ಬಗ್ಗೆ ಬೇಸರ ತಂದುಕೊಂಡು ಭೂಮಿ ಮಾರಾಟ ಮಾಡಲು ನಾಮುಂದು-ತಾಮುಂದೆಂದು ಬರುತ್ತಿರುವುದು ಕೃಷಿ ಹಿಡಿದ ಅಧೋಗತಿಯ ದಾರಿಯನ್ನು ಸಾರಿ-ಸಾರಿ ಹೇಳುತ್ತಿದೆ!

ಹಾಗೆಂದು ಸಹಕಾರಿ ಸಂಘಗಳು, ಬ್ಯಾಂಕುಗಳು ಸಾಲನೀಡುತ್ತಿಲ್ಲವೆಂದು ಕೊಂಡೀರಿ?! ಮೊದಲಿಗಿಂತ ಹೆಚ್ಚಿಗೆ ಸಾಲ ನೀಡುತ್ತಿವೆ! ಆಶ್ಚರ್ಯ ಮೊದಲಿಗಿಂತ ಹೆಚ್ಚಿಗೆ ಸಾಲದ ನೆರವು ಪಡೆದ ರೈತ ಗೊಬ್ಬರ-ಕ್ರಿಮಿನಾಶಕ ಬೀಜಗಳಿಗಾಗಿ ಖಾಸಗೀ ಸಾಹುಕಾರರ ಹತ್ತಿರ ಗೋಗರೆಯುತ್ತಾನೆ!! ಇದೇನಿದು ರೈತರಿಗೇನಾದರೂ ಹುಚ್ಚುಹಿಡಿದಿದೆಯಾ? ಎಂದು ಕೇಳಿದರೆ ನೀವು. ಹಾಗೇನು ಇಲ್ಲಾ! ಅವನ ಪರಿಸ್ಥಿತಿ ಇದೀಗ ಹಾಗೇನೆ? ರೈತನ ಈ ಪರಿಸ್ಥಿತಿಯಿಂದಾಗಿಯೇ ಅಲ್ಲವೇ ಬ್ಯಾಂಕುಗಳು, ಸೊಸೈಟಿಗಳು ಲಾಭಗಳಿಸುತ್ತಿರುವುದು. ಇಲ್ಲೇ ಇರುವುದು ಸ್ವಾರಸ್ಯ!


ರೈತರು ಹಳೇ ಸಾಲಕಟ್ಟಲಿಲ್ಲ ಬ್ಯಾಂಕ್‌ನವರು ಕೃಷಿಗೆ ಅನುಕೂಲವಾಗುವಂತೆ ಹೊಸ ಸಾಲ ನಿಜವಾದ ಅರ್ಥದಲ್ಲಿ ನೀಡಲಿಲ್ಲ. ಆದರೂ ಬ್ಯಾಂಕು ಸಹಕಾರಿ ಸಂಘದ ವಹಿವಾಟು ನಡೆಯುತ್ತದೆ, ಲಾಭಗಳಿಸುತ್ತದೆ! ಹೇಗಿದು? ನವೀಕರಿಸುತ್ತವೆ! ಅಷ್ಟೇ?

ನವೀಕರಣವೆಂದರೇನು?:

ರಂಗಪ್ಪ ಬ್ಯಾಂಕ್‌ವೊಂದರಲ್ಲಿ ತನ್ನ ಬೆಳೆಗಾಗಿ 50 ಸಾವಿರ ಸಾಲತಂದಿದ್ದನೆನ್ನು ಅವನಿಗೆ ಆ ವರ್ಷ ಬೆಳೆಯ ಅಭಾವದಿಂದಾಗಿ ಕಟ್ಟಲಾಗುವುದಿಲ್ಲ! ಢೀಫಾಲ್ಟರ್ ಆಗಬಾರದೆಂಬ ಭಯದಿಂದಲೋ, ಜಪ್ತಿಯಾಗಿ ಮಾನ ಹರಾಜಾಗುವ ಸಂದರ್ಭ ಬರಬಾರದೆಂತಲೋ ಸಾಲ ನವೀಕರಿಸಲು ಬ್ಯಾಂಕ್ ಆಡಳಿತಮಂಡಲಿಯನ್ನು ಕೇಳುತ್ತಾನೆ. ಇಲ್ಲವೇ ಮಧ್ಯವರ್ತಿಗಳ ಸಹಾಯದಿಂದ ನೆರವೇರಿಸಿ ಕೊಳ್ಳುತ್ತಾನೆ! ಬ್ಯಾಂಕು ಹಳೆಯ ಸಾಲ



ಹಾಗೂ ಅಲ್ಲಿಯುವರೆಗಿನ ಬಡ್ಡಿಲೆಕ್ಕಹಾಕಿ ಅದರ ಮೇಲೆ ಒಂದೆರಡು ಸಾವಿರ ಹೆಚ್ಚಿನ ಹಣಕ್ಕೆ ಹೊಸ ಸಾಲ ನೀಡುತ್ತದೆ ಹಾಗೆ ನೀಡುವಾಗಲೇ ಹೊಸಸಾಲದ ಹಣದಲ್ಲಿ ಹಳೆಯ ಸಾಲದ ಬಡ್ಡಿ ಸೇರಿ ಗಂಟನ್ನು ಮುರಿದುಕೊಳ್ಳುತ್ತದೆ. ಹೊಸ ಸಾಲದಲ್ಲಿ ರೈತನ ಕೈಗೆ ಒಂದೆರಡು ಸಾವಿರ ಉಳಿದರೆ ಅದರಲ್ಲಿನ ಹೆಚ್ಚಿನ ಪಾಲು ಕರುಣೆ ತೋರಿದ ಬ್ಯಾಂಕ್ ಸಿಬ್ಬಂಧಿಯ ಜೋಬಿಗೋ, ಇಲ್ಲವೇ ಮಧ್ಯವರ್ತಿಗೆ ಸೇರಿ ಹೊಸಸಾಲ ಪಡೆದ ರೈತನ ಕೈ ಬರಿದಾಗಿರುತ್ತದೆ.



...ಲ್ಲಿ ರೈತ

...ವನು ನೇರವಾಗಿ ಕೃಷಿಗಾಗಿ ಖಾಸಗೀ ಸಾಹುಕಾರನಲ್ಲಿಗೆ ತೆರಳುತ್ತಾನೆ.

ಕೆಲವು ಕಡೆ ಕೆಲ ಬ್ಯಾಂಕುಗಳ ಮ್ಯಾನೇಜರ್‌ಗಳು (ಸಾರ್ವತ್ರಿಕವಾಗಿ ಅಲ್ಲಾ) ಅಥವಾ ಫೀಲ್ಡ್ ಆಫೀಸರ್‌ಗಳು ಕೆಲವು ಹಳ್ಳಿಗಳ ಬಡ್ಡಿವ್ಯಾಪಾರಸ್ಥರನ್ನು ಇಲ್ಲವೇ ಶ್ರೀಮಂತರನ್ನು, ತಮ್ಮ ನಂಬಿಕೆಯ ಒಬ್ಬರನ್ನು ಗುಪ್ತವಾಗಿ ಏಜೆಂಟರಂತೆ ನೇಮಿಸಿಕೊಂಡಿರುತ್ತಾರೆ.

ಈ ಏಜೆಂಟರು ಸಾಲಗಾರ ರೈತರಿಗೆ ಕರುಣೆತೋರಿಸಿ ರೈತರ ಪರವಾಗಿ ತಾನು ಬ್ಯಾಂಕಿಗೆ, ಸಹಕಾರಿ ಸಂಘಕ್ಕೆ ಹಣಪಾವತಿ ಮಾಡುತ್ತಾನೆ. ಗುಪ್ತ ಕರಾರಿನಂತೆ ಬ್ಯಾಂಕ್ ಸಿಬ್ಬಂದಿ ಏಜೆಂಟನಿಂದ ಕೈ ಬೆಚ್ಚಗೆ ಮಾಡಿಸಿಕೊಂಡು ಹೊಸ ಸಾಲವನ್ನು ಹಳೆಯ ಸಾಲ ಅದಕ್ಕಾದ ಬಡ್ಡಿ ಹಾಗೂ ಒಂದೆರಡು ಸಾವಿರ ಜಾಸ್ತಿಯಾಗಿ ನೀಡುತ್ತದೆ. ರೈತ ಸಹಿ ಮಾಡಿದ ನಂತರ ಏಜೆಂಟನ ಕೈಗೆ ಹಣಬರುತ್ತದೆ. ಏಜೆಂಟನು ತಾನು ಮಾಡಿದ ಉಪಕಾರಕ್ಕೆ ತಾನುಕೊಟ್ಟಿದ್ದ ಹಣಕ್ಕೆ (ಒಂದೆರಡು ಗಂಟೆಗೆ) ಒಂದು ತಿಂಗಳ ಬಡ್ಡಿಯೆಂದು ತಿಂಗಳೊಂದಕ್ಕೆ 100 ರೂಪಾಯಿಗೆ 4 ರೂಪಾಯಿ ಇಲ್ಲವೇ 5 ರೂಪಾಯಿ ನಂತೆ ಪಡೆಯುತ್ತಾನೆ. ಆಗಲೂ ರೈತನು ಬರಿಗೈಯೇ?

ಬರಿಗೈಯಾದರೇನು? ಸಾಲ ನವೀಕರಿಸಿದ ತೃಪ್ತಿ ರೈತನಿಗಾದರೇ ಈ ರೀತಿಯ ಹಿವಾಟಿನಿಂದ ಆವರ್ಷದ ಖಾತೆಯಲ್ಲಿ ಬ್ಯಾಂಕು-ಸಹಕಾರಿ ಸಂಘ ಸಾಲವಸೂಲಿ ಮಾಡಿ ಲಾಭ ಪಡೆದ ತೃಪ್ತಿ ಹೊಂದಿದರೇ, ಮಧ್ಯವರ್ತಿಗೆ ತನ್ನ ಹಣವನ್ನು ಒಂದೆರಡು ಗಂಟೆಗೆ ವ್ಯವಹಾರದಲ್ಲಿ ತೊಡಗಿಸಿದ್ದರಿಂದ ಸಾವಿರಾರು ರೂಪಾಯಿ ಲಾಭ ಪಡೆದ ತೃಪ್ತಿ. ಈ ದಂಧೆಯಿಂದ ಲಂಚ ಪಡೆದು ಲಾಭ ಹೊಂದಿದ ತೃಪ್ತಿ ಕೆಲ ಭ್ರಷ್ಟ ಅಧಿಕಾರಿಗಳಿಗೆ? ಹೇಗಿದೆ ನವೀಕರಣದ ಲಾಭ?

ಆದರೆ ಯಾವ ಉದ್ದೇಶದಿಂದ ಬ್ಯಾಂಕುಗಳು ಹಾಗೂ ಸಹಕಾರಿ ಸಂಘಗಳು ರಚಿಸಲ್ಪಟ್ಟವೋ ಅದು ನವೀಕರಣದ ಸಾಲದಿಂದ ನೆರವೇರದೆಂಬುದು ಸುಸ್ಪಷ್ಟ.

ಹೀಗೆ ನವೀಕರಣದ ಸಾಲದಿಂದೇನೂ ಪ್ರಯೋಜನ ಹೊಂದದ ರೈತ ಪುನಃ ಕೃಷಿ ಚಟುವಟಿಕೆಗಾಗಿ ಮೋಸದ ಜಾಲವನ್ನೇ ಹೊಂದಿರುವ ಖಾಸಗೀ ಸಾಹುಕಾರರ ದುಬಾರಿ ಬಡ್ಡಿಯ ಜಾಲಕ್ಕೆ ದೂಡಲ್ಪಡುತ್ತಾನೆ.

ಇದರೊಂದಿಗೆ ಖಾಸಗೀ ಸಾಹುಕಾರರಿಂದ ಸಾಲ ಮುಂದಾಗಿದ್ದ ಬ್ಯಾಂಕುಗಳು ಸಹಕಾರಿ ಸಂಘಗಳು ಈಗ ಮಧ್ಯವರ್ತಿಗಳ ಜೊತೆ ಸೇರಿ ... ಮರಳಿ ಬಡ್ಡಿಯನ್ನು ಜಡಿದು ಖಾಸಗೀ ಬಡ್ಡಿ ವ್ಯಾಪಾರಿಯ ಜೊತೆ ಸೇರಿ ಮರಣಾಂತಿತ ಹಲ್ಲೆ ನಡೆಸಲು ಕೈಜೋಡಿಸಿದಂತಾಗಿದೆ.

ಒಂದೆಡೆ ಹರಾಜು ಹಾಕುವ ಬ್ಯಾಂಕುಗಳು. ಮತ್ತೊಂದೆಡೆ ದುಡ್ಡಿಲ್ಲದಿದ್ದರೂ ಸಾಲಕಟ್ಟಲೇಬೇಕೆಂದು ಒತ್ತಡ ಹೇರುವ ಬಡ್ಡಿ ವ್ಯಾಪಾರಿಗಳು ಹೊಸ ಕೃಷಿಗೆ ಸಾಲಸಿಗದಂತಾಗಿ ಗಿರವಿ ಅಂಗಡಿಗಳ ಸಾಲ ಕಟ್ಟಲು ಸಾಲದಂತಾಗಿ ಜೀವನೋಪಾಯಕ್ಕೆ ಅಗತ್ಯವಸ್ತುಗಳ ಕಿರಿ ಕಿರಿ ಉಂಟಾಗಿ ಬದುಕುವುದಕ್ಕಿಂತ ಸಾಯುವುದೇ ಲೇಸೆಂಬ ತೀರ್ಮಾನಕ್ಕೆ ಬಂದ ಮೇಲಲ್ಲವೇ ದೇಶದಾದ್ಯಂತ ಸಾವಿರಾರು ರೈತರು ವಿಷಕುಡಿದು ಇಹತ್ಯಜಿಸಿದ್ದು! ಈ ತೀರ್ಮಾನಕ್ಕೆ ಬರುವ ಮುಂಚೆ ಸಾಲಗಾರರ ಕಿರಿ ಕಿರಿ ತಪ್ಪಿಸಿಕೊಳ್ಳಲು ಅದೆಷ್ಟು ವರ್ಷ ತಲೆತಪ್ಪಿಸಿಕೊಂಡು ತಿರುಗಿದ್ದು. ಅದೆಷ್ಟು ಬಾರಿ ಆಸ್ತಿಮಾರಲು ಯತ್ನಿಸಿದ್ದು, ಲೆಕ್ಕವಿಲ್ಲವಾಗಿದೆ. ಈಗಲೂ ಈ ಪರಿಸ್ಥಿತಿ ರೈತರ ನಡುವೆ ಮುಂದುವರಿದೇ ಇದೆ?

ನವ ಬಕಾಸುರ

ರೈತರ ಆಚೆಗಿನ ಈ ಹೊಸ ಪರಿಸ್ಥಿತಿಯು ಅವರ ಉತ್ಪನ್ನದ ಹೆಚ್ಚುವರಿ ಆದಾಯವನ್ನು ಯಥೇಚ್ಛವಾಗಿ ಲೂಟಿಗೊಳಪಡಿಸುವ ನವ ಬಕಾಸುರ ಸಾಲ ನೀಡುವ ವ್ಯಾಪಾರಿ ಬಂಡವಾಳದಾರನನ್ನು ಗ್ರಾಮೀಣ ಪ್ರದೇಶದಲ್ಲಿ ಸೃಷ್ಟಿಸಿದೆ. ಬಂಡವಾಳದಾರರು, ಭೂಮಾಲಿಕರು ಮಧ್ಯವರ್ತಿಗಳಿಂದಷ್ಟೇ ಶೋಷಣೆಗೊಳಗಾಗಿದ್ದ ರೈತ ಮತ್ತೊಬ್ಬ ಶೋಷಕನ ತೆಕ್ಕೆಗೆ ಬೀಳುವಂತೆ ಮಾಡಿದೆ.

ರೈತರ ಒಂದು ದೊಡ್ಡ ಸಾಲು ಇಂತಹ ವ್ಯಾಪಾರಿ ಬಂಡವಾಳದಾರರ ಅಂಗಡಿಗಳ ಮುಂದೆ ಸಾಲಕ್ಕಾಗಿ ಕೈ ಒಡ್ಡಿದ್ದರಿಂದ ಬಡ್ಡಿದರ ವ್ಯಾಪಕವಾಗಿ ಬೆಳೆದಿದೆ! ಗ್ರಾಮೀಣ ಪ್ರದೇಶದ ಹೊಸ ವ್ಯಾಪಾರಿ ಬಂಡವಾಳದಾರನು ಸಾಲನೀಡುವುದೆಂದರೆ, ಹಣಕೊಡುವುದಲ್ಲ, ಬದಲಿಗೆ ಕೃಷಿಗೆ ಬೇಕಾದ ಬೀಜ, ರಸಾಯನಿಕ ಗೊಬ್ಬರ ಕ್ರಿಮಿನಾಶಕಗಳನ್ನು ಸಾಲರೂಪದಲ್ಲಿ ನೀಡುವುದಾಗಿದೆ.

ಈ ಹೊಸ ಬಕಾಸುರರ ಅಟ್ಟಹಾಸ ಅಷ್ಟಿಷ್ಟಲ್ಲ, ಈ ಸುಲಿಗೆ ಕೋರರು ಒಂದೆರಡಲ್ಲ ಹತ್ತಾರು! ಅವುಗಳು ಚಲಿಸುವ ವೇಗ ಅದ್ಭುತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಅಗಾಧವಾಗಿ ಹೆಮ್ಮರವಾಗಿ ಬೆಳೆಯುತ್ತಿದ್ದಾರೆ.

ಕೃಷಿಗೆ ಬೇಕಾದ ಬೀಜ ಗೊಬ್ಬರ ಕ್ರಿಮಿನಾಶಕ ಸಾಲರೂಪದಲ್ಲಿ ನೀಡುವಾಗ ಸಾಮಾನ್ಯ ಲಾಭದ ಜೊತೆ ಸಾಲವೆಂಬ ಕಾರಣಕ್ಕೆ ಪ್ರತಿಚೀಲಕ್ಕೆ 10 ರಿಂದ 15 ರೂ ಹೆಚ್ಚುವರಿ ಲಾಭ ಹಾಕುತ್ತಾನೆ. ಕೃಷಿ ಸಾಮಾಗ್ರಿಗಳನ್ನು ಯಾವುದೇ ತಿಂಗಳಲ್ಲಿ ಕೊಂಡೊಯ್ದಿದ್ದರೂ ಅಥವಾ 7 ತಿಂಗಳು ಒಟ್ಟು ಸಾಲದ ಮೇಲೆ ಬಡ್ಡಿ ಪಡೆಯುತ್ತಾನೆ. ಸಾಲದೆಂಬಂತೆ ಕನಿಷ್ಠ 3 ರೂ ಪ್ರತಿ ತಿಂಗಳಿಗೆ 100 ರೂ ಅಸಲಿಗೆ ಬಡ್ಡಿಪಡೆಯುತ್ತಾರೆ.

ಈ ಮೊದಲೇ ಬೆಳೆ ಇವನಿಗೆ ಕಣದಲ್ಲಿಯೇ ನೀಡಬೇಕೆಂಬ ಷರತ್ತು ಹಾಕಿರುತ್ತಾನೆ. ಬೆಳೆಯ ದರ ಇತರ ವ್ಯಾಪಾರಿಗಳು ಖರೀದಿಸುವುದಕ್ಕಿಂತ ಕನಿಷ್ಠ 10 ರೂ ಕಡಿಮೆಯೇ ಇರುತ್ತದೆ. ಸುಗ್ಗಿಯ

ಪುಟ 10 ಕ್ಕೆ

ಕೊಷ್ಟಕ-1

ಪ್ರತಿ ಎಕರೆ ಭತ್ತ ಬೆಳೆ ಉತ್ಪಾದನೆಯ ಖರ್ಚು ಆದಾಯ

ಕ್ರ.ಸಂ	ವಿವರ	ಹಣ
1	50 ಕೆ.ಜಿ. ಭತ್ತದ ಬೀಜ	500-00
	ಸಸಿ ಬೆಳೆಯಲು:-	
2	ಮಡಿಕೆಯಿಂದ ಉಳುಮೆಗೆ 2X60	120
	ಪಟ್ಲಿಂಗ್ ಹಾಗೂ 2 ಕೂಲಿ	
	ಆಳಿಗೆ ಒಟ್ಟಿಗೆ ಸೇರಿ	160
	ಯೂರಿಯಾ 15 ಕೆ.ಜಿ-	70-00
	ಯೂರಿಯಾ ಚಲ್ಲಲು ಕೂಲಿ-	40-00
	1/2 ಲೀಟರ್ ಮಾನೋಕ್ರೋಟೋ	
	ಫಾಸ್ ಕ್ರಿಮಿನಾಶಕ ಹಾಗೂ ಸಿಂಪರಣೆಗೆ ಕೂಲಿಆಳು	240-00
	15 ರಿಂದ 20 ದಿನಗಳ ನಿರ್ವಹಣೆಗಾಗಿ 20x30-	600-00
	ಒಟ್ಟು;	1230-00
3.	ಎಕರೆ ಭೂಮಿ ಹದಕ್ಕಾಗಿ	
	ಗಳೇವ್ ನಿಂದ 2 ಬಾರಿ	
	ಹರಗಲು 4X60	240
	ದಮಲ್ಮ ಹೊಡೆಯಲು(ಟ್ರಾಕ್ಟರ್)	350-00
	ಕಣಿವೆ ಸವರಲು 2 ಆಳು	100-00
	ಕಸ ಆರಿಸಲು 2 ಆಳು	50-00
	ಒಟ್ಟು	750-00
4	ಪ್ರತಿ ಎಕರೆಗೆ ಕೊಟ್ಟಿಗೆ ಗೊಬ್ಬರ	
	ಕನಿಷ್ಠ 10 ಬಂಡಿ 10X50	500-00
	ಬಂಡಿ ಬಾಡಿಗೆ ಆಳು	200-00
	ಒಟ್ಟು	700-00
5.	ಸಸಿ ಕೀಳುವುದು ಹೊರುವುದು	
	ನಾಟಿಮಾಡುವುಮ-	450-00
6.	ನಿರ್ವಹಣೆ:	
	ಮೊಪಲ ಗೊಬ್ಬರ (1 ಯೂರಿಯಾ+ 1 ಕಾಂಪ್ಲೆಕ್ಸ್)	
	ಒಂಟು ಕೂಲಿ ಆಳು	660-00
	ಒಂಪನೇಕಳೇಟ್ 8 ಆಳು	240-00
	2ನೇ ಗೊಬ್ಬರ ಮೊದಲಿನಂತೆ	660-00
	ಕ್ರಿಮಿನಾಶಕ ಬಳಕೆ 1/2 ಲೀಟರ್ ಆಳು ಸೇರಿ	260-00
	2ನೇ ಕಳೇವ್	200-00
	3ನೇ ಗೊಬ್ಬರ ಮೊದಲಿನಂತೆ	660-00
	5 ಕೆಜಿ ಥರ್ಮಲ್ ಗುಳಿಗೆ(ಆಳು)	760-00
	ಕಾಮಿನಾಶಕ, ಕೂಲಿ ಆಳು	260-00
	4ನೇ ಬಾರಿ ಗೊಬ್ಬರ	66-00
	ನಿರ್ವಾಹಕದ ಕರ್ಚು 45 ದಿನಕ್ಕೆ 45 X50-	2250-00
	ಒಟ್ಟು	**6410-00**
7.	ಕಟಾವ್:	
	ಪ್ರತಿ ಎಕರೆ ಕುಯಿಲುಗೆ	800-00
	ಟ್ರಾಕ್ಟರ್ ಬಾಡಿಗೆ	300-00
	ತೂರುವುದು	350-00
	ಚೀಲ ತುಂಬಲು ಏರಲು	300-00
	ಇತರೆ	50-00
	ಒಟ್ಟು	**1800-00**
8.	ಮಾರುಕಟ್ಟೆಗೆ:	
	ಮಾರುಕಟ್ಟೆಗೆ ಸಾಗಣೆ ಖರ್ಚು	
	ಪ್ರತಿ ಚೀಲಕ್ಕೆ ಇಪ್ಪತ್ತುರೂ ನಂತೆ 35 ಚೀಲಕ್ಕೆ 35X20 -	700-00
	ಪ್ರತಿ ಚೀಲಕ್ಕೆ ಚೀಲದ ಹಾಗೂ ಬಾಜು ಎಂದು	
	2 ಕೆ.ಜಿ. ತೆಗೆದುದು ಮತ್ತು 35X2-70 ಕೆ.ಜಿ. 70X450-	900.00
	ಮಾರುಕಟ್ಟೆದಲ್ಲಾಳಿಗಳ ಕಮಿಷನ್ 3% ನಂತೆ	525-00
	ರೈತನ ಖರ್ಚು	150-00
	ಒಟ್ಟು	**2,275-00**
9.	ಹೊಡಿದ ಬಂಡವಾಳದ ಮೇಲಿನ ಬಡ್ಡಿ (ತಿಂಗಳಿಗೆ 100ಕ್ಕೆ 3 ರಂತೆ)	
	13,5X3X6=100	2430-00
10.	ನೀರಾವರಿ ಭೂ ಕಂದಾಯ	100-00
	ಬೀಜ ಕ್ರಿಮಿನಾಶಕ ಗೊಬ್ಬರಗಳಿಗಾಗಿ ಪೇಟೆಕಡೆ	
	ತಿರುಗಿದ ಇತರ ಖರ್ಚು	400-00
		5000-00
	ಒಟ್ಟು ಖರ್ಚು	**17,045-00**
11.	ಆದಾಯ:	
	ಪ್ರತಿ ಎಕರೆಗೆ 35 ಚೀಲ ಸರಾಸರಿ ಬೆಳೆ	
	ಸರಾಸರಿ ದರ 4500-00 ರೂ ನಂತೆ	
	450X35	15,750-00
12.	ರೈತನಿಗಾದ ಒಟ್ಟು ನಷ್ಟ 17,045.00 - 15,750-00	**1295-00**

ಷರಾ:-

1. ಕಳಪೆಬೀಜ, ಕಳಪೆಗೊಬ್ಬರ, ಕಳಪೆಕ್ರಿಮಿನಾಶಕದಿಂದ ಉತ್ಪಾದನಾ ವೆಚ್ಚ ಮತ್ತಷ್ಟು ಹೆಚ್ಚುತ್ತದೆ. ಇಳುವರಿ ಕುಂಠಿತಗೊಳ್ಳುತ್ತದೆ.
2. ಬೆಳೆಯು ಪದೇ ಪದೇ ರೋಗ ಬಾದೆ ಗೀಡಾದಾಗಲ ವೆಚ್ಚ ಹೆಚ್ಚುತ್ತದೆ
3. ಮಾರುಕಟ್ಟೆಯಲ್ಲಿ ತೂಕದಲ್ಲಿ ಮಾಡುವ ಮೋಸ ಹಮಾಲರ ಖರ್ಚು ಸೇರಿಲ್ಲ
4. ದಲ್ಲಾಲರು ಸರಾಸರಿ 5% ಕಮಿಷನ್ ವಸೂಲಿ ಮಾಡುವರು
5. ಈಗಿನ ಭತ್ತದ ದರ - ಚೀಲ ಒಂದಕ್ಕೆ ಕೇವಲ 350-00 ರೂ ಇದೆ.


ರಾಮಕೃಷ್ಣ ಹೆಗಡೆ ಹುಟ್ಟೂರಲ್ಲಿ

ಮುದುರಿದ ಕಮಲ ಮುರಿದು ಬಿದ್ದ ಬಾಣ



ಚುನಾವಣಾ ಪ್ರಕ್ರಿಯೆ ಪ್ರಾರಂಭ ಆದ ದಿನದಿಂದ ಉತ್ತರ ಕನ್ನಡದಲ್ಲಿ ಮಳೆಗೆ ಬಿಡುವೇ ಇರಲಿಲ್ಲ. ಒಂದು ಮನೆಯಿಂದ ಇನ್ನೊಂದು ಮನೆಗೆ, ಒಂದು ವಾಲಿನಿಂದ ಇನ್ನೊಂದು ವಾಲಿಗೆ ಹೋಗಲಾರದಷ್ಟು ಮಳೆ. ಗ್ರಾಮೀಣ ಪ್ರದೇಶದ ರಸ್ತೆಗಳಂತೂ ಕೆಸರಿನಿಂದ ತುಂಬಿ ಯಾವುದೇ ವಾಹನ ಓಡಾಡದ ಸ್ಥಿತಿ ಉಮೇದುವಾರರ ಪಡೆ ಮತದಾರರ ಮನೆಗೆ ಹೋಗದಂತೆ ಮತದಾರ ಮತಗಟ್ಟೆಗೆ ಬರದಂತೆ ಮಧ್ಯಹರಿವ ನದಿ ಹಳ್ಳ. ಕೆಲವು ಕಡೆ ಮತಪೆಟ್ಟಿಗೆ ಒಯ್ದ ವಾಹನ ಇನ್ನೂ ತಾಲೂಕು ಕೇಂದ್ರಕ್ಕೆ ವಾಪಾಸಾಗಲಿಲ್ಲ. ಮತ ಪೆಟ್ಟಿಗೆಯನ್ನು ತಲೆಯ ಮೇಲೆ ಹೊತ್ತು ತಂದಿದ್ದಾರೆ. ಜನ ಮತಗಟ್ಟೆಗೆ ಬಂದು ತನ್ನ ಪರಮಾಧಿಕಾರ ಚಲಾಯಿಸುವ ಸಾಧ್ಯತೆಗಳ ಬಗ್ಗೆ ಮಳೆಗಾಲದಲ್ಲಿ ಚುನಾವಣೆ ನಡೆಸಲು ತೀರ್ಮಾನಿಸಿದ ಸರ್ಕಾರ ಚುನಾವಣಾ ಆಯೋಗ ಮತ್ತು ಜಿಲ್ಲಾ ಮಟ್ಟದಲ್ಲಿ ಚುನಾವಣಾ ಆಗುಹೋಗುಗಳ ಕಾರ್ಯಬಾರ ಹೊತ್ತ ಜಿಲ್ಲಾಧಿಕಾರಿಗಳು ಕೂಡ ತಲೆಕೆಡಿಸಿ ಕೊಂಡಂತಿಲ್ಲ. ಬರುವವರು ಬರುತ್ತಾರೆ ಬರದಿದ್ದರೆ ಯಾರಿಗೇನು ಹಾನಿ? ಎಂದು ಅಧಿಕಾರಿ ವರ್ಗ ಮತ್ತು ಬಂದ ಮತಗಳಲ್ಲಿ ಪಾಲು ಹಂಚಿಕೊಳ್ಳುವ ತರಾತುರಿಯಲ್ಲಿದ್ದ ರಾಜಕೀಯ ಪಕ್ಷಗಳು ಮಳೆಗಾಲದ ಚುನಾವಣೆಯ ಬಗ್ಗೆ ಸಂಬಂಧ ಪಟ್ಟವರಿಗೆ ತಕರಾರು ಸಲ್ಲಿಸದಿರುವುದು ಅವರ ಸ್ವಭಾವಕ್ಕೆ ಸಹಜವಾಗೇ ಇದೆ.

ಒಂದು ವಾರಪೂರ್ತಿ ಬಿಸಿಲನ್ನೇ ಕಾಣದ ಜಿಲ್ಲೆಯ ಮತದಾರರು ತೀರಾ ನಿರುತ್ಸಾಹದಿಂದ ಪ್ರತಿಕ್ರಿಯಿಸಿದರು. ಹಾಗೂ ಜಿಲ್ಲೆಯಾದ್ಯಂತ ಆದ ಮತದಾನ 50% ದಿಂದ 52% ಕೆಲವು ಕಡೆಗಳಲ್ಲಂತೂ 20% ದಾಟಿಲ್ಲ. ಬಿದ್ದ ಮತಗಳಲ್ಲಿ 30% ದಿಂದ 40% ಪಡೆದವರು ಗೆದ್ದಿದ್ದಾರೆ (ಅಂದರೆ ಗೆದ್ದ ಅಭ್ಯರ್ಥಿಗಳು ಶೇ, 70 ರಷ್ಟು ಜನ ತಿರಸ್ಕರಿಸಿದ ಅಭ್ಯರ್ಥಿಗಳೂ ಹೌದು !?)



ರಾಜ್ಯದ ಜನತೆ ನಮ್ಮ ಪಕ್ಷವನ್ನು 'ಅಮಾನತು' ಗೊಳಿಸಿದ್ದರೂ ಅಧ್ಯಕ್ಷರಿಗೆ ಬುದ್ಧಿ ಬಂದಿಲ್ಲ.... ಹಾಸನ ಘಟಕವನ್ನು ಅಮಾನತುಗೊಳಿಸುವ ತಯಾರಿಯಲ್ಲಿದ್ದಾರೆ!

ಮೇ ಕೊನೆಯ ವಾರದಲ್ಲಿಯೇ ಪ್ರವೇಶಿಸಿದ ಮುಂಗಾರು ಕೊನೆಯವರೆಗೂ ಚುನಾವಣಾ ಕಾವು ಏರದಂತೆ ತಡೆಯಿತು. ನಿಂತ ಅಭ್ಯರ್ಥಿಗಳು ಮಳೆ ಈಗಲೇ ಬರಬೇಕೆ? ಎಂದು ಬೈದರೆ ಕೆಲವು ಜನ ಮನೆಯಲ್ಲಿ ಕುಳಿತು ಮಳೆ ಬಂದದ್ದೇ ಒಳ್ಳೆಯದಾಯ್ತು ಮತಕೇಳುವವರ ಕಾಟತಪ್ಪಿತು ಎಂದು ಕವಳ ಅಗಿದು ಉಗಿದರು. "ಓಹೋ ಹೋ ಅವನ ಯಾಪಾರ ನೋಡು, ಮೈ ಕೈಯೆಲ್ಲಾ ರಾಡಿ, ವಸ್ತ್ರವೆಲ್ಲ ಅದ್ದು ಮುದ್ದೆ ಎಂದು ಮಳೆಯಲ್ಲಿ ನೆನೆಯುತ್ತಾ ತೋಟದ ಕೆಸರಲ್ಲಿ ಲುಂಗಿಯನ್ನೋ ಪ್ಯಾಂಟನ್ನೋ ಮೇಲೆತ್ತಿ ಭರತನಾಟ್ಯದ ಶೈಲಿಯಲ್ಲಿ ಬರುತ್ತಿರುವ ಉಮೇದುವಾರರ ಕಷ್ಟವನ್ನು ನೋಡಿ ಒಳಗೊಳಗೇ ಖುಶಿಪಟ್ಟವರು ಹಲವರಿದ್ದಾರೆ. ಇಷ್ಟರ ಮಧ್ಯೆ ಬಹಿರಂಗ ಅರ್ಭಟಕ್ಕೆ ತೆರೆ ಬಿದ್ದಿದ್ದರೂ ಜಿಲ್ಲೆಯ ಚುನಾವಣೆ ಕುತೂಹಲವನ್ನು ಕೆರಳಿಸಿದ್ದು ಒಂದು ನಿರ್ದಿಷ್ಟ ಕಾರಣಕ್ಕೆ.

ಪಂಚಾಯತ್ ಚುನಾವಣಾ ವರದಿ

ಒಂದು ಕಡೆ ದೇಶಪಾಂಡೆಯವರ ಮರ್ಯಾದೆಯ ಪ್ರಶ್ನೆ. ಇನ್ನೊಂದೆಡೆ ಬಿಜೆಪಿಯ ಸಾವು ಉಳಿವಿನ ಪ್ರಶ್ನೆ, ಇದರೊಂದಿಗೆ ಸಂಯುಕ್ತ ರಂಗದ ರುವಾರಿ ರಾಮಕೃಷ್ಣ ಹೆಗಡೆಯವರ ತವರು ಜಿಲ್ಲೆ, ತವರು ತಾಲೂಕಿನಲ್ಲಿ ಅವರ ವರ್ಚಸ್ಸನ್ನು ಸಾಬೀತು ಪಡಿಸುವ ಪ್ರಶ್ನೆ. ಹೀಗೆ ತ್ರಿಕೋನ ಸ್ಪರ್ಧೆಯಲ್ಲಿ ಗೆಲ್ಲುವವರು ಯಾರು? ಎನ್ನುವುದಕ್ಕಾಗಿ ಅಂತಿಮ ದಿನದವರೆಗೂ ತುದಿಗಾಲಲ್ಲಿ ಕಾಯುತ್ತಿದ್ದರು.

ಅಂತಿಮ ಫಲಿತಾಂಶ ಬಂತು. 35 ಜಿಲ್ಲಾ ಪಂಚಾಯತ್ ಸ್ಥಾನಗಳಲ್ಲಿ 27 ಕಾಂಗ್ರೆಗೆ (ದೇಶಪಾಂಡೆ-ಕಾಂಗ್ರೆಯನ್ನು ತಾನೇ ಗೆಲ್ಲಿಸಿದ್ದು ಎನ್ನುತ್ತಿದ್ದಾರೆ) ಸಂಯುಕ್ತ ರಂಗಕ್ಕೆ 4 ಸ್ಥಾನ (ಹೆಗಡೆ ಈಗ ಅನಾಥರು-ವರ್ಚಸ್ಸು ಮಣ್ಣು ಪಾಲು) ಬಿಜೆಪಿ ಗೆ ಮೂರನೇ ಸ್ಥಾನ (ಇನ್ನು ಉದುರಲು ಮೂರೇ ದಳ ಇದೆ) ಜಾತ್ಯಾತೀತ ಜನತಾದಳಕ್ಕೆ ಸ್ಥಾನ ಇಲ್ಲ (ಯಾರ ಠೇವಣಿಯೂ ಇದ್ದಂತಿಲ್ಲ) ಪಕ್ಷೇತರ ಒಂದು (ಬಹುಶಃ ಕಾಂಗ್ರೆಗೆ ಹಾರುವವರಾಗಿರಬೇಕು).

ಮುರಿದು ಬಿದ್ದ ಬಾಣ

ರಾಮಕೃಷ್ಣ ಹೆಗಡೆಯವರನ್ನು ಅವರ ಆಸ್ಥಾನ ಪಂಡಿತರು ಮತ್ತು ವರದಿಯಾಗದ ಪತ್ರಿಕೆಗಳು ಜಿಲ್ಲೆಯವರ ಪುತ್ರರೆಂದೇ ಹೊಗಳುತ್ತಾರೆ. ರಾಷ್ಟ್ರದ ಪ್ರಧಾನಿ, ರಾಷ್ಟ್ರಪತಿ ಆಗುವ ವರ್ಚಸ್ವಿ ಎಂದು ಹೇಳುವುದೂ ಉಂಟು. ಆದರೆ ಉತ್ತರ ಕನ್ನಡದಲ್ಲಿ ಆಸ್ಥಾನ ಪಂಡಿತರ ಲೆಕ್ಕಚಾರವೆಲ್ಲಾ ತಲೆಕೆಳಗಾಯಿತು. ಹೆಗಡೆಯವರ ನಿಜವಾದ ವರ್ಚಸ್ಸು ಸಾಬೀತಾಯಿತು. ಜನತಾದಳ ಹೋಗಿ ನವನಿರ್ಮಾಣ ಆಗಿ ಅಲ್ಲಿಂದ ಲೋಕಶಕ್ತಿಯಾಗಿ ಅದೂ ಬದಲಾಗಿ ಸಂಯುಕ್ತ ರಂಗವಾಗಿ ಬಾಣದೊಂದಿಗೆ ಇಡೀ ರಾಜ್ಯವನ್ನು ಗೆಲ್ಲುವ ಮಾತಾನಾಡಿದ ರಾಮಕೃಷ್ಣ ಹೆಗಡೆ ಮತ್ತು ಅವರ ಬಾಲಂಗೋಚಿಗಳಿಗೆ ರಾಜ್ಯಗೆಲ್ಲುವುದಿರಲಿ ತವರು ಜಿಲ್ಲೆಯನ್ನು ಗೆಲ್ಲಲ್ರಾಗಿಲ್ಲ. ಗದ್ದ ನಾಲ್ಕು ಸ್ಥಾನಗಳು ಹೆಗಡೆಯವರ ಹೆಸರಿನಿಂದ ಬಂದಿದ್ದಲ್ಲ. ಎದುರು ಪಕ್ಷದವರ ಆಂತರಿಕ ಜಗಳಗಳಿಂದ ಬಂದಿದ್ದು ಅಷ್ಟೆ. ಇನ್ನೂ ಶೋಚನೀಯ ಸ್ಥಿತಿಯೆಂದರೆ ಹೆಗಡೆಯವರ ತವರು ತಾಲೂಕಾದ ಸಿದ್ಧಾಪುರದಲ್ಲಿ (ಜಿಲ್ಲಾ ಪಂಚಾಯತ್‌ನಲ್ಲಿ ಒಂದೂ ಸ್ಥಾನಗಳಿಸಲಿಲ್ಲ) ಒಂದೇ ಒಂದು ತಾಲ್ಲೂಕು ಪಂಚಾಯತ್ ಸ್ಥಾನವನ್ನು ಕೂಡ ಗೆಲ್ಲಲಾಗಲಿಲ್ಲ. ಅಲ್ಲೆ ಅವರ ಮನೆ ಇದೆ, ಕುಟುಂಬ ಇದೆ, ಅಭಿಮಾನಿಗಳು ನೆಂಟರು..... ಹೀಗೆ ಅನೇಕರಿದ್ದಾರೆ. ಆದರೂ ಬಾಣ ಇಲ್ಲಿ ಮುರಿದು ಬಿತ್ತು. ಮತ್ಸ್ಯ ಯಂತ್ರವನ್ನು ಭೇಧಿಸಲಿಲ್ಲ. ಹೆಗಡೆಯವರ ಸ್ಥಿತಿ ದಿಲ್ಲಿಯಲ್ಲಿ ಹೀರೋ ಜಿಲ್ಲೆಯಲ್ಲಿ ಜಿರೋ ಎಂದಂತಾಯಿತು.

ಉದುರಿದ ಕಮಲ

ಹೆಗಡೆಯವರ ಬಾಣದಕತೆ ಇದಾದರೆ, ಇನ್ನು ರಾಷ್ಟ್ರದ ವರಪುತ್ರರೆಂದು ನಾಮಾಂಕಿತರಾದ ವಾಜಪೇಯಿಯವರ ಬಿಜೆಪಿಯ ಸ್ಥಿತಿ ಇನ್ನೂ ಚಿಂತಾಜನಕ. ಕೇವಲ ಮೂರು ಸ್ಥಾನಗಳನ್ನು ಮಾತ್ರ ಜಿಲ್ಲಾ ಪಂಚಾಯತ್‌ನಲ್ಲಿ ಪಡೆಯಲು ಇವರಿಗೆ ಅಸಾಧ್ಯವಾಗಿವೆ, ರಾಮಮಂದಿರ, ಕಾರ್ಗಿಲ್, ಪಾಕಿಸ್ತಾನ- ಇವ್ಯಾವುದೂ ಇವರನ್ನು ಈ ಬಾರಿ ರಕ್ಷಿಸಲಿಲ್ಲ. ದೇಶದ ಸರ್ಕಾರವನ್ನು ನಡೆಸುತ್ತಿರುವ ಪಕ್ಷವೊಂದರ ಗ್ರಾಮೀಣ ಜನಪ್ರಿಯತೆಗೆ ಇದೊಂದು ಸಾಕ್ಷಿ. ತಾಲೂಕು ಪಂಚಾಯತ್‌ನ ಸ್ಥಿತಿಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಒಂದು ವರ್ಷದ ಹಿಂದೆ ಇಡೀ ಜಿಲ್ಲೆಯಲ್ಲಿ ಅರಳಿನಿಂತ ಕಮಲದ ಹೂವಿನ ಒಂದೊಂದೇ ದಳ ಉದುರಿ ಬೀಳುತ್ತಿವೆ. ಮಣ್ಣುಗೂಡುತ್ತಿವೆ. ಬಿಜೆಪಿ ಸರ್ಕಾರ, ಮತ್ತು ಲೋಕಶಕ್ತಿ ಪಕ್ಷಗಳು ನಮ್ಮನ್ನು ಎತ್ತರಕ್ಕೆ ಒಯ್ಯುತ್ತವೆಂದು ಪ್ರವಚನ ಬಿಗಿಯುತ್ತಿದ್ದ ಅಡಿಕೆ ತೆಂಗು ಬೆಳೆವ ಜನ, (ಅಡಿಕೆ, ಮತ್ತು ತೆಂಗಿನ ಬೆಲೆಯ ಕುಸಿತಕಂಡು) ಬಿಜೆಪಿಯನ್ನು ಮೂಲೆ ಗುಂಪಾಗಿಸಿದ್ದಾರೆ. ಬೆಲೆ ಏರಿಕೆ ನಿರುದ್ಯೋಗ, ಇತ್ಯಾದಿಗಳು ಜನರನ್ನು ತಟ್ಟಿದೆ. ಆದರೆ ಇವೆಲ್ಲವೂ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಯ ಫಲ ಎನ್ನುವುದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಹಾಗೂ ಈ ರೀತಿಯ ನೀತಿ ತರುವ ಯಾವುದೇ ಪಕ್ಷವಾದರೂ ಬುದ್ಧಿಕಲಿಸಬಹುದು.

> **ಮತಪೆಟ್ಟಿಗೆಯಲ್ಲಿ ಕವಿತೆ**
>
> ಹೊನ್ನಾವರ ತಾಲೂಕಿನ ಕಾಸರಕೋಡಿನ ಮತಪೆಟ್ಟಿಗೆಯಲ್ಲಿ ಒಂದು ಚುಟುಕು ಕವಿತೆ ಸಿಕ್ಕಿದೆ. ಒಬ್ಬ ಪ್ರಜ್ಞಾವಂತ ಮತದಾರನ ಪ್ರತಿಕ್ರಿಯೆ ಇದು
>
> ' ಕುಡುಕರ ನಾಡು
> ಲಂಚದ ಬೀಡು
> ಪುಂಡು ಪೋಕರಿ
> ಹೊಲಸು ರಾಜಕಾರಣಿಗಳ ಗೂಡು
> ಮುಳುಗುತ್ತಿದೆ ಕರ್ನಾಟಕ ನೋಡು.
>
> ಉತ್ತರ ಕನ್ನಡದಲ್ಲಿ ಮಾತ್ರ ಅಲ್ಲ ಇಡೀ ಕರ್ನಾಟಕದಲ್ಲಿ ಚುನಾವಣೆ ಮತ್ತು ಅನಂತರದ ಸ್ಥಿತಿಯನ್ನು ಇದು ಹೇಳುತ್ತಿದೆ. ಯಾರನ್ನು ಆಯ್ಕೆ ಮಾಡಬೇಕು ಎನ್ನುವುದೇ ಮತದಾರನಿಗೆ ಕಷ್ಟವಾಯಿತು. ಒಬ್ಬ ಕೊಟ್ಟೆ ಕೊಡುವವನಾದರೆ, ಎದುರಿನವನು ಕ್ವಾರ್ಟರ್ ಬಾಟ್ಲೆಯನ್ನೇ ಕೊಡುತ್ತಾನೆ. ಮತ್ತೊಬ್ಬ ಕಳ್ಳ ಬಟ್ಟಿಯನ್ನು ಕುಡಿಯುವಷ್ಟು ಕೊಡುತ್ತಾನೆ. ಹಾಗಾಗಿ ಈ ಮೂವರೊಳು ಉತ್ತಮರು ಯಾರು?

ಕಾಂಗ್ರೆ ಕೂಡ [illegible] ಬೆಲೆಏರಿಸುವುದರಲ್ಲಿ ಉದ್ಯೋಗ ಕಸಿಯುವುದರಲ್ಲಿ ಖಾಸಗೀಕರಣ ಮಾಡುವುದರಲ್ಲಿ ಬಿಜೆಪಿಯನ್ನೂ ಮೀರಿಸಲು ಮುಂದಾಗುತ್ತಿದೆ. ಇಂದು ಬಿಜೆಪಿ ಗೆ ಜನಕೊಟ್ಟ ಉತ್ತರವನ್ನೇ ನಾಳೆ ನನಗೂ ಕೊಡುತ್ತಾರೆ ಎನ್ನುವುದನ್ನು ಅರ್ಥಮಾಡಿಕೊಂಡು ಆಡಳಿತ ಪಡೆಯ ಬೇಕಾಗಿದೆ.

ಸಿಪಿಐ(ಎಂ)ನ ಸ್ಪರ್ಧೆ

1. ಜಿಲ್ಲಾ ಪಂಚಾಯತ್ ಮತ್ತು ಮೊದಲಬಾರಿಗೆ 2 ತಾಲೂಕು ಪಂಚಾಯತ್‌ಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸಿತ್ತು. ಮತ್ತು ಪ್ರಬಲ ಸ್ಪರ್ಧೆಯನ್ನು ಕೊಟ್ಟಿದೆ. ಮಾವಿನ ಕುರ್ವಾ ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ತಿಲಕ ಗೌಡ ಅವರು ಮೂರನೇ ಸ್ಥಾನ ಪಡೆದು ಬಿಜೆಪಿಯನ್ನು ನಾಲ್ಕನೇ ಸ್ಥಾನಕ್ಕೆ ದೂಡಿದ್ದಾರೆ. ಮೊದಲಬಾರಿಗೆ ತಾ. ಪಂಚಾಯತ್‌ಗೆ ಸ್ಪರ್ಧಿಸಿರುವ ಮಾವಿನಕುರ್ವಾ ಗ್ರಾಮಪಂಚಾಯತ್ ಸದಸ್ಯೆ ಮಂಜುಳಾನಾಯ್ಕ 1351 ಮತಪಡೆದು ಕಾಂಗ್ರೆನ ನಂತರದ ಸ್ಥಾನ ಪಡೆದಿದ್ದಾರೆ. ಬಾಣ ಮತ್ತು ಕಮಲವನ್ನು ಹಿಂದಿಕ್ಕಿದೆ. ಭಟ್ಕಳ ತಾಲೂಕಿನ ಮಾವಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ನಾಗರತ್ನ ಪಡಿಯಾರ 850ಕ್ಕೂ ಹೆಚ್ಚು ಮತಗಳಿಸಿ 3ನೇ ಸ್ಥಾನ ಪಡೆದಿದ್ದಾರೆ. ಹಣ ಹೆಂಡಗಳ ಬರಾಟೆಯ ನಡುವೆಯೂ ಮೊದಲ ಬಾರಿಗೆ ಸ್ಪರ್ಧಿಸಿದ್ದ ಇವರೆಲ್ಲ ಗಣನೀಯ ಮತಗಳಿಸಿದ್ದು ಉಲ್ಲೇಖನೀಯ, ಆಶಾದಾಯಕ.

ಕಾಂಗ್ರೆ-ಬಿಜೆಪಿ ಮೈತ್ರಿ

ಹೊನ್ನಾವರ ತಾಲೂಕಿನ ಒಂದು ತಾಲೂಕು ಪಂಚಾಯತ್ ಕ್ಷೇತ್ರದಲ್ಲಿ ಜಾತ್ಯಾತೀತ ಜನತಾದಳದ ಗಣಪಯ್ಯಗೌಡ ಅವರನ್ನು ಸೋಲಿಸಲು ಪರಸ್ಪರ ಬೈದಾಡುತ್ತಿರುವ ಕಾಂಗ್ರೆಸ್, ಬಿಜೆಪಿ ಮತ್ತು ಲೋಕಶಕ್ತಿಗಳು ಒಂದಾಗಿರುವುದು ಅಚ್ಚರಿ ಅಲ್ಲದಿದ್ದರೂ ಪಕ್ಷದ ತಾತ್ವಿಕತೆಯ ಬಗ್ಗೆ ಸಂಶಯ ಪ್ರಾರಂಭವಾಗುತ್ತಿವೆ. ಸಾಮಾನ್ಯವಾಗಿ ಕಮ್ಯುನಿಷ್ಟರು ನಿಂತಾಗ ಇವರೆಲ್ಲಾ ಒಟ್ಟಾಗುವುದು ಸರ್ವೆ ಸಾಮಾನ್ಯವಾಗಿದ್ದರೂ ಜನಶಕ್ತಿಯೇ ಇಲ್ಲದ ಜಾತ್ಯಾತೀತ ಜನತಾದಳದ ವಿರುದ್ಧವೂ ಒಂದಾಗುತ್ತಿರುವುದು ಅಸಹ್ಯವಾಗಿದೆ.

ಮತದಾನದಂದು ರಜೆ ಇಲ್ಲ

ಮತದಾನ ದೇಶದ ನಾಗರಿಕನ ಕರ್ತವ್ಯ ಕೂಡಾ ಹೌದು. ಆತ ನೌಕರನಾಗಿರಲಿ ಅಲ್ಲದಿರಲಿ ಮತದಾನದಲ್ಲಿ ಆತ ಪಾಲ್ಗೊಳ್ಳಬೇಕು ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವೆಲ್ಲಿ? ಚುನಾವಣಾ ಆಯೋಗ, ಸರ್ಕಾರ ಈ ಬಗ್ಗೆ ಯೋಚಿಸಬೇಕು. ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆಗೆ ಸರ್ಕಾರಿ ರಜೆ ಘೋಷಣೆ ಆಗಲೇ ಇಲ್ಲ (ರಜೆಯ ಬಗೆಗಿನ ಸುತ್ತೋಲೆ ನಂತರ ಬಂದ ಬಗ್ಗೆ ಕೇಳಿದ್ದೇವೆ. ಎಲ್ಲಾ ಕಾರ್ಖಾನೆಗಳು ಮಾಲಿಕರು ರಜೆಕೊಡಲು ಆಕ್ಷೇಪ ಎತ್ತಿದ್ದು ಖಂಡನೀಯ. ಇನ್ನು ಕೆಲವು ಕಡೆ ಇನ್ನೊಂದು ಭಾನುವಾರದ ರಜಾದಿನದಲ್ಲಿ ಕೆಲಸಮಾಡಿಕೊಡಲು ತಾಕೀತು ಮಾಡಿ ರಜಾಬಿಟ್ಟಿವೆ. ಇದುಕೂಡ ಶೋಷಣೆಯ ಇನ್ನೊಂದು ಮುಖವಾಡವಾಗಿದೆ ಸಂಬಂಧಿಸಿದವರು, ಕಾರ್ಮಿಕ ಇಲಾಖೆ ಈ ಬಗ್ಗೆ ಪರಿಶೀಲಿಸಿ ತಪ್ಪಿತಸ್ತರ ಮೇಲೆ ಕ್ರಮ ಕೈಗೊಳ್ಳಬೇಕು. ಮತ್ತು ಮುಂದೆ ಇದು ಪುನರಾವರ್ತನೆ ಅಗದಿರುವಂತೆ ನೋಡಿ ಕೊಳ್ಳಬೇಕು.

ಕೊನೆ: ಇನ್ನು ಇರುವುದು ಅಧ್ಯಕ್ಷ ಉಪಾಧ್ಯಕ್ಷ ಯಾರು ಎನ್ನುವ ಕುತೂಹಲ ಅಷ್ಟೆ. ಇವೇ ಜಿಲ್ಲೆಯಾದ್ಯಂತ ಅಲರ್ಜಿ ಆಗುವಷ್ಟು ಸಂಖ್ಯೆಯ ಸ್ಥಾನ ಕಾಂಗ್ರೆಗೆ ಲಭ್ಯ ಆಗಿದೆ. ಕೇಂದ್ರದ ಬಿಜೆಪಿಯ ದುರಾಡಳಿತದ ವಿರುದ್ಧ ಜನ ಅವರಿಗೆ ಪಾಠಕಲಿಸಿದ್ದಾರೆ. ಎಂ.ಎಸ್. ಕೃಷ್ಣ ಅವರ ಒಳ್ಳೆಯ ಆಡಳಿತಕ್ಕೆ ಜನಕೊಟ್ಟ ಉಡುಗೊರೆ ಇದಲ್ಲ. ನಮ್ಮ ಮಾಹಿತಿ ತಂತ್ರಜ್ಞಾನದ ಬಗೆಗಿನ ನಿಲುವಿಗೆ ಕರ್ನಾಟಕದ ಜನಕೊಟ್ಟ ಬೆಂಬಲ ಇದು ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಜನರಿಗೆ ಇನ್ನೂ ಮಾಹಿತಿ ತಂತ್ರಜ್ಞಾನ ಎಂದರೆ ಏನು ಎಂದೇ ತಿಳಿದಿಲ್ಲ. ಬಿಜೆಪಿ ಸಂಯುಕ್ತ ರಂಗಕ್ಕೆ ಜನ ಕಲಿಸಿದ ಪಾಠ ರಾಜ್ಯದ ಕಾಂಗ್ರೆಗೂ ಪಾಠವಾಗಿದೆ. ಮತ್ತು ಜಿಲ್ಲಾಡಳಿತ ಕೂಡ ಇದನ್ನು ಜನ ಕಲಿಸಿದ ಪಾಠ ಎಂದೇ ತಿಳಿಯಬೇಕು.

- ವಿಠ್ಠಲ ಭಂಡಾರಿ

> **ಬಿಜೆಪಿ-ಕ್ರಾಂ**
>
> ವೇಟೋಳಿ ತಾ. ಪಂ. ಕ್ಷೇತ್ರದಲ್ಲಿ ಒಟ್ಟು ಮತದಾರರ ಸಂಖ್ಯೆ 7869. ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ರೈತರು, ಕೃಷಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಜನಸಂಖ್ಯೆ ಜಾಸ್ತಿ. ಅಲ್ಪಸಂಖ್ಯಾತರ ಜನ ಹೆಚ್ಚಾಗಿರುವ ಈ ಕ್ಷೇತ್ರದಲ್ಲಿ ನಮ್ಮ ಪಕ್ಷದ ಸದಸ್ಯರು 12 ಗ್ರಾಮಗಳಲ್ಲಿ ಒಬ್ಬರೇ ಒಬ್ಬರು ಇಲ್ಲ. ಒಂದು ಕಡೆ ಡಿವೈಎಫ್‌ಐ ಹಾಗೂ ಸಿಐಟಿಯು ಮಾತ್ರ ಇದೆ. ಉಳಿದ ಕಡೆ ಇಲ್ಲ. ಈ ಕ್ಷೇತ್ರದಲ್ಲಿ ಜನರ ಮುಖ್ಯ ಸಮಸ್ಯೆಗಳಾದ ಜನರು ಆಕ್ರಮಿಸಿದ ಸರ್ಕಾರಿ ಜಾಗಕ್ಕೆ ಪಟ್ಟೆ ಇಲ್ಲ, ಕುಡಿಯುವ ನೀರಿಲ್ಲ, ಇಂದಿಗೂ ವಿದ್ಯುತ್‌ಛಕ್ತಿ ಇಲ್ಲ, ಟೆಲಿಫೋನ್ ಸೌಕರ್ಯ ಇಲ್ಲ, ಹದಗೆಟ್ಟ ರಸ್ತೆಗಳು ಇವೆಲ್ಲವು ಮುಖ್ಯ ಸಮಸ್ಯೆಗಳು. ಈ ಸಮಸ್ಯೆಗಳು ಮುಖ್ಯ ಸಮಸ್ಯೆಗಳಾದರೂ ಯಾವುದೇ ಪಕ್ಷ ಇದರ ಬಗ್ಗೆ ಗಮನ ನೀಡದಿರುವುದು ಆ ಪ್ರದೇಶದ ಜನರಲ್ಲಿ ರೋಷ ಇತ್ತು. ಇದನ್ನು ನಾವು ಸಮರ್ಪಕವಾಗಿ ಬಳಸಿಕೊಂಡು ಜನರ ಮಧ್ಯೆ ಪ್ರಚಾರ

ಹಸಿರು ತೋಟಗಳ ನಡುವೆ ಶ್ರಮಜೀವಿಗಳ ಉಸಿರು ತುಂಬಿದ ಗೆಲುವು

ಈಗಾಗಲೇ ನಡೆದ ಜಿಲ್ಲಾ ಪಂಚಾಯ್ತಿ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷವು ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಮತ್ತು ಬೇಟೋಳಿ ತಾಲೂಕು ಪಂಚಾಯ್ತಿ ಕ್ಷೇತ್ರಗಳಿಂದ ಪಕ್ಷದ ಅಭ್ಯರ್ಥಿಗಳಾಗಿ ಕಾಂ. ಹೆಚ್.ಎಂ.ಕಾಳಯ್ಯ ಮತ್ತು ಪೀಟರ್ ಲೋಬೋರವರು ಸ್ಪರ್ಧಿಸುವಂತೆ ತೀರ್ಮಾನಿಸಿತ್ತು. ಜಿಲ್ಲಾ ಮಟ್ಟದಲ್ಲಿ ಕಾಂಗ್ರೆಸ್, ಬಿಜೆಪಿಗೆ ಪರ್ಯಾಯವಾಗಿ ಮಾಜಿ ಶಾಸಕ ಡಿ.ಎಸ್.ಮಾದಪ್ಪನವರ ನಾಯಕತ್ವದ ಜನತಾದಳ(ಜಾತ್ಯಾತೀತ) ಮತ್ತು ಮಾಜಿ ಸಚಿವ ಎಂ.ಸಿ.ನಾಣಯ್ಯನವರ ನಾಯಕತ್ವದ ಜನತಾದಳ(ತಟಸ್ಥ) ಇವರೊಂದಿಗೆ ಮಾತುಕತೆ ನಡೆಸಿ ತೃತೀಯರಂಗವನ್ನು ಬಲಪಡಿಸುವ ನಿಟ್ಟಿನಲ್ಲಿ ಚುನಾವಣಾ ಸ್ಥಾನ ಹೊಂದಾಣಿಕೆಯನ್ನು ಮಾಡಿಕೊಳ್ಳುವಂತೆ ನಮ್ಮ ಪಕ್ಷವು ತೀರ್ಮಾನಿಸಿತ್ತು.


ಚುನಾವಣೆಗೆ (ನಾಮಪತ್ರ ಸಲ್ಲಿಸಲು) ಹದಿನೈದು ದಿನಗಳ ಮುಂಚಿತವಾಗಿ ಜನತಾದಳ(ಜಾ) ಮತ್ತು ಜನತಾದಳ(ಮೂಲ) ಈ ಎರಡು ಬಣಗಳು ಜತೆ ಸೇರಿ ಜನತಾಪರಿವಾರ ಎಂಬ ಕೂಟವನ್ನು ಕಟ್ಟಿಕೊಂಡು ಎಡ ಪಕ್ಷಗಳನ್ನು ಸೇರಿದಂತೆ ತೃತೀಯರಂಗದ ಅಡಿಯಲ್ಲಿ ಚುನಾವಣೆಯನ್ನು ಎದುರಿಸುವುದಾಗಿ ಘೋಷಣೆ ಮಾಡಿದರು. ಅಷ್ಟರಲ್ಲೇ ನಾಮಪತ್ರ ಸಲ್ಲಿಕೆಯ ಪ್ರಕ್ರಿಯೆ ಆರಂಭವಾಯಿತು. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರವನ್ನು ಸಿಪಿಐ(ಎಂ) ಗೆ ಬಿಟ್ಟುಕೊಡುವಂತೆ ತೀರ್ಮಾನಿಸಿರುವುದಾಗಿ ನಮಗೆ ತಿಳಿಸಲಾಯಿತು. ಆದರೆ ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಎಂ.ಸಿ.ನಾಣಯ್ಯ ಬಣದ ಅಭ್ಯರ್ಥಿ ನಾಮಪತ್ರ ಸಲ್ಲಿಸಿ ಸ್ಪರ್ಧಿಸಿದರು ಮತ್ತು ಆ ಅಭ್ಯರ್ಥಿಯ ಪರವಾಗಿ ಎಂ.ಸಿ.ನಾಣಯ್ಯ, ಟಿ.ಪಿ.ರಮೇಶ ಮುಂತಾದ ನಾಯಕರು ಬಹಿರಂಗವಾಗಿ ಮತಯಾಚನೆ ಮಾಡಿದರು. ಆದರೆ ಜನತಾ ಪರಿವಾರದ ಭಾಗವಾದ ಜೆ.ಜಿ(ಎಸ್)ನ ಡಿ.ಎಸ್.ಮಾದಪ್ಪನವರು ಸಿದ್ದಾಪುರ ಕ್ಷೇತ್ರದಲ್ಲಿ ಪರಿವಾರದ ಪರವಾಗಿ ಮತಯಾಚನೆಗೆ ಬರಲಿಲ್ಲ. ಬೇಟೋಳಿ ತಾ.ಪಂಚಾಯ್ತಿ ಕ್ಷೇತ್ರದಲ್ಲಿ ಪರಿವಾರದ ಅಭ್ಯರ್ಥಿ ಇಲ್ಲದೆ ಇದ್ದುದರಿಂದ ಅಲ್ಲಿ ಬಹಿರಂಗವಾಗಿ ಪಕ್ಷದ ಅಭ್ಯರ್ಥಿಯಾದ ಕಾಂ. ಪೀಟರ್ ಲೋಬೋರವರ ಪರವಾಗಿ ಮತಯಾಚನೆ ಮಾಡಿದರು.

ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ 'ಬಾಂಬೆ ಬರ್ಮ ಟ್ರೇಡಿಂಗ್ ಕಾರ್ಪೊರೇಷನ್' (ಬಿಬಿಟಿಸಿ) ಕಂಪನಿ ಮತ್ತು 'ಕಾನ್ಸ್‌ಕಾಫಿ' ಕಂಪನಿಗೆ ಸೇರಿದ ಪ್ಲಾಂಟೇಷನ್ ಪ್ರದೇಶ. ಈ ಕ್ಷೇತ್ರದಲ್ಲಿ ಸಿದ್ದಾಪುರ, ಮಾಲ್ದಾರೆ, ಚೆನ್ನಯ್ಯನ ಕೋಟೆ ಎಂಬ ಮೂರು ಗ್ರಾಮಪಂಚಾಯ್ತಿಗಳೂ ಮತ್ತು ಸಿದ್ದಾಪುರ, ಮಾಲ್ದಾರೆ ಎಂಬ ಎರಡು ತಾಲೂಕು ಪಂಚಾಯ್ತಿ ಕ್ಷೇತ್ರಗಳು ಈ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಬರುತ್ತವೆ.

ಈ ಹಿಂದೆ ಈ ಕ್ಷೇತ್ರದ ಎಲ್ಲಾ ಚುನಾಯಿತ ಸ್ಥಾನಗಳು ಜನತಾದಳದ ಹಿಡಿತದಲ್ಲಿತ್ತು, ಎಂ.ಸಿ.ನಾಣಯ್ಯನವರ ಬಣದ ರಾಜಕೀಯದ ಹೃದಯ ಭಾಗವು ಒಂದು ರೀತಿಯಲ್ಲಿ ಸಿದ್ದಾಪುರವೇ ಆಗಿತ್ತು.

ಜನರ ಕಷ್ಟಗಳಿಗೆ ಸ್ಪಂದನ

ಈ ಪ್ರದೇಶದಲ್ಲಿ ನಮ್ಮ ಸಾಮೂಹಿಕ ಸಂಘಟನೆಗಳಾದ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್(ಸಿಐಟಿಯು)ಗೆ ಸದಸ್ಯತ್ವ ಕಡಿಮೆಯಾದರೂ ಸಂಘಟನೆಗೆ ಹೆಚ್ಚು ಪ್ರಭಾವ ಇರುವ ಕ್ಷೇತ್ರ ಇದಾಗಿದೆ. ಅಲ್ಲದೆ ಪಕ್ಷ ಮತ್ತು ಡಿವೈಎಫ್ಐ ಸಂಘಟನೆಯ ವತಿಯಿಂದ ನಡೆಸಿರುವ ಹಲವಾರು ಹೋರಾಟ ಕಾರ್ಯಕ್ರಮಗಳು, ಕಳೆದ ವರ್ಷ ಅರೆಕಾಡು ಪ್ರದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಸಂಘಪರಿವಾರವು ನಡೆಸಿದ ಹಲ್ಲೆ ದೌರ್ಜನ್ಯವನ್ನು ಖಂಡಿಸಿ ನಾವು ನಡೆಸಿದ ಸೌಹಾರ್ದತಾ ರ್‍ಯಾಲಿ, ಸಿದ್ದಾಪುರದಲ್ಲಿ ನಡೆದ ಬಹಿರಂಗ ಸಭೆ, ಶಾಲೆಯಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ತಲೆಯ ಮೇಲೆ ವಸ್ತ್ರ ಧರಿಸಬಾರದೆಂಬ ಸಂಘಪರಿವಾರದ ಷಡ್ಯಂತ್ರದ ವಿರುದ್ಧ ಮತ್ತು ಈ ಪ್ರದೇಶದಲ್ಲಿ ಮುಸ್ಲಿಮರು ಹೆಚ್ಚಾಗಿ ನೆಲೆಸಿರುವ ಕಡೆ ಐಎಸ್ಐ ಚಟುವಟಿಕೆ ತೀವ್ರವಾಗಿ ನಡೆಯುತ್ತಿದೆ, ಬಾಂಬ್ ತಯಾರಿಕೆ ಮತ್ತು ಪ್ರಯೋಗ ನಡೆದಿದೆ ಎಂದು ಸಂಘ ಪರಿವಾರವು ಕಳೆದ ಮಳೆಗಾಲದಲ್ಲಿ ಸಿಡಿಲಿನ ಹೊಡೆತಕ್ಕೆ ಸಿಕ್ಕಿ ಸಿಗಿದು ಬಿದ್ದಿರುವ ದೊಡ್ಡ



ಸಿದ್ದಾಪುರ ಜಿಲ್ಲಾ ಪಂಚಾಯ್ತಿಯಲ್ಲಿ ವಿಜಯಿಯಾದ ಹೆಚ್.ಎಂ.ಕಾಳಯ್ಯ

ಮರವೊಂದನ್ನು ತಮ್ಮ ಅಪಪ್ರಚಾರಕ್ಕೆ ಬಳಸಿಕೊಂಡಾಗ ಅದರ ವಿರುದ್ಧ ಪಕ್ಷ ಮತ್ತು ಡಿವೈಎಫ್ಐ ಸಾಮೂಹಿಕ ಸಂಘಟನೆಗಳು - ನಡೆಸಿದ ಹೋರಾಟವನ್ನು ಈ ಪ್ರದೇಶದ ಮುಸ್ಲಿಂ ಅಲ್ಪಸಂಖ್ಯಾತರು ಗುರುತಿಸಿದ್ದರು. ಮಾತ್ರವಲ್ಲದೆ ಈ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆ ಕಣ್ಣೂರು ಕ್ಷೇತ್ರದ ಪಕ್ಷದ ಸಂಸತ್ ಸದಸ್ಯರಾದ ಕಾಂ. ಎ.ಪಿ.ಅಬ್ದುಲ್ಲಾ ಕುಟ್ಟಿಯವರು ಭಾಗವಹಿಸಿದ್ದು ಮುಸ್ಲಿಂ ಯುವಕರ ನಡುವೆ ಉತ್ತಮ ಪ್ರಭಾವವನ್ನು ಬೀರಿ ಕೆಲವು ಕಡೆಗಳಲ್ಲಿ ಅವರ ಸ್ವಯಂಸ್ಫೂರ್ತಿಯಿಂದ ಪ್ರಚಾರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ದುಡಿಯುವ ಜನರ ಸ್ವಯಂಸ್ಫೂರ್ತಿ, ಪ್ರಚಾರ

ಇದೇ ಸಂದರ್ಭದಲ್ಲಿ ನಮ್ಮ ಕಾರ್ಮಿಕ ಸಂಘದ ಸದಸ್ಯರಿರುವ ತೋಟಗಳಲ್ಲಿ ಕಾರ್ಮಿಕರು ತಮ್ಮಲ್ಲೇ ಚುನಾವಣಾ ನಿಧಿಗಾಗಿ ಹಣ ಸಂಗ್ರಹಮಾಡಿಕೊಂಡು ಸಂಜೆ ಹೊತ್ತಿನಲ್ಲಿ ತಮ್ಮ ದಿನದ ದುಡಿಮೆಯ ಅವಧಿ ಮುಗಿದ ನಂತರ ತಮ್ಮ ಸಮೀಪದ ತೋಟಗಳಿಗೆ ಹೋಗಿ ಚುನಾವಣಾ ಪ್ರಚಾರ ಕಾರ್ಯಗಳಿಗೆ ತೊಡಗಿಸಿಕೊಂಡಿದ್ದರು. ನಮ್ಮ ಸದಸ್ಯರು ಸಂಘಟನೆ ಇಲ್ಲದ ಕೆಲವು ತೋಟಗಳಲ್ಲಿಯೂ ಕಾರ್ಮಿಕರು ಸ್ಫೂರ್ತಿಯಿಂದ ಪಕ್ಷದ ಪರವಾಗಿ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು. ಕೆಲವು ತೋಟಗಳ ಕಾರ್ಮಿಕರು ನಮ್ಮ ಪಕ್ಷದ ವಿಜಯಕ್ಕಾಗಿ ದೇವರಿಗೆ ಹರಕೆ ಹೊತ್ತುಕೊಂಡು ಪ್ರಾರ್ಥನೆ ಮಾಡಿದ ಪ್ರಸಂಗವೂ ಇದೆ.

ಇದೇ ಸಂದರ್ಭದಲ್ಲಿ ಕೊಡಗು ಜಿಲ್ಲಾ ಪಂಚಾಯ್ತಿಯ ಮುಂದಿನ ಅಧ್ಯಕ್ಷರಾಗುವ ಅಭ್ಯರ್ಥಿಯೆಂದೇ ಇದ್ದ ಈ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿಯಾಗಿರುವುದರಿಂದ ಅವರ ಗೆಲುವು ಕಾಂಗ್ರೆಸ್ ಪಕ್ಷದ ಪ್ರತಿಷ್ಠೆಯಾಗಿದ್ದು ಈ ಕ್ಷೇತ್ರದಲ್ಲಿಯು ಸಹ ಕಾಂಗ್ರೆಸ್ ಅಪಾರ ಪ್ರಮಾಣದಲ್ಲಿ ಹಣ ಮತ್ತು ಹೆಂಡವನ್ನು ಹಂಚಿತ್ತು. ಈ ವಿಚಾರದಲ್ಲಿ ಬಿಜೆಪಿಯು ಸಹ ಹಿಂದೆ ಬಿದ್ದಿಲ್ಲ.

ಆದರೆ ನಮ್ಮ ಸಂಘಟನೆ ಇರುವ ಕೆಲವು ತೋಟಗಳ ಕಾರ್ಮಿಕರು ಹಣ ಹೆಂಡ ಹಂಚಲು ಹೋದ ಇತರ ಪಕ್ಷಗಳ ಕಾರ್ಯಕರ್ತರನ್ನು ಬೆದರಿಸಿ ಹಿಂದಕ್ಕೆ ಕಳಿಸಿದ್ದಾರೆ. ಬಿಜೆಪಿ ಕಡೆಯಿಂದ ಕೆಲವು ತೋಟಗಳ ಕಾರ್ಮಿಕರು ಮತದಾರರಿಗೆ ಸೀರೆಗಳನ್ನು ವಿತರಿಸಿದ್ದಾರೆ. ಮತದಾನದ ಕೊನೆ ದಿನಗಳಲ್ಲಿ ನಾವು ತೀವ್ರವಾದ ಆರ್ಥಿಕ ಸಮಸ್ಯೆಯನ್ನು ಎದುರಿಸುವಂತಾಯಿತು. ಇದೇ ಸಂದರ್ಭ ಕಾಂಗ್ರೆಸ್ ಪಕ್ಷದ ಪ್ರಚಾರ ಬಿರುಸಿನಿಂದ ನಡೆಯಲು ಪ್ರಾರಂಭವಾಯಿತು. ಆದರೂ ಚುನಾವಣೆಯ ಜವಾಬ್ದಾರಿಯನ್ನು ಹೊತ್ತಿದ್ದ ಅಭ್ಯರ್ಥಿಯಾದ ನನ್ನನ್ನು ಸೇರಿದಂತೆ ಕಾಂ. ಎಂ.ಜಿ.ಜೋಸ್, ಎನ್.ಡಿ.ಕುಟ್ಟಪ್ಪ, ಆರ್.ರವೀಂದ್ರನ್, ಪಿ.ಸುಧಾಕರ, ಎಂ.ಮೈಕೆಲ್ ನಾವುಗಳು ಪ್ರಚಾರ ಕಾರ್ಯದಲ್ಲಿ ನಿರತರಾಗಿರುವ ನಮ್ಮ ಕಾರ್ಯಕರ್ತರಿಗೆ ಧೈರ್ಯತುಂಬಿ ಅವರು ಧೃತಿಗೆಡದಂತೆ ಈ ಕ್ಷೇತ್ರದಲ್ಲಿ ಈ ಬಾರಿ ನಮ್ಮ ಗೆಲುವು ಖಚಿತ ಎಂಬ ಆತ್ಮಸ್ಥೈರ್ಯವನ್ನು ಮೂಡಿಸುವ ಪ್ರಯತ್ನವನ್ನು ಮಾಡುತ್ತಿದ್ದೆವು.

ಸಾಹಸಮಯ ಮತಯಾಚನೆ: ಈ ಕ್ಷೇತ್ರದಲ್ಲಿ ಹಗಲು ಹೊತ್ತಿನಲ್ಲಿ ಮತದಾರರನ್ನು ಭೇಟಿ ಮಾಡಲು ಅಸಾಧ್ಯವಾದ್ದರಿಂದ ಮುಂಜಾನೆ 5.30 ರಿಂದ ತೋಟಗಳ ಕಾರ್ಮಿಕರ ಲೈನ್ ಮನೆಗಳಿಗೆ ತೆರಳಿ, ಬೆಳಗ್ಗೆ 7.30 ರಿಂದ 8.15 ರ ವರೆಗೆ ತೋಟಗಳ ಚಕ್ರೋಲ್(ಹಾಜರಾತಿಯ ಸ್ಥಳ)ಗಳಿಗೆ ಹೋಗಿ ಮತಯಾಚನೆ ಮಾಡುತ್ತಿದ್ದೆವು. ಉಳಿದ ಸಮಯದಲ್ಲಿ ನಮ್ಮ ಪಕ್ಷದ ಹಿತೈಷಿಗಳು ಮತ್ತು ಇತರ ಸ್ನೇಹಿತರಿಂದ ಚುನಾವಣಾ ನಿಧಿಗಾಗಿ ಆರ್ಥಿಕ ಸಹಾಯವನ್ನು ಸಂಗ್ರಹಿಸಿ ಅಪರಾಹ್ನ 4.30 ರ ನಂತರ ಮತ್ತೆ ಮತದಾರರನ್ನು ಭೇಟಿ ಮಾಡುವ ಕೆಲಸಕ್ಕೆ ಮುಂದಾಗುತ್ತಿದ್ದೆವು. ರಾತ್ರಿ ಸುಮಾರು 8.30 ರ ನಂತರ ಕೆಲಸ ಬಿಟ್ಟು ಬಂದು ಆಯಾಸದಿಂದ ಜನರು ಮಲಗಿ ನಿದ್ರಿಸಿ ಬಿಡುತ್ತಿದ್ದರು. ಈ ಸಂದರ್ಭದಲ್ಲಿ ನಾವು ಸುಮಾರು 7 ರಿಂದ 15 ಸಂಗಾತಿಗಳಿರುವ ಪ್ರಚಾರದ ನಮ್ಮ ತಂಡ ಪಕ್ಷದ ಪರವಾಗಿ ಘೋಷಣೆಗಳನ್ನು ಕೂಗುತ್ತಿದ್ದೆವು. ಈ ಶಬ್ದದಿಂದ ಮಲಗಿದ ಜನ ನಿದ್ರೆಯಿಂದೆದ್ದು ದೀಪ ಹಚ್ಚಿ ಬಾಗಿಲು ತೆರೆಯುತ್ತಿದ್ದರು. ಈ ಸಂದರ್ಭ ನಾವು ಪರಿಚಯಿಸಿಕೊಂಡು ಅವರಿಂದ ಮತಯಾಚನೆ ಮಾಡುತ್ತಿದ್ದೆವು. ಈ ರೀತಿಯ ಪ್ರಕ್ರಿಯೆ ರಾತ್ರಿ 11.30 ಗಂಟೆಯವರೆಗೂ ನಡೆಯುತ್ತಿತ್ತು. ಅಲ್ಲದೆ ಈ ಕ್ಷೇತ್ರದ ವ್ಯಾಪ್ತಿಗೆ ದುಬಾರೆ ಮೀಸಲು ಅರಣ್ಯ ಪ್ರದೇಶದ ಕೆಲವು ಗಿರಿಜನ ಹಾಡಿಗಳು ಸೇರುತ್ತವೆ. ಹಗಲುಹೊತ್ತಿನಲ್ಲೇ ಕಾಡಾನೆಗಳು, ಚಿರತೆ, ಕರಡಿಗಳ ಹಾವಳಿ ಹೆಚ್ಚಾಗಿದ್ದು ಭಯಾನಕ ವಾತಾವರಣದ ನಡುವೆಯೂ ಒಂದು ಸಾಹಸಮಯವಾದ ಚುನಾವಣಾ ಪ್ರಚಾರ ಕಾರ್ಯ ನಮ್ಮದಾಗಿತ್ತು.

ಮಾಲೀಕರ ಕುತಂತ್ರ: ಕೊನೆಯದಿನಗಳಲ್ಲಿ ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷ ಜಯಗಳಿಸುತ್ತದೆ ಎಂಬ ಸಾರ್ವಜನಿಕ ಅಭಿಪ್ರಾಯ ಮೂಡಿಬರುವ ಸಂದರ್ಭದಲ್ಲಿ ಈ ಕ್ಷೇತ್ರಕ್ಕೆ ಸೇರಿದ ಕಂಪನಿಗಳು ಸೇರಿದಂತೆ ಇತರ ತೋಟ ಮಾಲಕರು ಮ್ಯಾನೇಜರುಗಳು ಸೇರಿ ಮತದಾನದ ದಿನ ಕೆಲವು ಕಾರ್ಮಿಕರು ಮತಚಲಾಯಿಸದಂತೆ ತಡೆಯಲು ಅವರನ್ನು ಪೂರ್ಣದಿನ ಕೆಲಸ ಮಾಡಿಸಿರುತ್ತಾರೆ. ಇನ್ನೂ ಕೆಲವರು ಕಾರ್ಮಿಕರು ಮತಚಲಾಯಿಸಲು ಎರಡು ಗಂಟೆಗಳ ಅವಧಿಯ ಸಮಯವನ್ನು ನೀಡಬೇಕೆಂಬ ಚುನಾವಣಾ ಆಯೋಗದ ನಿಯಮವನ್ನು ಪಾಲಿಸಿದಂತೆ ಮಾಡಲು ಸುಮಾರು 4.00 ಗಂಟೆಯ ಸಮಯದಲ್ಲಿ ಅಂದರೆ ಮತದಾನದ ಕೊನೆಯ ಗಳಿಗೆಯಲ್ಲಿ ಅವಕಾಶ ಕಲ್ಪಿಸಿರುತ್ತಾರೆ. ಆ ದಿನದಂದು ಜಿನುಗು ಮಳೆ ಸಹ ಇದ್ದುದರಿಂದ ತಮ್ಮ ವಾಸಸ್ಥಳದಿಂದ ಮತದಾನ ಕೇಂದ್ರಕ್ಕೆ ಸುಮಾರು 2 ರಿಂದ 3 ಕಿ.ಮಿ. ದೂರಕ್ಕೆ ನಡೆದುಕೊಂಡೇ ಹೋಗಬೇಕಾದುದರಿಂದ ಹೆಚ್ಚಿನ ತೋಟ ಕಾರ್ಮಿಕರು ಮತ ಚಲಾಯಿಸದಂತೆ ತಡೆಯುವ ಪ್ರಯತ್ನವು ನಡೆದಿರುತ್ತದೆ.

ಮತಕಟ್ಟು ಅಡಗಿಸಿಟ್ಟ ಕಾಂಗ್ರೆಸ್: ಈ ಎಲ್ಲಾ ಪ್ರಯತ್ನಗಳು ವಿಫಲತೆಗಳ ನಡುವೆಯೂ ಮತ ಎಣಿಕೆಯ ದಿನ ನಮ್ಮ ಬ್ಯಾಲೆಟ್ ಪೇಪರ್‌ನ 25 ರ ಒಂದು ಬಂಡಲನ್ನು ಅಡಗಿಸಿಟ್ಟ ಕಾಂಗ್ರೆ ಕಾರ್ಯಕರ್ತರು ಎಣಿಕೆಯ ಪ್ರಕ್ರಿಯೆ ಮುಗಿಯುವ ಮುನ್ನವೇ ಹೊರನಡೆದು ಕಾಂಗ್ರೆ ಅಭ್ಯರ್ಥಿ ವಿಜಯಿಯಾಗಿರುವುದಾಗಿ ಹೂಮಾಲೆ ಧರಿಸಿ ಕುಣಿದು ಕುಪ್ಪಳಿಸುವ ಮೂಲಕ ಎಲ್ಲರಿಗೂ ಅಚ್ಚರಿಯನ್ನುಂಟು ಮಾಡಿದರು. ಆದರೆ ನಮ್ಮ ಪಕ್ಷದ ಕಾರ್ಯಕರ್ತರು ಪಟ್ಟು ಬಿಡದೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಚಲಾಯಿಸಲ್ಪಟ್ಟ ಒಟ್ಟು 8534 ಮತಗಳು ಮತ್ತು ಎಣಿಕೆಯ ವರದಿಯನ್ನು ಪರಿಶೀಲಿಸಿ 36 ಮತಗಳ ಅಂತರದಿಂದ ಸಿಪಿಐ(ಎಂ)ನ ಅಭ್ಯರ್ಥಿ ಜಯಗಳಿಸಿರುವ ಅಂಶದೆಡೆಗೆ ಗಮನ ಸೆಳೆಯಲಾಯಿತು. ಇದಕ್ಕೆ ಒಪ್ಪದ ಕಾಂಗ್ರೆ ಮುಖಂಡರು ಸಚಿವೆ ಸುಮಾವಸಂತ್ ಸಮ್ಮುಖದಲ್ಲಿ ಮರು ಎಣಿಕೆಗೆ ಒತ್ತಾಯಿಸಿದಾಗ ಮರು ಎಣಿಕೆಯು ನಡೆದು ಆಗಲೂ ಸಿಪಿಐ(ಎಂ) ಅಭ್ಯರ್ಥಿಗೆ ಒಂದು ಮತ ಹೆಚ್ಚಿಗೆ ಸಿಕ್ಕಿ ಒಟ್ಟು 2,859 ಮತಗಳನ್ನು ಪಡೆಯುವ ಮೂಲಕ 37 ಮತಗಳ ಅಂತರದಿಂದ ಜಯಗಳಿಸಿದ್ದಾರೆ ಎಂಬ ಅಧಿಕೃತ ಘೋಷಣೆಯೊಂದಿಗೆ ನಾವು ಪ್ರಮಾಣ ಪತ್ರ ಪಡೆದು ಎಣಿಕಾಕೇಂದ್ರದಿಂದ ಹೊರ ಬಂದೆವು.

ಸ್ವಾತಂತ್ರ್ಯದ ನಂತರ ಕೊಡಗು ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವು ಮತಪತ್ರದಮೂಲಕ ಜಿಲ್ಲಾ ಮಟ್ಟದಲ್ಲಿ ಒಂದು ಚುನಾಯಿತ ಸ್ಥಾನವನ್ನು ಗಳಿಸಿದೆ. ಕೊಡಗು ಪ್ರತ್ಯೇಕತೆ ವಿರುದ್ಧ ಹಾಗೂ ಅಭಿವೃದ್ಧಿಗಾಗಿ ಹೋರಾಡುತ್ತಿರುವ ಸಿಪಿಐ(ಎಂ) ನ ಹೋರಾಟಕ್ಕೆ ಹೊಸ ಸ್ಫೂರ್ತಿ ನೀಡಿದೆ. ಈ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿಯೇ ದುಡಿಯುವ ವರ್ಗದ ಕ್ರಾಂತಿಕಾರಿ ಪಕ್ಷದ ಬೆಳವಣಿಗೆಗಾಗಿ ಹಲವಾರು ದಶಕಗಳಿಂದ ದುಡಿದ ಹಿರಿಯರ ಶ್ರಮ ಎಂದಿಗೂ ವ್ಯರ್ಥವಲ್ಲ ಎಂಬ ಸಂತೋಷದೊಂದಿಗೆ ಇದೀಗ ನಮ್ಮ ಹೋರಾಟಕ್ಕೆ ಸ್ಫೂರ್ತಿ ಹಾಗೂ ಜವಾಬ್ದಾರಿಯನ್ನು ನೀಡಿದೆ. ಸಿದ್ದಾಪುರ ಕ್ಷೇತ್ರದ ಮತದಾರರು ಹಾಗೂ ಜಿಲ್ಲೆಯ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ ದುಡಿಯಬೇಕಾಗಿದೆ.

ವರದಿ: ಹೆಚ್.ಎಂ.ಕಾಳಯ್ಯ

...ಸ್‌ನ ಕುತಂತ್ರದಿಂದ ಸೋಲು

ಮಾಡುವುದರೊಂದಿಗೆ 12 ಗ್ರಾಮಗಳಲ್ಲಿ ಜನ ನಮ್ಮನ್ನು ಗಮನಿಸುತ್ತಿದ್ದಾರೆ.

ಕಾಫಿಗೆ ಬೆಂಬಲ ಬೆಲೆ ಘೋಷಣೆಗೆ ಒತ್ತಾಯ, ವಿರಾಜಪೇಟೆ ದೊಂಬಿ ಪ್ರಕರಣದಲ್ಲಿ ಕೇಸು ವಾಪಸು ಪಡೆಯಲು ನಡೆಸಿದ ಸಹಿ ಸಂಗ್ರಹ ಚಳುವಳಿ, ಕೊಡಗು ರಾಜ್ಯ ಮುಕ್ತಿಮೋರ್ಚವನ್ನು ಸಮರ್ಥವಾಗಿ ವಿರೋಧಿಸಿದ್ದು, ಕೊಡವ ಸಾಹಿತ್ಯ ಅಕಾಡೆಮಿ ಬೇಕೆಂದು ಹೋರಾಟ ನಡೆಸಿದ್ದು ಇವೆಲ್ಲವು ನಮಗೆ ಉತ್ತಮವಾದ ಪ್ರತಿಕ್ರಿಯೆಯಾಗಿ ಆ ಭಾಗದ ಜನರಿಂದ ಬಂತು. ಜನರೇ ನಮ್ಮನ್ನು 'ನೀವು ಬೆಲೆಯೇರಿಕೆ ವಿರುದ್ಧ ಹೋರಾಟ ನಡೆಸಿದವರು, ಪೋಲೀಸ್ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದವರು ಎಂದು ಗುರುತಿಸಿದರು.

ಜನರ ಉತ್ತಮ ಪ್ರತಿಕ್ರಿಯೆ ನಮಗೆ ಸಿಕ್ಕಿದ ಬೆಂಬಲ ನೋಡಿ ಕಾಂಗ್ರೆಸ್ ಬಿಜೆಪಿಗೆ ದಿಗ್ಭ್ರಮೆ ಉಂಟು ಮಾಡುತ್ತಿತ್ತು. ಕಳೆದ ಬಾರಿ ಬಿಜೆಪಿಯ ವಶದಲ್ಲಿ ಇದ್ದ ಈ ಕ್ಷೇತ್ರ ಈ ಬಾರಿ ಮತಗಟ್ಟೆಯ ಬಳಿ ಕೂರಲು ಏಜೆಂಟರೂ ಇಲ್ಲದೆ ಪರದಾಡುವ ಸ್ಥಿತಿಯಲ್ಲಿ ಇತ್ತು. ಎಷ್ಟು ಹಣ, ಹೆಂಡ ನೀಡಿದರೂ ಈ ಬಾರಿ ನಮ್ಮ ಮತ ಸಿಪಿಐ(ಎಂ) ಅಭ್ಯರ್ಥಿ ಪೀಟರ್‌ರವರಿಗೆ ಎಂದು ನೇರವಾಗಿ ಬಿಜೆಪಿಯವರಿಗೆ ತಿಳಿಸಿದ್ದು ಉಂಟು. ಇದನ್ನು ಬಿಜೆಪಿ ಕಾರ್ಯಕರ್ತರೇ ಹೇಳಿದ್ದು. ಇದನ್ನೆಲ್ಲಾ ಸಹಿಸದ ಬಿಜೆಪಿ ಹಣ, ಹೆಂಡವನ್ನು ಮತ್ತಷ್ಟು ನೀಡುವ ಪ್ರವೃತ್ತಿ ಪ್ರಾರಂಭಿಸಿತು. ಇದಕ್ಕೂ ಮತದಾರರು ಬಗ್ಗಲಿಲ್ಲ.

ಆ ಸಂದರ್ಭದಲ್ಲಿ ಸ್ವತಃ ಬಿಜೆಪಿಯ ಅಭ್ಯರ್ಥಿ ಮತ್ತು ಮುಖಂಡರು ನೇರವಾಗಿ ನಿಮಗೆ ಬಿಜೆಪಿಗೆ ಮತ ನೀಡಲು ಇಷ್ಟವಿಲ್ಲದಿದ್ದರೆ ಕಾಂಗ್ರೆಸ್‌ಗೆ ನೀಡಿ ಸಿಪಿಎಂಗೆ ಮಾತ್ರ ನೀಡಬೇಡಿ ಎಂದು ಪ್ರಚಾರ ಪ್ರಾರಂಭಿಸಿತು. ಈ ಪ್ರಚಾರಕ್ಕೆ ಕಾರಣ ನಮ್ಮ ಪಕ್ಷದ ಕರಪತ್ರಗಳು ಕೇಂದ್ರ ಸರ್ಕಾರದಜನ ವಿರೋಧಿ ನೀತಿಗಳು, ಬಹಿರಂಗ ಹೇಳಿಕೆಗಳು, ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟದಲ್ಲಿ ಬಿಜೆಪಿ ಅನುಸರಿಸಿದ [illegible] ನೀತಿಗಳನ್ನು ಬಹಿರಂಗಗೊಳಿಸಿದುದು ಬಿಜೆಪಿಗೆ ನಿದ್ದೆ ಕೆಡಿಸಿತ್ತು. ಇದರಿಂದ ಕೊನೆಗಳಿಗೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡುವಂತೆ ಪ್ರಚಾರ ಮತ್ತು ಹಣ ನೀಡಿತು. ತೋರಾ ಎಂಬ ಪ್ರದೇಶ ಬಿಜೆಪಿಯ ಭದ್ರಕೋಟೆ. ಅಲ್ಲಿ ಅದಕ್ಕೆ ದೊರಕಿದ ಮತಗಳು 20 ಕ್ಕೂ ಕಡಿಮೆ.

ಪ್ರಥಮ ಬಾರಿಗೆ ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷದ ಚಿಹ್ನೆಯಿಂದ ಸ್ಪರ್ಧೆ ನೀಡಿದ್ದು ಪಕ್ಷದ ಶಕ್ತಿಯನ್ನು ತೋರಿಸಿಕೊಡಲು ಸಾಧ್ಯವಾಯಿತು. ಇದು ನಮ್ಮ ರಾಜಕೀಯ ಶತ್ರುಗಳಿಗೆ ಶಾಕ್ ನೀಡಿದೆ. 1293 ಮತಗಳು ಪಕ್ಷಕ್ಕೆ ಸಿಕ್ಕಿವೆ. ಎರಡನೇ ಸ್ಥಾನ ಪಡೆದ ಬಿಜೆಪಿಗೆ ಕಳೆದ ಬಾರಿ ಎರಡು ಸಾವಿರಕ್ಕೂ ಹೆಚ್ಚು ಮತ ಸಿಕ್ಕಿದ್ದ ಇಲ್ಲಿ ಈ ಬಾರಿ 1056 ಮತಬಿದ್ದಿವೆ. ಇಲ್ಲಿ ಕಾಂಗ್ರೆಸ್ ಗೆಲವು ಸಾಧಿಸಿದ್ದರೂ ಅದು ಗೆಲುವಲ್ಲ. ಅದು ಈ ಪ್ರದೇಶದಲ್ಲಿ ಬಿಜೆಪಿ ಬಗ್ಗೆ ಇದ್ದ ರೋಷ ಮತ್ತು ಬಿಜೆಪಿಯ ಕುತಂತ್ರರದಿಂದ ಕಾಂಗ್ರೆಸ್ ಗೆಲ್ಲುವಂತಾಯಿತು.

ಏನೇ ಆದರೂ ಆ ಪ್ರದೇಶದಲ್ಲಿ ಉತ್ತಮ ಸಂಪರ್ಕ ಸಿಕ್ಕಿದೆ, ಎಲ್ಲಾ ಜನವಿಭಾಗವನ್ನು ಪಕ್ಷ ಅರ್ಥಮಾಡಿಕೊಳ್ಳುವುದರಲ್ಲಿ ಗೆದ್ದಿದೆ. ಮುಂದೆ ಬಹಳ ಉತ್ತಮ ರೀತಿಯಲ್ಲಿ ಪಕ್ಷ ಬೆಳೆಯಲು ಸಹಾಯವಾಗಲಿದೆ.

- ಪೀಟರ್ ಲೋಬೋ

......ಸಾಲದ ಬಲೆಯಲ್ಲಿ ರೈತರು

ಪುಟ 7 ರಿಂದ

ಸಮಯ ಬೇರೆ ಮೊದಲೇ ಕುಗ್ಗಿದ ಬೆಲೆಯಿರುತ್ತದೆ. ಅದರಲ್ಲೂ ಚೀಲಕ್ಕೆ 10 ರೂ ಬಿಡಬೇಕಲ್ಲಾ, ರೈತ ಮನಸ್ಸಿನಲ್ಲಿಯೇ ಚಡಪಡಿಸುತ್ತಾನೆ. ಮಾರುಕಟ್ಟೆಯಲ್ಲಿ ಯಥೇಚ್ಛ ಲಾಭ ಬರುವವರೆಗೆ ಗೋಡೌನ್‌ನಲ್ಲಿ ಕೂಡಿಡುತ್ತಾನೆ ಇಲ್ಲವೇ 20 ರೂಗಳ ಹೆಚ್ಚುವರಿ ಬೆಲೆಗೆ ಮಾರಾಟ ಮಾಡುತ್ತಾನೆ. ರೈತರಿಂದ ಖರೀದಿಸುವಾಗ ತೂಕ ಹಾಕುವಾಗ ಹಮಾಲರ ಜೇಬಿಗೆ 100 ರೂ ಭಕ್ಷೀಸು ಕೊಟ್ಟು ಚೀಲಕ್ಕೆ 5-10 ಕೆ.ಜಿ ಹೆಚ್ಚುವರಿ ಬರುವಂತೆ ಜಗ್ಗಿಸುತ್ತಾನೆ ಕಂಡರೂ ಕಾಣದಂತೆ ರೈತ ಚಡಪಡಿಸುತ್ತಾನೆ ಬಾಜು ಚೀಲಕ್ಕೆಂದು ಮತ್ತೆರಡು ಕೇಜಿ ಕಡಿಯುತ್ತಾನೆ. ಸಾಲತೀರಿ ಉಳಿದ ಹಣವನ್ನು ಕೂಡಲೇ ರೈತನಿಗೆ ನೀಡದೇ ಬಂಡವಾಳವಾಗಿ 2-3 ತಿಂಗಳು ಬಳಸುತ್ತಾನೆ. ಇದಕ್ಕೆ ಬಡ್ಡಿ ಇಲ್ಲ ಹೀಗೆ ಇಷ್ಟೆಂದು ಪರಿಮಿತಿಯಿಲ್ಲ! ಲಾಭದ ಮೇಲೆ ಲಾಭ ಒಬ್ಬನೇ ಒಬ್ಬ ಬಡಪಾಯಿ ರೈತನಿಂದ 6-7 ಹಂತಗಳ ಲಾಭ ಪಡೆಯುತ್ತಾನೆ.

ಹೀಗೆ ಸಾಲಕ್ಕೆ ಕೈಯೊಡ್ಡಿದ ರೈತನನ್ನು ಹಿಂಡಿ ಹಿಪ್ಪೆಮಾಡಿ ಬಂಡವಾಳವನ್ನು ರಾಶಿ ಹಾಕಿಕೊಳ್ಳುವ ಜನ ಗ್ರಾಮಾಂತರದಲ್ಲಿ ಪ್ರಬಲರಾಗುತ್ತಿದ್ದಾರೆ. ಪ್ರತಿ ಗ್ರಾಮಪಂಚಾಯ್ತಿ ಪ್ರದೇಶದಲ್ಲಿ ಒಬ್ಬರು ಇಲ್ಲವೇ ಇಬ್ಬರು ಈ ಹೊಸ ಸೂರೆಕೋರ ಬಕಾಸುರರು ಬೆಳೆದು ಬರುತ್ತಿದ್ದಾರೆ. ಮರೆಯದಿರಿ, ಕಳಪೆದಾಸ್ತಾನು ಮಾರಿ ಸೂಪರ್ ಲಾಭವೂ ಇಲ್ಲದಿಲ್ಲ. ರೈತರು ಖರೀದಿಸುವ ದಾಸ್ತಾನಿನ ಮೇಲೆ ಗರಿಷ್ಠ ಮಾರಾಟದ ಬೆಲೆ ನಮೂದಿಸಲಾಗಿರುತ್ತದೆ. ಕನಿಷ್ಠ ಲಾಭಕ್ಕಿಂತ ಎಷ್ಟು ಶೇಕಡಾಲಾಭವೋ?

ಪ್ರತಿ ಎಕರೆಗೆ ವಿವಿಧ ರೀತಿಯ ಲಾಭಗಳಿಂದ 2500 ರಿಂದ 3 ಸಾವಿರ ಲಾಭಹೊಡೆಯುವ ತಿಮಿಂಗಲಗಳು ಪ್ರತಿವರ್ಷ 15 ರಿಂದ 30 ಲಕ್ಷ ಲಾಭ ಸಂಪಾದನೆ ಮಾಡುವರೆಂದರೆ ನಂಬಲಸದಳವಲ್ಲವೇ. ಬೇಕಾದರೆ "ಕೋಷ್ಠಕ-2 ನೋಡಿರಿ.

ಹೊಸ ಆಮದು ರಪ್ತು ನೀತಿಯಿಂದ ಕಳೆದ 6-8 ವರ್ಷಗಳಿಂದ ವರ್ಷಕ್ಕಿಂತ ವರ್ಷ ಯಥೇಚ್ಛವಾಗಿ ಬೆಳೆಗಳ ಬೆಲೆಗಳು ಕುಸಿಯುತ್ತಿರುವಾಗ ಮನಸ್ಸೇಚ್ಛೆ ಲೂಟಿ ಹೊಡೆಯುವ ಬಕಾಸುರರ ರುದ್ರ ನರ್ತನ ನಡೆದಿರುವಾಗ ಸಾಲದ ಬಲೆಯಿಂದ ಹೊರಬರಲು ಸಾಧ್ಯವೇ?.

ಬಕಾಸುರರು ಆರ್ಥಿಕವಾಗಿ ಪ್ರಬಲವಾಗುತ್ತಿದ್ದಂತೆ ಬಂಡವಾಳಶಾಹಿ ಭೂಮಾಲಿಕರು ರಾಜಕೀಯ ಪಕ್ಷಗಳ ತಾಲೂಕಿನ ಜಿಲ್ಲೆಯ ಮುಖಂಡರ ಸ್ಥಾನ ಪಡೆಯುತ್ತಿದ್ದಾರೆ. ಲಕ್ಷಾಂತರ ಹಣಸುರಿದು ಜಿಲ್ಲಾ ಪಂಚಾಯತ್ ತಾಲೂಕಾ ಪಂಚಾಯತ್ ಸ್ಥಾನ ಪಡೆಯುತ್ತಿದ್ದಾರೆ. ಸಾವಿರಾರು ರೂಪಾಯಿ ಖರ್ಚುಮಾಡಿ ಪೋಲಿಸ್ ಅಧಿಕಾರಿಗಳನ್ನು ಬೆಂಬಲಿಗರಾಗಿ ಮಾಡಿಕೊಳ್ಳುತ್ತಿದ್ದಾರೆ. ಪ್ರತಿ ತಿಂಗಳು ಸಾವಿರಾರು ಖರ್ಚುಮಾಡಿ ಸಣ್ಣದಾಗಿ ಗೂಂಡಾ ಪಡೆ ಸೃಷ್ಟಿಸುತ್ತಿದ್ದಾರೆ. ಮಾತ್ರವಲ್ಲಾ ಜನ ಬಲಕ್ಕಾಗಿ ಲಕ್ಷಾಂತರ ಹಣ ಚೆಲ್ಲಿ ಜಾತಿ ಸಂಘಗಳ ಸಭೆ ನಡೆಸಲು ಸಾಮೂಹಿಕ ವಿವಾಹ ನಡೆಸಲು ಮುಂದಾಗುತ್ತಿದ್ದಾರೆ. ತಲೆ ಎತ್ತಿ ಎದುರಿಸಿ ನಿಲ್ಲುವ ವಿರೋಧದ ರಾಜಕೀಯ ಮಾಡುವ ಜನರೆಲ್ಲಾ ಇವರನ್ನು ಕಂಡರೆ ಮುದುರಿಕೊಳ್ಳುವುದಿದೆ. ಹೌದು ಇದೊಂದು ಅಪಾಯಕಾರಿ ಬೆಳವಣಿಗೆ.

ಹೊರಬರಲು ಸಾಧ್ಯವಿದೆ

ಸಹಕಾರಿ ಸಂಘಗಳು - ಬ್ಯಾಂಕುಗಳ :ಗ್ರಾಮ ಪಂಚಾಯತ್ ತಾಲೂಕಾ ಪಂಚಾಯತ್ ನೆರವಿನೊಂದಿಗೆ ಗ್ರಾಮಗಳಲ್ಲಿ ಗೋಡಾನುಗಳನ್ನು ನಿರ್ಮಿಸಿ ರೈತರ ಮಾಲು ಅಡವಿಟ್ಟು ಕೊಂಡು ಸಾಲ ನೀಡಲು ಯಾಕೆ ಮುಂದಾಗುತ್ತಿಲ್ಲ. ಹಾಗೇ ಬಕಾಸುರರು ಖರೀದಿಸುವ ಹಾಗೆ ಸಹಕಾರಿ ಸಂಘಗಳ ರೈತರ ಮಾಲನ್ನು ಖರೀದಿಸಿ ಲಾಭ ಮಾಡಿಕೊಳ್ಳಲು ಯಾಕೆ ಮುಂದಾಗುತ್ತಿಲ್ಲ!



ಮುಂದಾಗಬೇಕು ತೂಕದ ಯಂತ್ರಗಳ ಮೂಲಕವೇ ತೂಕ ಹಾಕುವ ಕ್ರಮಕೈಗೊಳ್ಳಬೇಕು. ಎಲ್ಲಾ ಬಡ ರೈತರನ್ನು ಸಹಕಾರಿ ಸಾರ್ವಜನಿಕ ಸಾಲದ ಜಾಲದೊಳಗೆ ಸೆಳೆಯುವ ಕ್ರಮವಾಗಬೇಕು. ಈಗಿನ ಸಾಲದ ಮೇಲಿನ ಬಡ್ಡಿಯನ್ನು ಕಡಿಮೆ ಮಾಡಬೇಕು. ಬೆಂಬಲ ಬೆಲೆಗಿಂತ ದರಗಳು ಕುಸಿದಲ್ಲಿ ಖರೀದಿಸಲು ಸರ್ಕಾರಿ ಸಂಸ್ಥೆಗಳು ಬಲಗೊಳ್ಳಬೇಕು. ಅನಗತ್ಯ ಆಮದನ್ನು ಕೈ ಬಿಡಬೇಕಾಗಿದೆ.ಬೆಳೆ ವಿಮೆ ಜಾರಿಗೆ ತರಬೇಕು. ಕಳಪೆ ದಾಸ್ತಾನಿನ ಮೇಲೆ ಪರಿಣಾಮಕಾರಿ ಕ್ರಮಕೈಗೊಳ್ಳಬೇಕು. ಸಹಕಾರಿ ರಂಗ ಬೆಳೆದು ರೈತರ ಮಾಲು ಖರೀದಿಸಿ ಅಂತರ್ರಾಷ್ಟ್ರೀಯ ಸ್ಪರ್ಧೆಗಿಳಿಯುವಂತೆ ಕ್ರಮ ಕೈಗೊಳ್ಳಬೇಕಾಗಿದೆ. ಇದಕ್ಕಾಗಿ ಸಂಕೋಲೆಗಳಿಂದ ಹೊರಬರಲು ರೈತರು ಹೋರಾಡದೆ ವಿಧಿಯಿಲ್ಲ. ○

ಸಾಲದ ನೊಗದಿಂದಾಗಿ ನೇಗಿಲ ನೊಗ ಸ್ವತಃ ಹೊತ್ತಿರುವ ರೈತರು

ಕೋಷ್ಟಕ-2

ಒಬ್ಬವ್ಯಾಪಾರಿ ಸುಮಾರು 100 ರಿಂದ 150 ರೈತರಿಗೆ ಇಲ್ಲವೇ ಕನಿಷ್ಠ 500 ಎಕರೆ ಭತ್ತದ ಬೆಳೆಗೆ ಸಾಲ ನೀಡಿ ವಿವಿಧ ರೀತಿಯಲ್ಲಿ ಪಡೆಯುವ ಆದಾಯ ಈ ತೆರನಾಗಿದೆ.

ಕ್ರಸಂ	ವಿವರ	ಹಣ
1.	ತಲಾ ಎಕರೆಗೆ ಹಾಕುವ 8 ಚೀಲ ಗೊಬ್ಬರದಿಂದ ಸಾಮಾನ್ಯ ಲಾಭ 8X500X10 500 ಎಕರೆ ಪ್ರದೇಶದಿಂದ	40,000-00
2.	ಸಾಲ ರೂಪದಲ್ಲಿ ಪಡೆಯುವ ರೈತನಿಗೆ ಚೀಲಕ್ಕೆ ಕನಿಷ್ಠ 15 ರೂ ಹೆಚ್ಚುವರಿ ಲಾಭ 15X500X8	60,000-00
3.	ಕ್ರಿಮಿನಾಶಕದಲ್ಲಿನಲಾಭ ಶೇ 50 ತಲಾ ಎಕರೆಗೆ ಕನಿಷ್ಠ 2000 ನ ಕ್ರಿಮಿನಾಶಕ ಬಳಸುವುದೆಂದರೂ 2000X50X50	5,00,000-00
	4. ಬೀಜದ ಮೇಲಿನ ಲಾಭ 10% ಎಂದರೂ ಬೀಜದ ಬೆಲೆ ಕೆ.ಜಿಗೆ 500 ಆದರೇ 50X500	25,000-00
5.	ಒಟ್ಟು ಬೀಜ ಗೊಬ್ಬರ ಕ್ರಿಮಿನಾಶಕ ಪಡೆದ ಸಾಲಗಾರನಿಂದ ಮೊತ್ತದ ಮೇಲೆ 6 ತಿಂಗಳ ಬಡ್ಡಿ (ಬಡ್ಡಿದರವು ತಿಂಗಳಿಗೆ 3 ರೂ ನಂತೆ ನೂರು ರೂಗಳಿಗೆ) ಪ್ರತಿ ಏಕರೆಗೆ ರೈತ ಪಡೆಯುವ ಸಾಲ	
	1. ಗೊಬ್ಬರಕ್ಕೆ 8 ಚೀಲಕ್ಕೆ-	4,800-00
	2. ಕ್ರಿಮಿನಾಶಕಕ್ಕೆ-21,000-00	
	3. ಬೀಜಕ್ಕೆ	500-00
		6500-00
	ಬಡ್ಡಿ- 6500X6X3	1170-00
	ಒಟ್ಟು 500 ಎಕರೆಯಿಂದೆ 1170X500 25,85,00	5,85,000-00
6	ಭತ್ತ ಖರೀದಿಸುವಾಗ ಮಾರುಕಟ್ಟೆ ದರಕ್ಕಿಂತ 10 ರೂ ಕಡಿಮೆ ದರ ಪಡೆಯುವುದರಿಂದ ತಲಾ ಎಕರೆಗೆ 35 ಚೀಲದಂತೆ 500 ಎಕರೆಗೆ 500X35X10	1,75,000-00
7.	ತೂಕದಲ್ಲಿನ ಮೋಸದಿಂದ ಕನಿಷ್ಠ 3 ಕೆಜಿ ಮತ್ತು 2 ಕೆಜಿ ಬಾಜು, ಚೀಲದ ತೂಕ ವೆಂದು 5 ಕೆ.ಜಿ. ಕಳೆದುದರಿಂದ 35X500	17,500
	35X5X500-57,500 ಕೆ. ಜಿ ಕಡಿತದಿಂದ 87,500X5-00	4,75,000-00
8.	ಮಾರಾಟದಿಂದ ಸಿಗುವ ಲಾಭ ಕನಿಷ್ಠ 10 ರೂನಂತೆ ಕೆಲವೊಮ್ಮೆ ಚೀಲಕ್ಕೆ 50 ರೂ ವರೆಗೆ ಲಾಭ ಬರುವುದು 10X35X500	1,75,000-00
	ಒಟ್ಟು:	20,35,000-00
9.	ಮಾಲಿಕನ ಖರ್ಚು	
	1. ಅಂಗಡಿಬಾಡಿಗೆ-2000X6	12,000
	2. ಗುಮಾಸ್ತರಿಬ್ಬರಿಗೆ ಸಂಬಳ-200X13X2-	24,000
	3. ಫೋನ್ ಬಿಲ್-200X6	12,000
	4: ಬಂಡಾವಾಳದ ಮೇಲಿನ ಬಡ್ಡಿ-	3,000.00
	ತಿಂಗಳಿಗೆ 2 ರೂನಂತೆ ನೂರಕ್ಕೆ ತಿಂಗಳಿಗೆ	3,48,000
	5 ಮಾಲಿಕನ ಖರ್ಚು	87.00
	ಇತರೆ 430-000	4,00,00-00
10	ಆದಾಯ:	20,35,000-00
	4,35,00ದ-00	16,0000-00
11.	ಒಟ್ಟು ವಾರ್ಷಿಕ ಆದಾಯ 16,000-000	32,000-000
12.	ಷರಾ:	
	1 ಲಾರಿಬಾಡಿಗೆ ಮಾರುಕಟ್ಟೆಯ ಅಂಗಡಿಯಲ್ಲಿ ಕಮೀಷನ್ ಪಡೆಯುವುದು ಸೇರಿಸಿಲ್ಲ	
	2 ತೂಕದಲ್ಲಿ ಕೆಲವೊಮ್ಮೆ ಹಮಾಲರು ಜಗ್ಗಿದರೆ 8ಕೆ.ಜಿ. ವರೆಗೆ ರೈತನಿಗೆ ಲಾಸ್ ಆಗುತ್ತದೆ	
	3 ರೈತನಿಗೆ ಹಣವನ್ನು ಕೂಡಲೇ ಕೊಡಲಾಗುವುದಿಲ್ಲ ಅದನ್ನು ಬಂಡ ವಾಳವಾಗಿ ಕನಿಷ್ಟ 2-3 ತಿಂಗಳು ಮಾಲೀಕ ಬಳಸುತ್ತಾನೆ ಅದಕ್ಕೆ ಬಡ್ಡಿ ಕೊಡುವುದಿಲ್ಲ.	

ಮನುಷ್ಯ ಇತರ ಮನುಷ್ಯರೊಂದಿಗೆ ಸಂಪರ್ಕ ಕಡಿದುಕೊಂಡು ಒಂಟಿಯಾಗಿ ಬಾಳಲಾರ, ಮನುಷ್ಯ ಸಂಘಜೀವಿ, ಆತ ಸಂಘದಲ್ಲಿ ಬದುಕುತ್ತಾನೆ, ಸಂಘಗಳನ್ನು ಕಟ್ಟುತ್ತಾನೆ. ಆದರೆ ಹೊರ ಪ್ರಪಂಚದೊಂದಿಗೆ ಯಾವ ಸಂಪರ್ಕವೂ ಇಲ್ಲದೆ, ಕನಿಷ್ಟ ನಾಗರಿಕ ಸೌಲಭ್ಯಗಳೂ ಇಲ್ಲದೆ, ದುರ್ಗಮವಾದ ಗಿರಿಶಿಖರಗಳ ಮಧ್ಯೆ, ಭೇದಿಸಲಾಗದ ಅರಣ್ಯದ ನಡುವೆ ಬದುಕುತ್ತಿರುವ ಮಾನವ ನಡುಗಡ್ಡೆಗಳು ನಮ್ಮ ದೇಶದಲ್ಲಿ ಇಂದಿಗೂ ಕಾಣಸಿಗುತ್ತವೆ. ಅಂತಹ ಒಂದು ಜನಸಮುದಾಯದ ಬದುಕನ್ನು ಪರಿಚಯಿಸಿಕೊಳ್ಳಲು ಬನ್ನಿ ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲೂಕಿಗೆ.

ಜೊಯಿಡಾದಿಂದ ಕಾರವಾರಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು 8 ಕಿ.ಮಿ. ಕ್ರಮಿಸಿದರೆ ನೀವು ತಲಪುವುದು ಕಿರುವತ್ತಿ ಎಂಬ ಗ್ರಾಮವನ್ನು ಅಲ್ಲಿಯೇ ಬಲಕ್ಕೆ ಕಾಲ್ದಾರಿಯಂತಿರುವ ಕಚ್ಚಾ ರಸ್ತೆಯೊಂದು ನಿಮ್ಮ ಕಣ್ಣಿಗೆ ಬೀಳುತ್ತದೆ. ಬೇಸಿಗೆಯಲ್ಲಾದರೆ ನಿಮಗೆ ಅಷ್ಟೇನು ತೊಂದರೆಯಾಗದು. ಮಳೆಗಾಲದಲ್ಲಾದರೆ ಮಾತ್ರ ನಿವು ಈ ರಸ್ತೆಯ ಅಡ್ಡವಾಗಿ ಅಲ್ಲಲ್ಲಿ ಹರಿಯುವ ಹಳ್ಳಗಳನ್ನು ದಾಟಿ ಹೋಗುವುದು ಸಾಧ್ಯವಿಲ್ಲ. ರಸ್ತೆಗುಂಟ ನಡೆಯುತ್ತಾ ಹೋದಂತೆ ಇದು ಅರಣ್ಯ ಗುತ್ತಿಗೆದಾರರ ಲಾರಿಗಳು ಒಡಾಡಿ ನಿರ್ಮಿತವಾದ ರಸ್ತೆ ಎಂದೂ ಮನುಷ್ಯ ಸಂಚಾರಕ್ಕಾಗಿ ನಿರ್ಮಾಣಗೊಂಡ ರಸ್ತೆ ಅಲ್ಲವೆಂದೂ ತಿಳಿಯುತ್ತದೆ. ಮ್ಯಾಂಗನೀಸ್ ಗಣಿಗಳಿಂದ ಸಂಗ್ರಹಿಸಿದ ಅದಿರನ್ನು ದಾಂಡೇಲಿಯ ಕಾರ್ಖಾನೆಗೆ ಸಾಗಿಸುತ್ತಿದ್ದ ಲಾರಿಗಳ ಸಂಚಾರ ಈಗ ನಿಂತಿದೆ. ದಟ್ಟವಾದ ಅರಣ್ಯದೊಳಗೆ ಹೆಬ್ಬಾವಿನಂತೆ ಹಾದು ಹೋಗುವ ರಸ್ತೆಯಲ್ಲಿ ಸುಮಾರು 5 ಕಿ.ಮೀ. ದೂರ ಬಂದಂತೆ ಜನವಸತಿಯ ಕುರುಹುಗಳನ್ನು ಕಾಣಲು ನಿಮಗೆ ಆಶ್ಚರ್ಯವಾಗದೆ ಇರಲಾರದು. ಸುಮಾರು ಇಪ್ಪತ್ತು ಇಪ್ಪತ್ತೈದು ಮನೆಗಳ ಸಮೂಹವೇ ಮುಡೆ ಗ್ರಾಮ. ಅಲ್ಲಿಂದ ಇನ್ನೂ 5 ಕಿ.ಮಿ. ಕಾಡನ್ನು ಭೇದಿಸಿ ನಡೆದರೆ ನೀವು ಕಾರ್ಟೋಳ್ಳಿ ಗ್ರಾಮವನ್ನು ತಲುಪುವಿರಿ. ಇದು ಕೂಡಾ ಸುಮಾರು 30 ಮನೆಗಳ ಸಮೂಹ. ಮುಡೆ ಮತ್ತು ಕಾರ್ಟೋಳ್ಳಿ ಗ್ರಾಮಗಳಲ್ಲದೆ ಕರಂ ಜೋಯಿಡಾ, ಕಸಂಬಾ, ದಾಮಣ ಕುಣಗಿ, ಬುಳಬುಳಿ, ಮಾರ್ಲಿ, ವರ್ಘೇಲಿ ಮತ್ತು ಖಾನಗಾಂವ ಎಂಬ ಚಿಕ್ಕ ಚಿಕ್ಕ ಗ್ರಾಮಗಳು ನಾಗೋಡಾ ಗ್ರಾಮಪಂಚಾಯತಿಯ ವ್ಯಾಪ್ತಿಗೆ ಸೇರಿವೆ. ಹಾಗೇ ಬಾಜರಕೋನ ಗ್ರಾಮ ಪಂಚಾಯತಿ ಅಡಿಯಲ್ಲಿ ಡಿಗ್ಗಿ, ಬೊಂಡೇಲಿ, ಶಿಸೆ, ದೂದಮಳಿ, ಸುಲಾವಳಿ, ಕರಂಜಾ, ಕಣ್ಣೇ, ಮಹೆರೆ, ಪಾಡಸರ್, ಸೋಲೆ ಮತ್ತು ಕಿಂದಳೆ ಎಂಬ ಗ್ರಾಮಗಳಿವೆ. ಈ ಎಲ್ಲಾ ಗ್ರಾಮಗಳ ಒಟ್ಟು ಜನ ಸಂಖ್ಯೆ ಸುಮಾರು 7 ರಿಂದ 8 ಸಾವಿರ.

ಗಿರಣಿಗೆ ಹೋಗಲು 20 ಕಿ.ಮಿ. ನಡೆಯಬೇಕು

ಕನಿಷ್ಠ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿ, ಭಯಾನಕ ವನ್ಯಪ್ರಾಣಿಗಳ ಸಹವಾಸದಲ್ಲಿ ಬದುಕುತ್ತಿರುವ ಈ ಜನ ಯಾವಾಗ, ಎಲ್ಲಿಂದ ಮತ್ತು ಯಾಕೆ ಇಲ್ಲಿ ಬಂದು ನೆಲೆಸಿದರು ಎಂಬುದನ್ನು ಹೇಳಲು ಮೊದಮೊದಲ ತಲೆಮಾರಿನವರು ಇಂದು ಜೀವಂತವಾಗಿ ಇಲ್ಲ. ಮರಾಠಿ ಮಿಶ್ರಿತ ಕೊಂಕಣಿ ಭಾಷೆ ಮಾತನಾಡುವ ಇವರು 'ಕುಣಬಿ' ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿದ್ದಾರೆ. ವ್ಯವಸಾಯ ಇವರ ಮುಖ್ಯ ಕಸಬು. ನೂರಾರು ವರ್ಷಗಳ ಹಿಂದೆ ಯಾವುದೋ ಕಾರಣಕ್ಕಾಗಿ ಕಾಡಿನಲ್ಲಿ ಕಾಲಿಟ್ಟ ಇವರ ಪೂರ್ವಜರು ಇಲ್ಲಿಯ ಕಾಡು ಭೂಮಿಯನ್ನು ವ್ಯವಸಾಯ ಭೂಮಿಯನ್ನಾಗಿ ಪರಿವರ್ತಿಸಿ ಜೀವನ ನಡೆಸುತ್ತಾ ಬಂದಿದ್ದಾರೆ. ಬೆಟ್ಟಗಳ ನಡುವಿನ ಸಣ್ಣ ಸಣ್ಣ ಗದ್ದೆಗಳಲ್ಲಿ ಮಳೆಯ ನೀರನ್ನು ಹಾಗೂ



ಕಾನನದೊಳಗೊಂದು ಮಾನವ ನಡುಗಡ್ಡೆ

ಬೆಟ್ಟದ ಝರಿಗಳಿಂದ ಹರಿಯುವ ನೀರನ್ನು ಬಳಸಿಕೊಂಡು ಇವರು ಭತ್ತ, ಕಬ್ಬು, ಬಾಳೆ ಮೊದಲಾದವುಗಳನ್ನು ಬೆಳೆಯುತ್ತಾರೆ. ಇವರು ಬೆಳೆದ ಫಸಲನ್ನು ಹೆಚ್ಚಾಗಿ ಸ್ವಂತಕ್ಕೆ ಉಪಯೋಗಿಸುತ್ತಾರೆ. ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಕನಿಷ್ಠ ಸೌಕರ್ಯಗಳ ಕೊರತೆಯೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಆಹಾರ ಪದಾರ್ಥಗಳನ್ನು ಬೆಳೆದುಕೊಳ್ಳಬಹುದಾದರೂ, ಬಟ್ಟೆಬರೆ ಮೊದಲಾದ ಇತರ ಜೀವನಾವಶ್ಯಕ ವಸ್ತುಗಳನ್ನು ಕೊಂಡುಕೊಳ್ಳಲು ಹಣ ಬೇಕೆಬೇಕು. ಸುಗ್ಗಿಯ ಸಮಯಕ್ಕೆ ಸರಿಯಾಗಿ ಪಟ್ಟಣದಿಂದ ಬರುವ ವ್ಯಾಪಾರಸ್ಥರ ಏಜೆಂಟರು ಕೊಡುವಷ್ಟಕ್ಕೆ ತಾವು ಬೆಳೆದ ಫಸಲನ್ನು ಇವರು ಮಾರಿಕೊಳ್ಳುತ್ತಾರೆ. ಭತ್ತವನ್ನು ಕುಟ್ಟಿ ಅಕ್ಕಿ ಮಾಡಿಕೊಳ್ಳುವ ಇವರು ಗಿರಣಿಗಳಲ್ಲಿ ಅಕ್ಕಿ ಮಾಡಿಕೊಂಡು ಬರಬೇಕಾದರೆ ಸುಮಾರು 20 ಕಿ.ಮೀ. ದೂರದ ಜೊಯಿಡಾಕ್ಕೆ ಹೊತ್ತುಕೊಂಡು ಹೋಗಬೇಕಾಗುತ್ತದೆ.

ವ್ಯವಸಾಯದ ಜೊತೆಯಲ್ಲಿ ವ್ಯವಸಾಯಕ್ಕೆ ಬೇಕಾಗುವ ದನಕರುಗಳನ್ನು ಇವರು ಸಾಕುತ್ತಾರೆ. ಮಹಿಳೆಯರು ಹುಲ್ಲುಕಡ್ಡಿಗಳಿಂದ ಆಕರ್ಷಕ ಚಾಪೆಗಳನ್ನು ಹೆಣೆಯುತ್ತಾರೆ. ಮಳೆಗಾಲದಲ್ಲಿ ಅಕ್ಕಿಯನ್ನು ಕೆಡದಂತೆ ಇಟ್ಟುಕೊಳ್ಳಲು ಹುಲ್ಲು ಮತ್ತು ಬಾಳೆ ಬಳ್ಳಿಯಿಂದ ಭದ್ರವಾದ ಮುಡಿಗಳನ್ನು ಕಟ್ಟುತ್ತಾರೆ. ಹರಿಯುವ ಝರಿಗಳ ನೀರನ್ನೇ ಕುಡಿಯಲು ಬಳಸುತ್ತಾರೆ. ಹರಿಯುವ ಹಳ್ಳಗಳಿಗೆ ಕಟ್ಟೆಗಳನ್ನು ಕಟ್ಟಿ ನೀರಾವರಿ ಮಾಡಿಕೊಳ್ಳುವ ಸಾಧ್ಯತೆ ಇದ್ದರೂ ಆಳುವವರಿಗೆ ಇದರ ಪ್ರಾಮುಖ್ಯತೆಯ ಅರಿವಾಗಿಲ್ಲ. ಹೀಗಾಗಿ ಇವರು ತಮ್ಮ ಚಿಕ್ಕ ಚಿಕ್ಕ ಹಿಡುವಳಿಗಳಲ್ಲಿ ಮಳೆಯ ನೀರನ್ನು ಅವಲಂಭಿಸಿ ಒಂದು ಬೆಳೆಯನ್ನು ತೆಗೆಯುತ್ತಾರೆ. ಅನಂತರ ಇವರು ಕೂಲಿ ಕೆಲಸ ಹುಡುಕಿಕೊಂಡು ಗೋವಾಕ್ಕೆ ಹೋಗುವುದು ಸಾಮಾನ್ಯವಾಗಿರುತ್ತದೆ.

ಆಸ್ಪತ್ರೆಗೆ 25 ಕಿ.ಮಿ.ನಡುಬೇಕು ಒಂದೆರಡು ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳಿವೆ. ಮಕ್ಕಳಲ್ಲಿ ಅಕ್ಷರಭ್ಯಾಸದ ಆಸಕ್ತಿ ತುಂಬಾ ಇದೆ. ಆದರೆ ಶಿಕ್ಷಕರು ಅಪರೂಪಕಷ್ಟೇ ಕಾಣಿಸಿಕೊಳ್ಳುತ್ತಾರೆ. ಸ್ಕೂಲ್ ಇನ್ಸ್‌ಪೆಕ್ಟರ್ ಇತ್ತ ಸುಳಿಯುವುದೇ ಇಲ್ಲ. ದೂರದ ಪಟ್ಟಣಗಳಲ್ಲಿರುವ ಹಾಸ್ಟೆಲುಗಳಲ್ಲಿ ಉಳಿದುಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುವ ಪ್ರವೃತ್ತಿ ಇತ್ತೀಚೆಗೆ ಕಾಣತೊಡಗಿದೆ. ಕಾರ್ಟೋಳ್ಳಿ ಗ್ರಾಮದ ಪ್ರೇಮಾನಂದ ಕೇಶವ ವೇಳಿಪ್ ಇಲ್ಲಿಯ ಏಕೈಕ ಪಧವೀದರ ಯುವಕ, ಉದ್ಯೋಗ ಸಿಗದೆ ಊರಿನಲ್ಲಿ ಇದ್ದಾನೆ. ಎಸ್.ಎಸ್.ಎಲ್.ಸಿ. ವರೆಗೆ ಓದಿದವರು ಕೆಲವರಿದ್ದಾರೆ. ರಾಜೇಂದ್ರ ವೇಳಿಪ್ ಮತ್ತು ವೆಂಕಟೇಶ್ ವೇಳಿಪ್ ಪಿ.ಯು.ಸಿ. ಎರಡನೇ ವರ್ಷ ಜೋಯಿಡಾದಲ್ಲಿ ಮುಗಿಸಿದ್ದಾರೆ. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ವಿದ್ಯಾರ್ಥಿ ನಾಯಕಿ ಯಮುನಾ ಗಾಂವ್ಕರ್ ಎಸ್.ಎಫ್.ಐ. ಸದಸ್ಯತ್ವ ಮಾಡಲು ಶಾಲೆಗೆ ಬಂದದನ್ನು ರಾಜೇಂದ್ರ ಸ್ಮರಿಸುತ್ತಾನೆ.

ಹಾಸಿಗೆ ಇದ್ದಷ್ಟೇ ಕಾಲು ಚಾಚಿಕೊಳ್ಳಬೇಕೆನ್ನುವ ಮನೋವೃತ್ತಿಯ ಈ ಜನಕ್ಕೆ ಇಲ್ಲೊಂದು ಆಸ್ಪತ್ರೆ ಇದ್ದಿದ್ದರೆ ನಮಗೆ ಇಲ್ಲಿ ಏನು ಕಮ್ಮಿ ಇಲ್ಲ ಎಂದುಕೊಳ್ಳುತ್ತಿದ್ದರು. ಆದರೆ ವೈದ್ಯಕೀಯ ಚಿಕಿತ್ಸೆಗಾಗಿ ಇವರು ಪಡುವ ಕಷ್ಟ ಅಷ್ಟಿಷ್ಟಲ್ಲ. ಒಂದು ಮನೆಯಲ್ಲಿ ಯಾರಾದರೂ ಒಬ್ಬರು ಕಾಯಿಲೆ ಬಿದ್ದರೆ ಇಡೀ ಗ್ರಾಮವೇ ಪರಿಹಾರ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಸಣ್ಣಪುಟ್ಟ ಕಾಯಿಲೆಗಳಿಗೆ ಅವರಲ್ಲಿ ನಾಟಿ ವೈದ್ಯರಿದ್ದಾರೆ. ಆದರೆ ಯಾರಾದರೂ ಗಂಭೀರವಾದ ಕಾಯಿಲೆಗೆ ತುತ್ತಾದರೆ ರೋಗಿಯನ್ನು ಕಂಬಳಿಯಲ್ಲಿ ಸುತ್ತಿಕೊಂಡು ಹತ್ತಾರುಜನ ಹೊತ್ತುಕೊಂಡು ಜೋಯಿಡಾಕ್ಕೆ ತರುತ್ತಾರೆ. ಅನೇಕ ಸಲ ಆಸ್ಪತ್ರೆಗೆ ಸಾಗಿಸುವಾಗ ರೋಗಿಯು ದಾರಿಯಲ್ಲೇ ಅಸುನೀಗುತ್ತಾನೆ. ಈಗೊಂದು ತಿಂಗಳ ಹಿಂದೆ ಕಾರ್ಟೋಳ್ಳಿಯ ಮಹದೇವ ವೇಳಿಪ್ ಅವರ ಹೆಂಡತಿ ತೀವ್ರ ಹೊಟ್ಟೆ ನೋವಿನಿಂದ ಬಳಲಿ ಆಸ್ಪತ್ರೆಗೆ ಹೊತ್ತೊಯ್ಯುವಾಗ ದಾರಿಯಲ್ಲಿಯೇ ತೀರಿಕೊಂಡರು. ಕಳೆದ ಫೆಬ್ರವರಿ ತಿಂಗಳಲ್ಲಿ ವಾಘೇಲಿ ಗ್ರಾಮದ ಕೇಶವ ಸಾವಂತ ಅವರ 15 ವರ್ಷದ ಮಗಳು ಹಾವು ಕಡಿದು, ತಕ್ಷಣ ಚಿಕಿತ್ಸೆ ದೊರೆಯದೆ ಸಾವನ್ನಪ್ಪಿದಳು.



ಅಕ್ಕಿಯ ಮುಡಿಗಳೊಂದಿಗೆ ರೈತ ಸಂಘದ ಮುಖಂಡ ನಾರಾಯಣ ವೇಳೀಪ್

ಶಿಸೇ ಗ್ರಾಮಸ್ಥರು ಇನ್ನೊಂದು ಹೃದಯವಿದ್ರಾವಕ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಸುಮಾರು ಎಂಟು ವರ್ಷಗಳ ಹಿಂದೆ ಅರ್ಜುನ್ ಮಿರಾಸಿ ಅವರ ಮಗಳು ಚೊಚ್ಚಲ ಹೆರಿಗೆಗಾಗಿ ದಿನಗಳನ್ನು ಎಣಿಸುತ್ತಿದ್ದಳು. ಒಮ್ಮಿಂದೊಮ್ಮೆಲೆ ಅಸ್ವಸ್ಥಳಾದ ಗರ್ಭಿಣಿಯನ್ನು ಗೋವಾಕ್ಕೆ ಹೊತ್ತೊಯ್ಯಲು 30 ಜನ ಗ್ರಾಮಸ್ಥರು ಸಿದ್ಧರಾದರು. ಬೆಟ್ಟಗಳನ್ನು ಹತ್ತಿ ಇಳಿದು ಸುಮಾರು 25 ಕಿ.ಮಿ. ದೂರದವರೆಗೆ ನಡೆದು ಸಾವರ್ಡ್ಯಾ ಎಂಬಲ್ಲಿ ಆಸ್ಪತ್ರೆಯೊಂದನ್ನು ತಲಪಿದಾಗ ಗರ್ಭಿಣಿಯ ಹೊಟ್ಟೆಯೊಳಗೆ ಮಗು ಅಸುನೀಗಿದೆ ಎಂದು ತಿಳಿಯಿತು. ಮಗುವನ್ನು ಬೇಗನೆ ಹೊರಗೆ ತೆಗೆಯದಿದ್ದರೆ ತಾಯಿಯ ಪ್ರಾಣಕ್ಕೂ ಅಪಾಯ. ವೈದ್ಯನಿಗೆ ಇವರೆಲ್ಲರು ಅಪರಿಚಿತರಾದರಿಂದ ಶಸ್ತ್ರಚಿಕಿತ್ಸೆ ಮಾಡಲು ವೈದ್ಯ ಒಪ್ಪಲಿಲ್ಲ. ರೋಗಿಯನ್ನು ಹೊತ್ತು ತಂದವರಲ್ಲಿ ಕೆಲವರಿಗೆ ಸ್ಥಳೀಯ ಸಿ.ಐ.ಟಿ.ಯು ಕಾರ್ಮಿಕ ಮುಖಂಡರ ಪರಿಚಯವಿತ್ತು. ಕೂಲಿ ಕೆಲಸಕ್ಕಾಗಿ ಇವರು ಆಗಾಗ ಗೋವಾಕ್ಕೆ ಬರುತ್ತಿದ್ದುದರಿಂದ ಅಸಂಘಟಿತ

ನಿತ್ಯಾನಂದ ಸ್ವಾಮಿ

ಕಾರ್ಮಿಕರನ್ನು ಸಂಘಟಿಸಲು ಕಾರ್ಯಕ್ರಮ ಹಾಕಿಕೊಂಡಿದ್ದ ಗೋವಾದ ಸಿ.ಐ.ಟಿ.ಯು. ಕಾರ್ಮಿಕ ನಾಯಕರಿಗೆ ಇವರ ಸಂಪರ್ಕ ಉಂಟಾಗಿತ್ತು. ಸ್ಥಳೀಯ ಸಿಐಟಿಯು ಮುಖಂಡರಲ್ಲಿ ಒಬ್ಬರಾದ ಸೀತಾರಾಮ ಮಾಂಜ್ರೇಕರ್ ಆಗಮಿಸಿ ವೈದ್ಯನಿಗೆ ಭರವಸೆ ಕೊಟ್ಟ ನಂತರ ಆತ ಶಸ್ತ್ರಚಿಕಿತ್ಸೆ ಮಾಡಿ ಗರ್ಭಿಣಿಯ ಪ್ರಾಣ ಉಳಿಸಿದ. ಜೋಯಿಡಾ ತಾಲೂಕಿನ ಕುಗ್ರಾಮಗಳಲ್ಲಿ ವಾಸಿಸುತ್ತಿರುವ ಈ ಜನಗಳ ಗೋಳಿನ ಕಥೆಯನ್ನು ಕೇಳಿ ತಿಳಿದುಕೊಂಡ ಸಿಐಟಿಯು ಮುಖಂಡರು ದಾಂಡೇಲಿ ಕೈಗಾರಿಕಾ ನಗರದಲ್ಲಿನ ಸಿಐಟಿಯು ಸಂಘಟನೆಯನ್ನು ಸಂಪರ್ಕಿಸಲು ಅವರು ಸಲಹೆ ನೀಡಿದರು. ದಾಂಡೇಲಿ ಸಿಐಟಿಯು ಸಂಘಟನೆಯೊಂದಿಗೆ ಇವರ ಸಂಪರ್ಕ ಉಂಟಾಗುವುದರೊಂದಿಗೆ ಕೊನೆಗಾಣದಂತಿದ್ದ ಇವರ ಬಾಳಿನ ಗೋಳಿಗೆ ದಾರಿಯೊಂದನ್ನು ಕಂಡುಕೊಳ್ಳುವಂತಾಯಿತು.

ಉತ್ತರಕನ್ನಡ ಜಿಲ್ಲೆಯ ಸಿಪಿಐ(ಎಂ) ನ ಹಿರಿಯ ಮುಖಂಡರಾದ ಕಾಂ. ಮಂಜುನಾಥ ಪುಲಕರ ವಿಶೇಷ ಆಸಕ್ತಿವಹಿಸಿ ಅನೇಕ ಸಲ ಈ ಗ್ರಾಮಗಳಿಗೆ ಭೇಟಿ ಕೊಟ್ಟು, ರಸ್ತೆ, ಆಸ್ಪತ್ರೆ ಮೊದಲಾದ ಪ್ರಾಥಮಿಕ ಸೌಲಭ್ಯಗಳಿಗಾಗಿ ಸಂಘಟಿತರಾಗಿ ಹೋರಾಡಲು ಮುಂದೆ ಬರಬೇಕು ಎಂದು ಕೇಳಿಕೊಂಡಾಗ ಇಲ್ಲಿಯ ಜನಗಳ ಮನಗಳಲ್ಲಿ ಕವಿದಿದ್ದ ನಿರಾಶೆಯ ಮೋಡಗಳು ಸರಿದು ಭರವಸೆಯ ಬೆಳಕು ಮೂಡುವಂತಾಯಿತು. ಮುಂದೆ ಇಲ್ಲಿ ಕರ್ನಾಟಕ ಪ್ರಾಂತರೈತ ಸಂಘವನ್ನು ಸ್ಥಾಪಿಸಲಾಯಿತು. ಪುರುಷರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿ ತಮ್ಮಹಕ್ಕುಗಳಿಗಾಗಿ ಹೋರಾಡಲು ಸನ್ನದ್ಧರಾದರು. ತಾಲ್ಲೂಕು ಪಂಚಾಯತಿಗೆ ಮೆರವಣಿಗೆಯೊಂದನ್ನು ಹೊರಡಿಸಿದಾಗ ಹತ್ತಾರು ಗ್ರಾಮಗಳಿಂದ ಸುಮಾರು ಒಂದುಸಾವಿರ ಜನ ಸ್ತ್ರೀ ಪುರುಷರು ಸುಮಾರು 25-30 ಕಿ.ಮಿ. ದೂರದಿಂದ ನಡೆದು ಬಂದು ಉತ್ಸಾಹದಿಂದ ಭಾಗವಹಿಸಿದ್ದರು. ಕರ್ನಾಟಕ ಪ್ರಾಂತರೈತ ಸಂಘದ ಸ್ಥಳೀಯ ಮುಖಂಡರಾದ ರಾಜಾರಾಮ ಗುಡೆ, ಶಾಂತಾಕ್ಷವೇಳೀಪ್, ಪ್ರಕಾಶ ವೇಳೀಪ್, ರಾಮದಾಸ ವೇಳೀಪ್, ನಾರಾಯಣ ವೇಳೀಪ್ ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದರು. ದಾಂಡೇಲಿಯ ಸಿಐಟಿಯು ಕಾರ್ಯಕರ್ತರು ಭಾಗವಹಿಸಿ ಬೆಂಬಲಿಸಿದ್ದರು. ಜಿಲ್ಲಾ ಪಂಚಾಯತಿಗೆ ಸಲ್ಲಿಸಲಾದ ಮನವಿಯಲ್ಲಿ ಸಂಪರ್ಕ ರಸ್ತೆ, ಬಸ್ ಸಂಚಾರ, ವಿದ್ಯುತ್ ಪೂರೈಕೆ, ಆಸ್ಪತ್ರೆ, ಸಮರ್ಪಕ ಪಡಿತರ ವ್ಯವಸ್ಥೆ ಮೊದಲಾದ ಕನಿಷ್ಠ ಸೌಕರ್ಯಗಳಿಗಾಗಿ ಒತ್ತಾಯಿಸಲಾಗಿತ್ತು. ನಿಸರ್ಗದ ಮಡಿಲಲ್ಲಿ ಸರ್ಕಾರಿ ಅಭಿವೃದ್ಧಿ ಕಾರ್ಯಗಳಿಂದ ವಂಚಿತರಾಗಿ ಬದುಕುತ್ತಿರುವ ಈ ಜನಗಳ ಜೀವನದಲ್ಲಿ ಬದಲಾವಣೆ ತರಲು ಅತೀ ಅವಶ್ಯವಿರುವ ಸಂಪರ್ಕ ರಸ್ತೆಗಾಗಿ ಹಣ ಮಂಜೂರಾಗಿದೆ ಎಂಬ ವರದಿ ಇದೆ. ಇದು ಎಚ್ಚೆತ್ತ ಈ ಜನಗಳ ಹೋರಾಟಕ್ಕೆ ಸಿಕ್ಕ ಮೊದಲ ಜಯ.


ಅಭಿವೃದ್ಧಿ ಕಾರ್ಯಗಳಿಗಾಗಿ ಲಕ್ಷಗಟ್ಟಲೆ ರೂಪಾಯಿಗಳು ಈಗ ಗ್ರಾಮ ಪಂಚಾಯತಿಗಳಿಗೆ ಬರುತ್ತಿದ್ದರೂ ಅದರ ದುರುಪಯೋಗವಾಗುತ್ತಿರುವುದು ಸರ್ವೇಸಾಮಾನ್ಯವಾಗಿದೆ. ರೈತಸಂಘದ ಅಡಿಯಲ್ಲಿ ಸಂಘಟಿತರಾದ ಇಲ್ಲಿನ ಜನ ಇಂತಹ ಪ್ರವೃತ್ತಿಯನ್ನು ತಡೆಯಲು ನಿರ್ಧರಿಸಿ ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದರು. ಕಾರ್ಟೋಳ್ಳಿ ಗ್ರಾಮದ ಪ್ರೇಮಾನಂದ ವೇಳೀಪ್ ಅವಿರೋಧವಾಗಿಯೂ ಮುಡೆ ಗ್ರಾಮದ ಶ್ರೀಮತಿ ಪಾರ್ವತಿ ವೇಳೀಪ್ ಅವರು ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದಾರೆ. ದತ್ತಾ ಮಿರಾಸಿ ಮತ್ತು ಪ್ರಭಾಕರ ಮಿರಾಸಿ ಕೆಲವೇ ಮತಗಳ ಅಂತರಗಳಲ್ಲಿ ಸೋತಿದ್ದಾರೆ. ಇಂತಹ ಉತ್ಸಾಹಿ ಕಾರ್ಯಕರ್ತರು ಯುವಕರ ನಡುವೆ ಯುವಜನ ಸಂಘಟನೆಯನ್ನು ಹುಟ್ಟು ಹಾಕುವ ಮೂಲಕ, ಅತ್ಯಂತ ನಿರ್ಲಕ್ಷಕ್ಕೆ ಒಳಗಾದ ಈ ಪ್ರದೇಶದ ಜನತೆಯ ಸಮಸ್ಯೆಗಳತ್ತ ಅಧಿಕಾರ ನಡೆಸುವವರ ಗಮನವನ್ನು ಪರಿಣಾಮಕಾರಿಯಾಗಿ ಸೆಳೆಯಲು ಸಾಧ್ಯವಿದೆ.

ಖಾನ್‌ಗಳು ವಿದೇಶಿ, ಹೃತಿಕ ಸ್ವದೇಶಿ!

ಆರ್‌ಎಸ್‌ಎಸ್ ಹೊಸ ಶೋಧನೆ

ಈ ಭೂಮಂಡಲದಲ್ಲಿರುವ ಪ್ರತಿಯೊಂದನ್ನು ಹಿಂದು ಮತ್ತು ಹಿಂದೂಯೇತರ ಅಥವಾ ಸ್ವದೇಶಿ ಮತ್ತು ವಿದೇಶಿ ಎಂದು ವಿಶ್ಲೇಷಿಸುವ ಆರೆಸ್ಸೆಸ್ ಕಣ್ಣು ಈಗ ಬಾಲಿವುಡ್‌ನ ಮೇಲೆ ಬಿದ್ದಿದೆ.

ಆರೆಸ್ಸೆಸ್‌ನ ಮುಖವಾಣಿ ಪತ್ರಿಕೆ 'ಪಾಂಚಜನ್ಯ' ದ ಇತ್ತೀಚಿನ ಸಂಚಿಕೆಯ ಮುಖಪುಟ ಲೇಖನವು ಹಿಂದಿ ಚಿತ್ರರಂಗದ 'ಖಾನ್' ನಾಯಕರ ನಟರ ಬಗ್ಗೆ ವಿಷ ಕಾರಿದೆ. 'ಕಟುತಾ ಕೆ ಬೀಂಚ್' ಅರ್ಥಾತ್ ಕಹಿತನದ ಬೀಜಗಳು ಎಂಬ ತಲೆಬರಹದಡಿಯಲ್ಲಿ ಪ್ರಕಟವಾಗಿರುವ ಈ ಲೇಖನದಲ್ಲಿ ಈ 'ವಿದೇಶಿ' ಖಾನ್‌ಗಳಾದ ಶಾರುಖ್ ಖಾನ್, ಅಮಿರ್ ಖಾನ್, ಸಲ್ಮಾನ್ ಖಾನ್ ಮತ್ತು ಸೈಫ್‌ಗಳು ಹೇಗೆ 'ಸ್ವದೇಶಿ' ಪ್ರತಿಭೆಗಳ ಅವಕಾಶಗಳನ್ನು ಕಿತ್ತುಕೊಳ್ಳುತ್ತಿದ್ದಾರೆ ಎಂದು ವಿವರಿಸಲಾಗಿದೆ. ಈಚೆಗೆ ಹೃತಿಕ್ ರೋಷನ್‌ಭಾರಿ ಜನಪ್ರಿಯಗೊಳ್ಳುತ್ತಿರುವುದು ಆರೆಸ್ಸೆಸ್ ಪ್ರಕಾರ ಈ ಮುಸ್ಲಿಂ ಪಟಾಲಮ್ಮಿಗೆ ಹಿಂದೂ ಪ್ರತ್ಯುತ್ತರವಾಗಿದೆ!




'ಪಾಂಚಜನ್ಯ' ದ ಲೇಖನವು ಬಾಲಿವುಡ್‌ನಲ್ಲಿ ಈ ಖಾನ್ ವರ್ಸಸ್ ಹೃತೀಕ್ ಕದನ ನಡೆಯುತ್ತಿದೆಯೆಂದು ಹೇಳುತ್ತದೆ. ಅದರ ಪ್ರಕಾರ ಈ ಖಾನ್‌ಗಳ ಗುಂಪಿಗೆ ಭೂಗತ ಜಗತ್ತಿನ ದೊರೆ ದಾವೂದ್ ಇಬ್ರಾಹಿಂ ನ ಬೆಂಬಲವಿದೆ. ಅಷ್ಟು ಮಾತ್ರವಲ್ಲ ಹಿಂದೂ ನಾಯಕ ನಟರ ಚಿತ್ರಗಳನ್ನು ವಿದೇಶಗಳಲ್ಲಿ 'ಫ್ಲಾಪ್' ಮಾಡುವ ಸಲುವಾಗಿ ಒಂದು ದೊಡ್ಡ ಅಂತರ್ರಾಷ್ಟ್ರೀಯ ಪಿತೂರಿಯೇ ನಡೆಯುತ್ತಿದೆ!

ದುಬೈಯ ಭೂಗತ ಜಗತ್ತು ಹಿಂದಿ ಚಿತ್ರ ನಿರ್ಮಾಪಕರ ಮೇಲೆ ಒತ್ತಡ ಹೇರುವ ಮೂಲಕ ಖಾನ್ ಗಳನ್ನೇ 'ಹೀರೋ' ಆಗಿ ತೆಗೆದುಕೊಳ್ಳುವಂತೆ ಮಾಡುವಲ್ಲಿ ಸಫಲವಾಗುತ್ತಿದೆಯೆಂದು ಕೂಡಾ ಈ ಲೇಖನದಲ್ಲಿ ಹೇಳಲಾಗಿದೆ.

ಈಚೆಗೆ ಹಿಂದಿ ಚಿತ್ರರಂಗದ ಈ ಹಿಂದೂ-ಮುಸ್ಲಿಂ ಜಗಳದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಕೂಡಾ ಸೇರಿಕೊಂಡಿವೆ ಎಂಬುದು ಆರೆಸ್ಸೆಸ್ ಅನಿಸಿಕೆ. ಈಚೆಗೆ ಬಂದಿರುವ 'ಕೋಕಾ-ಕೋಲಾ' ಮತ್ತು 'ಪೆಪ್ಸಿ' ಜಾಹೀರಾತುಗಳನ್ನು ಉದಾಹರಣೆ ಯನ್ನಾಗಿ ಕೊಡಲಾಗಿದೆ.

'ಪಾಂಚಜನ್ಯ'ದ ಪ್ರಕಾರ ಈ ಪಾನೀಯಗಳ ಜಾಹೀರಾತುಗಳು ಉತ್ತರ ಭಾರತದಲ್ಲಿ ಕೋಮುಭಾವನೆಗಳನ್ನು ಕೆರಳಿಸುತ್ತಿವೆಯಂತೆ, ಒಂದು ಕೋಮಿನವರು 'ಕೋಕಾ-ಕೋಲಾ' ಮಾತ್ರ ಕುಡಿಯುತ್ತಾರಂತೆ, ಇನ್ನೊಂದು ಕೋಮಿನವರಿಗೆ 'ಪೆಪ್ಸಿ' ಮಾತ್ರ ಇಷ್ಟವಾಗುತ್ತದೆಯಂತೆ!



ಹಿಂದಿ ಚಿತ್ರರಂಗವನ್ನು ಜಾತಿ, ಧರ್ಮಗಳ ಆಧಾರದ ಮೇಲೆ ಒಡೆಯುವ ತಂತ್ರವನ್ನು ಈ ಹಿಂದೆಯೂ ಮಾಡಲಾಗಿತ್ತು. ಶ್ರೇಷ್ಠ ನಟ ದಿಲೀಪ್ ಕುಮಾರ್ ಮೇಲೆ ಶಿವಸೇನೆ ನಡೆಸಿದ್ದ ಹಲ್ಲೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈಗ ಆರೆಸ್ಸೆಸ್ ಕೂಡಾ ಅದೇ ತಂತ್ರವನ್ನು ಕೈಗೆತ್ತಿಕೊಂಡಿದೆ. ಆದರೆ ಆರೆಸ್ಸೆಸ್‌ಗೆ ಬಹುಶಃ ತಿಳಿದಿರಲಿಕ್ಕಿಲ್ಲ ಶಾರುಖ್‌ಖಾನ್‌ನ ಪತ್ನಿ ಹಿಂದು ಎಂಬುದು: ಹಾಗೆಯೇ ಸಲ್ಮಾನ್‌ಖಾನ್‌ನ ತಾಯಿ ಹಿಂದೂ ಎಂಬುದು. ಮತ್ತು ಕೊನೆಯದಾಗಿ ಸೈಫ್‌ಅಲಿ ಖಾನ್‌ನ ತಾಯಿ ಮತ್ತು ಹೆಂಡತಿ ಇಬ್ಬರೂ ಹಿಂದೂ ಎಂಬುದು!

ಇಲ್ಲದ ಭೂತವನ್ನು ಇದೆಯೆಂದು ಗುಲ್ಲೆಬ್ಬಿಸಿ ಜನರ ಹಾದಿ ತಪ್ಪಿಸುವುದು ಆರೆಸ್ಸೆಸ್ ನ ಎಂದಿನ ಕಾರ್ಯತಂತ್ರ. ಆದರೆ ಬಾಲಿವುಡ್‌ನ ಜನ ಅಷ್ಟು ಮೂರ್ಖರಲ್ಲವಲ್ಲ!

ಕೃಪೆ: ಜನವಾಹಿನಿ

ಉತ್ತರ ಕನ್ನಡದಲ್ಲೊಂದು ಸಾಹಿತ್ಯ ಸಮ್ಮೇಳನ

ಸಾಹಿತ್ಯ ಸಮ್ಮೇಳನ ಎನ್ನುವುದು ಒಂದು ಸಂಪ್ರದಾಯದ ತಿರುವು ಪಡೆದುಕೊಂಡಾಗ ಅದು ಮಹತ್ವ ಕಳೆದುಕೊಳ್ಳುತ್ತದೆ. ಮತ್ತು ಸಾಹಿತ್ಯ ಸಮ್ಮೇಳನ ಕೂಡ ರಾಜಕಾರಣಿಗಳ ಆಡುಂಬೊಲ ಆದಾಗ ನಿಜವಾದ ಸಾಹಿತ್ಯಾಸಕ್ತರು ಹಿಂದೆ ಸರಿಯುವಂತಾಗುತ್ತದೆ. ಈ ರೀತಿಯಲ್ಲಿ ಸಾಹಿತ್ಯ ಸಮ್ಮೇಳನ ಜನಾಕರ್ಷಣೆಯನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ ಜ್ಞಾನವಂತರು ಯೋಚಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಒಂದು ವರದಿ ಇದೆ. ಇದು ಉತ್ತರ ಕನ್ನಡದ್ದು . ಆದರೆ ಸಾಮಾನ್ಯವಾಗಿ ಅನೇಕ ಜಿಲ್ಲಾ ರಾಜ್ಯ ಸಮ್ಮೇಳನ ಸ್ಥಿತಿ ಕೂಡ ಇದೇ ಆಗಿದೆ.

ಮೊನ್ನೆ ಮೊನ್ನೆ ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಉತ್ತರ ಕನ್ನಡಜಿಲ್ಲಾ 11ನೇ ಸಾಹಿತ್ಯ ಸಮ್ಮೇಳನ ಸಿದ್ಧಾಪುರದಲ್ಲಿ ನಡೆಯಿತು. ಹಲವರ ಟೀಕೆಗೆ ಕೆಲವರ ಪ್ರಶಂಸೆಗೆ ಪಾತ್ರವಾದ ಈ ಸಾಹಿತ್ಯ ಸಮ್ಮೇಳನ ಸಮ್ಮೇಳನ ನಡೆಸುವುದುಯಾಕೆ? ಅದರ ಅಗತ್ಯತೆ ಇದೆಯೇ? ಎನ್ನುವ ಮೂಲಭೂತ ಪ್ರಶ್ನೆಯನ್ನು ಹುಟ್ಟುಹಾಕಿತು. ಜಿಲ್ಲೆಯ ರಾಜ್ಯದ ಜನ ಗಂಭೀರವಾಗಿ ಈ ಪ್ರಶ್ನೆಯ ಕುರಿತು ಚಿಂತಿಸಲು ಬೇಕಾದ ಸಂಗತಿಗಳನ್ನು ಇದು ಒದಗಿಸಿಕೊಟ್ಟಿತು.

ಅರ್ಥ ಕಳೆದುಕೊಳ್ಳುತ್ತಿರುವ ಸಮ್ಮೇಳನಗಳು

ಸದ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾಗಿರುವವರು ಶ್ರೀ ಟಿ.ಕೆ. ಮಹಮೂದ್. ಇವರು ಹಿಂದೆ ಸಮಾಜವಾದಿ ಹೋರಾಟದಲ್ಲಿ ಭಾಗವಹಿಸಿದವರು. ಪಿ.ಎಸ್.ಪಿ. ಪಕ್ಷದಲ್ಲೂ ದುಡಿದವರು. ಪತ್ರಕರ್ತರಾಗಿ ಸಂಪಾದಕರಾಗಿ, ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿ ಕೆಲಸವನ್ನು ಮಾಡುತ್ತಲೇ ಸಾಹಿತ್ಯದ ಬಗ್ಗೆಕೂಡ ಒಲವನ್ನು ನಿಲುವನ್ನು ರೂಢಿಸಿಕೊಂಡವರು. ಹಾಗೆ ನೋಡಿದರೆ ಇವರು ಅಧ್ಯಕ್ಷರಾಗಿದ್ದಾಗಲೇ ಪ್ರತಿವರ್ಷ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಆದರೆ ಅದು ನಿಜವಾದ ಅರ್ಥದಲ್ಲಿ ಸಮ್ಮೇಳನ ಆಗದಿರುವುದು ಮಾತ್ರ ದುರ್ದೈವದ ಸಂಗತಿ.

ಹಾಗೆ ನೋಡಿದರೆ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಾರಂಭಆಗಿದ್ದೇ ಕನ್ನಡದತನವನ್ನು ಘಂಟಾ ಘೋಷವಾಗಿ ಹೇಳುವ ಮೂಲಕ ಭಾಷಾಭಿಮಾನ ಪ್ರದೇಶಭಿಮಾನವನ್ನು ಬೆಳೆಸಲು ಕನ್ನಡಿಗರಲ್ಲಿ ಸ್ವಾಭಿಮಾನದ ಸೆಲೆಯನ್ನು ಉಕ್ಕಿಸಲು. ಕರ್ನಾಟಕದ ಸಂಘಗಳು ಕೂಡ ಇಂಥಹ ಕಾರ್ಯವನ್ನು ಚೆನ್ನಾಗಿಯೇ ನಿರ್ವಹಿಸಿದ್ದವು. ಆದರೆ ಇಷ್ಟು ವರ್ಷಗಳ ನಂತರ ಕೂಡ ಕನ್ನಡದ ಸ್ಥಿತಿ ಬದಲಾಗಿಲ್ಲ (ಬದಲಾವಣೆಯನ್ನು ಸಂಪೂರ್ಣ ತಿರಸ್ಕರಿಸುತ್ತಿಲ್ಲ) ಹಾಗಾಗಿಯೇ ಕನ್ನಡ ಕ್ರಿಯಾ ಸಮಿತಿ ಕನ್ನಡ ಕಾವಲು ಸಮಿತಿ ಗಡಿನಾಡ ಕನ್ನಡ ಸಮಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳು ಇಂದು ಕೆಲಸಮಾಡುತ್ತಿವೆ. ಕನ್ನಡ ಸಾಹಿತ್ಯ ಸಮ್ಮೇಳನಗಳು ಯಶಸ್ವಿ ಆಗದಿರುವುದರಿಂದಲೇ ಈ ಎಲ್ಲಾ ಸಂಸ್ಥೆಗಳನ್ನು ಖಾಸಗಿಯಾಗಿ ಮತ್ತು ಸರ್ಕಾರ ಸ್ಥಾಪಿಸಬೇಕಾಯಿತು.

ಉತ್ತರ ಕನ್ನಡದಲ್ಲಿ ಕೂಡ ಕನ್ನಡ ತನ್ನದೇ ಆದ ಸಮಸ್ಯೆಯಿಂದ ಕೂಡಿದೆ. ಗೋವಾ ಗಡಿ ತಾಲೂಕಾಗಿರುವ ಕಾರವಾರದಲ್ಲಿ ಕನ್ನಡ ಬರದಿದ್ದರೂ ವ್ಯವಹರಿಸಲು ಏನೂ ಸಮಸ್ಯೆಇಲ್ಲ. ಕರಾವಳಿ ತಾಲೂಕುಗಳಲ್ಲಿ ಕೊಂಕಣಿಯ ಪ್ರಭಾವ ಇದೆ. ಆದರೆ ಕನ್ನಡದ ಬೆಳವಣಿಗೆಗೇನೂ ಅದು ಅಡ್ಡಿ ಮಾಡುತ್ತಿಲ್ಲ. ಸಹಕಾರಿ ಮನೋಭಾವ ಇದೆ. ಇತ್ತೀಚೆಗೆ ಕೊಂಕಣಿ ಭಾಷಾ ಅಲ್ಪಸಂಖ್ಯಾತರ ಜಿಲ್ಲೆ ಎಂದು ಘೋಷಣೆ ಮಾಡಿ ಎಂದು, ಕೊಂಕಣಿ ನಾಡೆಂದು ಪ್ರತ್ಯೇಕ ಮಾಡ ಬೇಕು ಎಂದು "ಕಾರವಾರವನ್ನು ಗೋವಾಕ್ಕೆ ಸೇರಿಸ ಬೇಕು" ಎಂದು ಅಪಸ್ವರಗಳೆದ್ದಿವೆ ಅಷ್ಟೇ. ಇಂಥ ಬೇಡಿಕೆಗೆ ಜಿಲ್ಲೆಯ ಪ್ರಜ್ಞಾವಂತ ಕೊಂಕಣಿಗರ ಬೆಂಬಲ ಇಲ್ಲ.

ಆದರೂ ಇದನ್ನು ಸಂಪೂರ್ಣ ಕಡೆಗಣಿಸುವಂತಿಲ್ಲ. ಸೂಕ್ತ ಸಂದರ್ಭದಲ್ಲಿ ಸೂಕ್ತ ಉತ್ತರ ಕೊಡಲೇಬೇಕು. ಈ ಉತ್ತರ ಯಾರೋ ಒಬ್ಬರು ಕೊಡುವಂತದ್ದಲ್ಲ ಇದು ಪ್ರತಿಯೊಬ್ಬನ(ಪ್ರತಿಯೊಬ್ಬನ ಎನ್ನುವುದು ಆದರ್ಶವಾದರೂ ಪ್ರಜ್ಞಾವಂತ ಎನ್ನುವ ಅರ್ಥದಲ್ಲಿ ಪರಿಗಣಿಸಬಹುದು) ಪ್ರಜ್ಞೆಯಾಗಿ ಬರಬೇಕು, ಭಾಷಾಭಿಮಾನವಾಗಿ ಬರಬೇಕು, ಸ್ವಾಭಿಮಾನದ ಪ್ರತೀಕವಾಗಿ ರೂಪ ತಳೆಯಬೇಕು. ಇದಕ್ಕೆ ಆ ರೀತಿಯ ಸಾಂಸ್ಕೃತಿಕ ನಿರ್ಮಾಣದ ಅಗತ್ಯ ಇದೆ. ಈ ಸಾಂಸ್ಕೃತಿಕ ವಾತಾವರಣವನ್ನು ಕಟ್ಟಿಕೊಡುವ ಕೆಲಸವನ್ನು ಸಾಹಿತ್ಯ ಸಮ್ಮೇಳನ ಮಾಡಬೇಕು. ಇಲ್ಲದಿದ್ದರೆ ಸಮ್ಮೇಳನ ವ್ಯರ್ಥ. ಈ ದೃಷ್ಟಿಯಿಂದ ಅವಲೋಕಿಸಿದರೂ ಉ.ಕ. ಜಿಲ್ಲೆಯಲ್ಲಿ ನಡೆದ ಸಮ್ಮೇಳನ ಅರ್ಥಕಳೆದುಕೊಂಡಿದೆ.

ದಾರಿತಪ್ಪಿದ ಸಮ್ಮೇಳನ

ಹತ್ತಾರು ಜನ ರೊಂದಿಗೆ ಬಂದ ಅಧ್ಯಕ್ಷರ ಮೆರವಣಿಗೆ ಇಲ್ಲಿಯ ಕನ್ನಡದ ಚಿಂತಾಜನಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತಿತ್ತು. ಗೋಷ್ಠಿಗಳಲ್ಲೆಲ್ಲಾ 50 ತಲೆಗಳನ್ನು ಮೀರಿ ಇರಲಿಲ್ಲ. ಒಟ್ಟು ಮಾರಾಟವಾದ ಪುಸ್ತಕಗಳು 5000/- ರೂಗಳನ್ನು (ಮೂರು ಪುಸ್ತಕ ದಂಗಡಿಗಳಿಂದ) ದಾಟಲಿಲ್ಲ ಪುಸ್ತಕದಂಗಡಿಯವರು ಪರ ಜಿಲ್ಲೆಯಿಂದ ಬಂದು ಪುಸ್ತಕ ಇಳಿಸಲು ಪ್ರದರ್ಶಿಸಲು ಬೇಕಾದ ಸಾಮಾನ್ಯ ವ್ಯವಸ್ಥೆಯೂ ಇಲ್ಲದಿರುವ ಸ್ಥಿತಿಗೆ ಬೇಸತ್ತು ಇನ್ನು ಯಾವುದೇ ಕಾರಣಕ್ಕೂ ಇಲ್ಲಿಗೆ ಬರಬಾರದು ಎಂದು ನಿರ್ಣಯಿಸಿರಬೇಕು.

ಇಡೀ ಸಮ್ಮೇಳನಕ್ಕೆ ಉತ್ಸಾಹದ ಕಳೆಯೇ ಇರಲಿಲ್ಲ. ಜಿಲ್ಲೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಿಗೆ ಆಮಂತ್ರಣ ಪತ್ರಿಕೆ ಇಲ್ಲ. ಅತಿಥಿಗಳಿಗೇ ಆಮಂತ್ರಣ ಪತ್ರಿಕೆ ಕಳುಹಿಸದಷ್ಟು ಆಲಸ್ಯ ನಿರುತ್ಸಾಹ ಸಮ್ಮೇಳನವನ್ನು ಕಾಡಿತ್ತು. ಇವೆಲ್ಲ ತಯಾರಿಯಲ್ಲಾದ ಲೋಪದೋಷಗಳೆಂದು ಒಪ್ಪಿಕೊಂಡರೂ ಇನ್ನೊಂದು ತೀರಾ ಗಂಭೀರವಾದ ತಪ್ಪು ಜರುಗಿದೆ.

ಕರೆಯೋಲೆಯಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಿಂದ ರಾಷ್ಟ್ರಧ್ವಜಾರೋಹಣ ಎಂದೂ ಪರಿಷತ್ತಿನ ರಾಜ್ಯಾಧ್ಯಕ್ಷರಿಂದ ಪರಿಷತ್ತಿನ ಬಾವುಟ (ಕನ್ನಡ ಬಾವುಟ) ಏರಿಸುವ ಕಾರ್ಯಕ್ರಮ ಮುದ್ರಣ ಗೊಂಡಿದ್ದರೂ ಈ ಎರಡು ಕಾರ್ಯಕ್ರಮ ನಡೆಯಲೇ ಇಲ್ಲ ಎಂದ ಮೇಲೆ, ಇದು ಸಮ್ಮೇಳನದ ಮಹತ್ವದ ಅಂಗವೆಂದೂ ತಿಳಿದುಕೊಳ್ಳುವ ಸ್ಥಿತಿ ಇಲ್ಲದಿದ್ದ ಮೇಲೆ ಸಮ್ಮೇಳನದ ಸಂದೇಶವನ್ನು ಹೇಗೆ ಅವರು ಜನರ ಮಧ್ಯೆಬಿಡಬಲ್ಲರು ಹೇಳಿ? ಸಮ್ಮೇಳನಕ್ಕಾಗಿ ಹಣಕೊಟ್ಟವರು ಸ್ವಾಗತಸಮಿತಿಯ ಸದಸ್ಯರು ಇಂಥ ಅವ್ಯವಸ್ಥಿತ ಸಮ್ಮೇಳನದಲ್ಲಿ ಪಾಲ್ಗೊಂಡರೆ ಎಷ್ಟು ನಿರಾಶರಾಗ ಬೇಕಾಗಬಹುದು ಎಂದರೆ ಇನ್ನು ಮುಂದೆ ಹಣಕೊಡುವುದನ್ನೇ ಬಿಟ್ಟುಬಿಡಬಹುದು.

ಸಾಹಿತ್ಯ ಸಮ್ಮೇಳನದಲ್ಲಿ ಮಠಾಧೀಶರಿಗೇನು ಕೆಲಸ?

ಅನಾರೋಗ್ಯ ಪೂರ್ಣವಾದ ಇನ್ನೊಂದು ಬೆಳವಣಿಗೆಯೆಂದರೆ ಯಾವುದೋ ಸ್ವಾಮಿಯನ್ನು ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಕರೆದದ್ದು. ಉಳಿದೆಲ್ಲ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಇಂತಹ ಕೆಟ್ಟ ಸಂಪ್ರದಾಯ ಇವೆ. ಆದರೆ ನಮ್ಮ ಜಿಲ್ಲೆಯಲ್ಲೆ ಮಾತ್ರ ಈ ವರೆಗೆ ಅದು ಇರಲಿಲ್ಲ. ಅಥವಾ ಇದೊಂದು ಕ್ಷೇತ್ರದಲ್ಲಿ ಮಾತ್ರ ಹಸ್ತಕ್ಷೇಪ, ಪಾಲ್ಗೊಳ್ಳುವಿಕೆ ಇರಲಿಲ್ಲ ಎನ್ನಬಹುದು. ಈ ಸ್ವಾಮಿಗಳಿಗೂ ಸಾಹಿತ್ಯಕ್ಕೂ ಅಂತಹ ಸಂಬಂಧವೇನೂ ಇಲ್ಲ. ಸಾಹಿತ್ಯದ ಬಗ್ಗೆ ತೀರಾ ಆಸಕ್ತಿ ಇದೆ ಎಂದು ಕೆಲವರು ವಾದಿಸಬಹುದು, ಅಥವಾ ಅವರು ಸಾಹಿತ್ಯವನ್ನು ಅಗಾಧವಾಗಿ ಓದಿದ್ದಾರೆ ಎನ್ನಬಹುದು. ಅಷ್ಟೆಲ್ಲಾ ಆಸಕ್ತರು ಅಥವಾ ಓದಿದವರಾದರೆ ಮೊದಲು ಸಮ್ಮೇಳನದಲ್ಲಿ ಪಾಲ್ಗೊಳ್ಳಬೇಕು ಎರಡೂ ದಿನ ಸಾಧ್ಯವಾಗದಿದ್ದರೆ ಒಂದು ದಿನವಾದರೂ ಇದ್ದು, ಚರ್ಚೆಯಲ್ಲಿ ಪಾಲ್ಗೊಳ್ಳಬೇಕು. ಯಾವುದೋ ಮಠದ ಸ್ವಾಮಿ ಎನ್ನುವ ಒಂದೇ ಕಾರಣಕ್ಕೆ (ರಾಜಕಾರಣಿ ಮಂತ್ರಿ ಎನ್ನುವ ಒಂದೇ ಕಾರಣಕ್ಕೆ ಕರೆದಂತೆ) ಇಂಥ ಸಮ್ಮೇಳನದಲ್ಲಿ ಭಾಗವಹಿಸಲು ಕರೆಯುವುದು ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದಲ್ಲ. ಇನ್ನು ಮುಂದೆ ಪ್ರತಿವರ್ಷಕ್ಕೊಂದು ಮಠದ ಸ್ವಾಮಿಯನ್ನು ಕರೆಯುವುದು ಒಂದು ರೂಢಿಯಾಗುವ ಅಪಾಯ ಇದ್ದೇ ಇದೆ. ಸಾಹಿತ್ಯ ಸಮ್ಮೇಳನ ಎಂದ ಕೂಡಲೇ ಯಾವುದೋವುದಾ ಹಿತಾಸಕ್ತಿಗಳಿಗೆ ಒಳಗಾಗುವ ಮೂಲಕ ಮೂಲಧ್ಯೇಯವನ್ನೇ ಮರೆಯುವ ಸಾಧ್ಯತೆಗಳೇ ಇಂದು ಹೆಚ್ಚಾಗಿದೆ. ಉತ್ತರಕನ್ನಡವೂ (ಈವರೆಗೆ ಹೊರತಾದ) ಇಂಥ ಸಾಲಿಗೆ ಸೇರಿದ್ದು ಸಾಹಿತ್ಯಕ್ಕಂತೂ ಒಳ್ಳೆಯದಲ್ಲ. (ರಾಜಕಾರಣಿಗಳು ಭಾಗವಹಿಸಿದ್ದನ್ನು ವಿರೋಧಿಸುತ್ತೇನೆ. ಆದರೂ ಅವರೊಬ್ಬ ಜನಪ್ರತಿನಿಧಿಗಳು ಎನ್ನುವ ಕಾರಣದಿಂದ ಒಪ್ಪಿಕೊಳ್ಳಬಹುದು).

ಹಾಗಾಗಿ ಜಯಂತ ಕಾಯ್ಕಿಣಿಯವರು ಹೇಳಿದ ಐದುವರ್ಷ ಈ ಸಮ್ಮೇಳನ ಪ್ರಶಸ್ತಿ ಸಮಾವೇಶಗಳನ್ನೆಲ್ಲ ನಿಲ್ಲಿಸಿಬಿಡಬೇಕು" ಎನ್ನುವ ವಿಚಾರ ಮುಂದಿನ ವರ್ಷ ಜಿಲ್ಲಾ ಸಮ್ಮೇಳನದ ಅಧ್ಯಕ್ಷರಾಗಬೇಕೆಂದು ಲೆಕ್ಕಾಹಾಕಿಕೊಂಡು ಮುಂದೆ ಕುಳಿತು ಕೊಂಡವರಿಗೆ ಸ್ವಲ್ಪ ಬೇಸರ ಆಗಬಹುದಾದರೂ ಅವರ ಹಿಂದಿನ ವಿಷಾದವನ್ನು ಅರ್ಥಮಾಡಿಕೊಂಡಾಗ ಎಂಥವನೂ ಇದನ್ನು ಬೆಂಬಲಿಸುತ್ತಾನೆ. ಸಮ್ಮೇಳನ ಒಂದು ಜಾತ್ರೆಯಾಗಬೇಕಾಗಿತ್ತು. ಓದುಗರು, ಲೇಖಕ ಜಿಲ್ಲೆಯ ಎಲ್ಲ ಸಾಹಿತಿಗಳು ಕುಟುಂಬದವರು ಒಂದೆರಡು ದಿನ ಮುಖಾ ಮುಖಿಯಾಗುವ ಸಂವಾದಿಸುವ ಒಂದು ಸಂತೋಷದ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿತ್ತು. ಹಿಂದೆಲ್ಲಾ ಸಮ್ಮೇಳನ ಒಂದು ಜಾತ್ರೆಯಾಗುತ್ತಿದೆ ಎಂದು ಬೈಯುತ್ತಿದ್ದರು ಆದರೆ ಇಂದು ಅದು ಜಾತ್ರೆಯೂ ಆಗಲಿಲ್ಲ. ಉತ್ಸಾಹದ ವಾತಾವರಣವೂ ನಿರ್ಮಾಣವಾಗುತ್ತಿಲ್ಲ. ಇಂತಹ ಕಾರ್ಯದಲ್ಲಿ ಸಮ್ಮೇಳನ ಸೋತಿದೆ ಎನ್ನುವ ನೋವು ಜಯಂತ ಕಾಯ್ಕಿಣಿಯವರದು ಮಾತ್ರ ಆಗಿರಲಿಲ್ಲ ಭಾಗವಹಿಸಿದ ಎಲ್ಲಾ ಸಾಹಿತ್ಯಾಸಕ್ತರದೂ ಸಮ್ಮೇಳನವನ್ನು ಗಂಭೀರವಾಗಿ ಪರಿಗಣಿಸಿದ ಎಲ್ಲರದೂ ಆಗಿತ್ತು. ಹಾಗಾಗಿ ಈ ಬಗ್ಗೆ ನಾವೆಲ್ಲ ಕೂತು ಯೋಚಿಸಬೇಕಾಗಿದೆ. ಸರಿತಪ್ಪುಗಳನ್ನು ಲೆಕ್ಕಾಚಾರಹಾಕಿ ತಿದ್ದಿಕೊಳ್ಳಬೇಕಾಗಿದೆ.

ಕೊನೆಯ ಮಾತು-ಸಮ್ಮೇಳನದ ಕರಪತ್ರದಲ್ಲಿ ಹೆಸರಿದ್ದವರೂ ಮಾತ್ರ ಬರುವುದು, ತನ್ನದಿದ್ದಾಗ ಮಾತ್ರ ಒಳಗೆ ಕುಳಿತು ಕೊಳ್ಳುವುದು ಕೆಟ್ಟ ಕ್ರಮಎನ್ನುವುದನ್ನು ಲೇಖಕರು ಅರ್ಥಮಾಡಿಕೊಳ್ಳಬೇಕು. ನಮ್ಮ ಯುವ ಬರಹಗಾರರೂ ಕೂಡ ಸಮ್ಮೇಳನದಲ್ಲಿ ನಾವು ಕಲಿತು ಕೊಳ್ಳುವುದಿದೆ ಎನ್ನುವುದು ಪ್ರಾಮಾಣಿಕವಾಗಿ ಅರ್ಥಮಾಡಿಕೊಳ್ಳಬೇಕು. ಈ ಎಳೆಯ-ಹಿರಿಯ ತಲೆಗಳ ಸಂಗಮ ಆದರೆ ಮಾತ್ರ ಪರಂಪರೆ ಮುಂದುವರಿಯಬಹುದು. ಇದು ರಾಜ್ಯ ಸಮ್ಮೇಳನಕ್ಕೂ ಅನ್ವಯಿಸುತ್ತದೆ. ಈ ಕುರಿತು ಸಾಹಿತ್ಯ ಪರಿಷತ್ತನ್ನೊಳಗೊಂಡು ಇತರರೂ ಚಿಂತಿಸುವುದು ಅವಶ್ಯವಲ್ಲವೇ?

ವಿಠ್ಠಲ ಭಂಡಾರಿ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ